ಐಕ್ಯರಂಗ

10 ಜನವರಿ 1993

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಕೋಮುವಾದದ ವಿರುದ್ಧ 5 ಕೋಟಿ ಸಹಿ

ಜನವರಿ 30ರಂದು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ

ದೇಶಬಾಂಧವರಿಗೆ ರಾಷ್ಟ್ರೀಯ ಏಕತಾ ಆಂದೋಳನ ಸಮಿತಿಯ ಕರೆ

ಮನವಿ

1992ರ ಡಿಸೆಂಬರ್ 6ರ ಘಟನೆ ಇಡೀ ದೇಶವನ್ನು ಗಾಡಾಂಧಕಾರದಲ್ಲಿ ಮುಳುಗಿಸಿತು. ಬಾಬ್ರಿ ಮಸೀದಿಯ ನಾಶ ಮತ್ತು ನಂತರದ ಘಟನೆಗಳು ರಾಷ್ಟ್ರದ ಏಕತೆಯ ಮೇಲೆ ಪಟ್ಟು ಹಿಡಿದು ಮಾಡಿದ ದಾಳಿ. ಈ ದಾಳಿ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ತತ್ವಗಳ ಅಡಿಪಾಯದ ಮೇಲೆ ನಿಂತಿರುವ ಸ್ವತಂತ್ರ ಭಾರತದ ಅಸ್ತಿತ್ವಕ್ಕೆ ಕೊಡಲಿಪೆಟ್ಟು ನೀಡಿದೆ. ಈ ಸಂದರ್ಭದಲ್ಲಿ ರಾಜಕೀಯ ಗದ್ದುಗೆ ಏರಲು ದ್ವೇಷದ ಕಿಚ್ಚು ಹಚ್ಚುತ್ತಿರುವ ಕರಾಳ ಕೃತ್ಯಗಳಿಂದ ನಮ್ಮ ದೇಶವನ್ನು ರಕ್ಷಿಸಬೇಕಾಗಿದೆ.

"ಕೋಮು ಸಾಮರಸ್ಯದ ತತ್ವ ಭಾರತಕ್ಕೆ ಹೊಸತೇನೂ ಅಲ್ಲ, ಈ ತತ್ವ ಸದಾ ದೇಶದ ಸ್ವಾತಂತ್ರ್ಯದ ಆಧಾರ ಸ್ತಂಭವಾಗಿದೆ. ಈ ಆಧಾರ ಸ್ತಂಭವಿಲ್ಲದೆ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಉಳಿಗಾಲವಿಲ್ಲ" ಎಂದು ಗಾಂಧೀಜಿ ಹೇಳಿದ್ದರು.

ಗಾಂಧೀಜಿ ಗುಂಡೇಟಿಗೆ ಬಲಿಯಾಗುವ ಕೇವಲ ಒಂದು ವಾರದ ಮುಂಚೆ 1948ರ ಜನವರಿ 24ರಂದು "ರಾಷ್ಟ್ರದ ಬಹುಸಂಖ್ಯಾತ ಜನಾಂಗವು ಅಧಿಕಾರದ ಮತ್ತಿನಲ್ಲಿ ಅಲ್ಪಸಂಖ್ಯಾತರನ್ನು ತುಳಿದು ಹಿಂದೂ ರಾಷ್ಟ್ರದ ನಿರ್ಮಾಣ ಮಾಡಬಹುದೆಂಬ ನಂಬಿಕೆ ಹೊಂದಿದ್ದರೆ, ಆ ನಂಬಿಕೆ ಹಿಂದೂ ಧರ್ಮ ಹಾಗೂ ಬಹುಸಂಖ್ಯಾತ ಜನಾಂಗಗಳೆರಡನ್ನೂ ನಾಶಗೊಳಿಸುತ್ತದೆ" ಎಂದು ಎಚ್ಚರಿಸಿದ್ದರು.

ಪ್ರತಿಜ್ಞೆ

ರಾಷ್ಟ್ರದ ಏಕತೆಗಾಗಿ ನಾನು ಈ ಪ್ರತಿಜ್ಞೆ ಕೈಗೊಳ್ಳುತ್ತೇನೆ.

ಈ ಭಾರತದ ಪ್ರಜೆಯಾಗಿ ನಾನು ಶಾಂತಿಯುತವಾದ ಒಗ್ಗಟ್ಟಿನಿಂದ ಕೂಡಿದ ಸಮಾನತೆ ಹಾಗೂ ಮಾನವೀಯತೆಯನ್ನು ಎತ್ತಿ ಹಿಡಿಯುವ ಸಂಪದ್ಭರಿತ ಭಾರತವನ್ನು ಪ್ರೀತಿಸುತ್ತೇನೆ. ಆದ್ದರಿಂದ ರಾಜಕೀಯ ಲಾಭಕ್ಕಾಗಿ ಧಾರ್ಮಿಕ ಭಾವನೆ ಕೆರಳಿಸುವ ಎಲ್ಲಾ ಕ್ರಮಗಳನ್ನು ವಿರೋಧಿಸುತ್ತೇನೆ. ಹಾಗೂ ಕೋಮುವಾದವನ್ನು ಬುಡಸಮೇತ ನಿರ್ಮೂಲನ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತೇನೆ.

ನಾನು, ಭಾರತೀಯ ಸಂವಿಧಾನದ ಅಡಿಪಾಯವಾದ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸಲು ನನ್ನನ್ನು ಸಮರ್ಪಿಸುತ್ತೇನೆ.

ನಾನು, ಭಾರತದ ಏಕತೆ ಮತ್ತು ಕೋಮು ಸಾಮರಸ್ಯವನ್ನು ಕಾಪಾಡಿ ಬಲಪಡಿಸಲು ಬದ್ಧನಾಗಿರುತ್ತೇನೆ.

ಜನವರಿ ತಿಂಗಳಲ್ಲಿ ಕೋಮುವಾದದ ವಿರುದ್ಧ ಹೋರಾಡುವ ಪ್ರತಿಜ್ಞೆಗೆ 5 ಕೋಟಿ ಸಹಿ ಸಂಗ್ರಹಿಸುವ ಒಂದು ಸಾಮೂಹಿಕ ಪ್ರಚಾರ ಕಾರ್ಯಕ್ರಮ ಆರಂಭವಾಗುತ್ತಿದೆ. ಮನೆ ಮನೆಗೆ ಹೋಗಿ ಸಂಗ್ರಹಿಸುವ ಈ 5 ಕೋಟಿ ಭಾರತೀಯರ ಸಹಿಯುಳ್ಳ ಮನವಿಯನ್ನು ಭಗತ್ ಸಿಂಗ್ ಹುತಾತ್ಮರಾದ ದಿನವಾದ ಮಾರ್ಚ್ 23ರಂದು ಭಾರತದ ರಾಷ್ಟ್ರಪತಿಗಳಿಗೆ ಸಲ್ಲಿಸಲಾಗುವುದು.

ಗಾಂಧೀಜಿ ಕೋಮುವಾದಿ ಹಂತಕನ ಗುಂಡಿಗೆ ಬಲಿಯಾಗಿ ಹುತಾತ್ಮರಾದ ಜನವರಿ 30 ರಂದು ಬೆಳಿಗ್ಗೆ 11 ಗಂಟೆಗೆ ದೇಶಾದ್ಯಂತ ವಿವಿಧ ಕೇಂದ್ರಗಳಲ್ಲಿ ಸಾಮೂಹಿಕ ಪ್ರತಿಜ್ಞಾ ಸಮಾರಂಭಗಳನ್ನು ಏರ್ಪಡಿಸಲಾಗುವುದು.

ಡಿಸೆಂಬರ್ 19ರಂದು ನವದೆಹಲಿಯಲ್ಲಿ ಸೇರಿದ ಕೋಮುವಾದ-ವಿರೋಧಿ ಸಮಾವೇಶದಲ್ಲಿ ಭಾಗವಹಿಸಿದ 11 ರಾಜಕೀಯಪಕ್ಷಗಳು ಹಾಗೂ 35 ಸಾಮೂಹಿಕ ಸಂಘಟನೆಗಳು ಕೋಮು ಸೌಹಾರ್ದತೆಯ ತೀವ್ರ ಸಾಮೂಹಿಕ ಪ್ರಚಾರ- ಪ್ರಕ್ಷೋಭೆ ನಡೆಸುವ ಉದ್ದೇಶದಿಂದ ರಚಿಸಿದ "ರಾಷ್ಟ್ರೀಯ ಏಕತಾ ಆಂದೋಳನ ಸಮಿತಿ" ಡಿಸೆಂಬರ್ 26ರಂದು ನಡೆಸಿದ ಪ್ರಥಮ ಸಭೆಯಲ್ಲಿ ಈ ಎರಡು ಕಾರ್ಯಕ್ರಮಗಳ ಬಗ್ಗೆ ನಿರ್ಧರಿಸಿದೆ.

ರಾಜ್ಯಮಟ್ಟದಲ್ಲಿಯೂ ಈ ಜನವರಿ ಪ್ರಚಾರ ಕಾರ್ಯಕ್ರಮ ನಡೆಸಲು ಹಾಗೂ ಇತರ ಕಾರ್ಯಕ್ರಮಗಳನ್ನು ನಡೆಸಲು ಆಂದೋಳನ ಸಮಿತಿಗಳನ್ನು ರಚಿಸಬೇಕೆಂದು ರಾಷ್ಟ್ರೀಯ ಸಮಿತಿಯ ಈ ಸಭೆ ಕರೆ ನೀಡಿದೆ.

ಸಿಪಿಐ(ಎಂ)ನ ಎಲ್ಲಾ ಘಟಕಗಳು, ಸಾಮೂಹಿಕ ಸಂಘಟನೆಗಳು ಜನವರಿ ತಿಂಗಳ ಸಾಮೂಹಿಕ ಸಂಪರ್ಕ ಕಾರ್ಯಕ್ರಮದ ಅಂಗವಾಗಿ ಮನೆ ಮನೆಗೆ ಹೋಗಿ ಸಹಿ ಸಂಗ್ರಹಿಸಬೇಕೆಂದು ಸಿಪಿಐ(ಎಂ)ನ ಕೇಂದ್ರ ಸಮಿತಿ ಕರೆ ನೀಡಿದೆ.

ರಾಷ್ಟ್ರೀಯ ಏಕತಾ ಪ್ರಚಾರ ಸಮಿತಿಯು ಅಂಗೀಕರಿಸಿದ ಮನವಿ ಹಾಗೂ ಪ್ರತಿಜ್ಞೆಯನ್ನು ಜತೆಗೆ ಪ್ರಕಟಿಸಲಾಗಿದೆ.

ಕರ್ನಾಟಕ : ಜನವರಿ 26ರಂದು ಕೋಮು ಸೌಹಾರ್ದಕ್ಕಾಗಿ ಮಾನವ ಸರಪಳಿ

ಜನವರಿ 27ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ

ರಾಷ್ಟ್ರೀಯ ಐಕ್ಯತಾ ಆಂದೋಲನ ಸಮಿತಿಯ ಜನವರಿ ತಿಂಗಳಲ್ಲಿ 5 ಕೋಟಿ ಸಹಿ ಸಂಗ್ರಹ ಕರೆಗೆ ಓಗೊಟ್ಟು ಕರ್ನಾಟಕ ರಾಜ್ಯ ಮಟ್ಟದಲ್ಲೂ ಒಂದು ಸಮಿತಿ ಸ್ಥಾಪನೆಯಾಗಿದ್ದು ಜನವರಿ ತಿಂಗಳಲ್ಲಿ ಕೋಮು ಸೌಹಾರ್ದತೆಯ ಪ್ರಚಾರಾಂದೋಳನವನ್ನು ಯಶಸ್ವಿಗೊಳಿಸಲು ಈ ಕೆಳಗಿನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

1. ಈ ಸಮಿತಿಯಲ್ಲಿರುವ ಪಕ್ಷಗಳ, ಸಂಘಟನೆಗಳ ಕಾರ್ಯಕರ್ತರು ಮನೆ- ಮನೆಗೆ ತಂಡಗಳಾಗಿ ಹೋಗಿ ಮನವಿ ಪತ್ರಕ್ಕೆ ಸಹಿ ಪಡೆಯುವುದು.
2. ಜನವರಿ 26ರಂದು ಸಂಜೆ 4.30ಕ್ಕೆ ಸರಿಯಾಗಿ ನಗರ, ಪಟ್ಟಣ ಹಾಗೂ ಇತರ ಕಡೆಗಳಲ್ಲಿ ಮಾನವ ಸರಪಳಿ ನಿರ್ಮಿಸುವುದು.
3. ಜನವರಿ 27ರಂದು ಬೆಂಗಳೂರಿನಲ್ಲಿ ಕೇಂದ್ರ ರ್‍ಯಾಲಿ. ಅಖಿಲ ಭಾರತ ನಾಯಕರು ಇದರಲ್ಲಿ ಭಾಗವಹಿಸುತ್ತಾರೆ.
4. ಜನವರಿ 30ರ ಬೆಳಿಗ್ಗೆ 11.00 ಗಂಟೆಗೆ ಕಾರ್ಖಾನೆ, ಕಚೇರಿ, ಇತರ ಪ್ರದೇಶಗಳಲ್ಲಿ ಪ್ರತಿಜ್ಞಾ ಸ್ವೀಕಾರ.

ಜನವರಿ 5ರಂದು ಜನತಾದಳದ ಕಚೇರಿಯಲ್ಲಿ ಸಭೆ ಸೇರಿ ಈ ಕರೆ ನೀಡಿರುವ ಈ ಸಮಿತಿಯಲ್ಲಿ ಜನತಾದಳ, ಸಮಾಜವಾದಿ ಜನತಾ ಪಕ್ಷ, ಸಿಪಿಐ, ಸಿಪಿಐ(ಎಂ) ಹಾಗೂ ಡಿಎಂಕೆ ಈ ಐದು ರಾಜಕೀಯ ಪಕ್ಷಗಳು ಹಾಗೂ ಸಾಮೂಹಿಕ ಸಂಘಟನೆಗಳು ಮತ್ತು ಪ್ರಗತಿಪರ, ಜಾತ್ಯಾತೀತ ವ್ಯಕ್ತಿಗಳಿದ್ದಾರೆ. ಜಿಲ್ಲಾ, ತಾಲೂಕು ಮಟ್ಟಗಳಲ್ಲಿಯೂ ಇಂತಹ ಸಮಿತಿಗಳನ್ನು ರಚಿಸಿಕೊಳ್ಳಬೇಕೆಂದು ಈ ಸಮಿತಿ ಕರೆ ನೀಡಿದೆ.

ನರಸಿಂಹರಾವ್ ಸರಕಾರ ಕೋಮುವಾದೀ ಒತ್ತಡಕ್ಕೆ ಮತ್ತೊಮ್ಮೆ ತಲೆಬಾಗಿದೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡನೆ

ಬಿ.ಜೆ.ಪಿ. ಆರ್.ಎಸ್.ಎಸ್., ವಿ.ಹೆಚ್.ಪಿ., ಕೂಟದ ಒತ್ತಡಗಳೆದುರು ದೃಢ ನಿಲುವು ತಳೆಯುವಲ್ಲಿ ತಾನು ಅಸಮರ್ಥ ಎಂದು ನರಸಿಂಹರಾವ್ ಸರಕಾರ ಜನವರಿ 7 ರಂದು ಹೊರಡಿಸಿದ ವಿಶೇಷಾಜ್ಞೆಯ ಕೆಲವು ಅಂಶಗಳ ಮೂಲಕ ಮತ್ತೊಮ್ಮೆ ತೋರಿಸಿಕೊಟ್ಟಿದೆ. ಸಂವಿಧಾನವನ್ನು ಎತ್ತಿಹಿಡಿಯುವ ಸಂಕುಚಿತ ಕೋಮುವಾದಿ ಬೇಡಿಕೆಗಳಿಂದ ಜಾತ್ಯತೀತ ನೀತಿಗೆ ಆದ್ಯತೆ ನೀಡುವ ಸಾಮರ್ಥ್ಯ ತನಗಿಲ್ಲ ಎಂದು ಅದು ಮತ್ತೊಮ್ಮೆ ತೋರಿಸಿಕೊಟ್ಟಿದೆ.


ಜನವರಿ 7 ರಂದು ಹೊರಡಿಸಿದ ವಿಶೇಷಾಜ್ಞೆ ಅಯೋಧ್ಯೆಯ ರಾಮಜನ್ಮಭೂಮಿ-ಬಾಬ್ರಿ ಮಸೀದಿ ಪ್ರದೇಶದ ಸುತ್ತಲಿನ 67.703 ಎಕ್ರೆ ಜಮೀನನ್ನು ಪಡೆದಿದೆ. ಹಾಗೂ ಬಾಬ್ರಿ ಮಸೀದಿ-ಪ್ರದೇಶದಲ್ಲಿ ಮಂದಿರವಿತ್ತೇ ಎಂಬ ಸಂವಿಧಾನದ 143 ನೇ ಕಲಮಿನ ಪ್ರಕಾರ ಸುಪ್ರೀಂ ಕೋರ್ಟಿನ ಅಭಿಪ್ರಾಯ ಕೇಳಲಾಗುವುದು. ಸುಪ್ರಿಂ ಕೋರ್ಟಿನ ಅಭಿಪ್ರಾಯಕ್ಕೆ ಕೇಂದ್ರ ಸರಕಾರ ಬದ್ಧವಾಗಿರುತ್ತದೆ. ಅದುವರೆಗೆ ಈ ವಿಶೇಷಾಜ್ಞೆ ಹೊರಡಿಸುವ ಹಿಂದೆ ಇದ್ದ ಸ್ಥಿತಿಯೇ ಮುಂದುವರಿಯುತ್ತದೆ ಎಂದು ಈ ವಿಶೇಷಾಜ್ಞೆ ಹೇಳುತ್ತದೆ.

ಡಿಸೆಂಬರ್ 27 ರಂದು ಕೇಂದ್ರ ಸರ್ಕಾರ ಈ ಬಗ್ಗೆ ಸೂಚನೆ ನೀಡಿದ ದಿನವೇ ಫೈಜಾಬಾದ್ ಜಿಲ್ಲಾ ಆಡಳಿತ ಅಯೋಧ್ಯೆಯಲ್ಲಿ ಕಾನೂನುಬಾಹಿರವಾಗಿ ಬಾಬ್ರಿ ಮಸೀದಿ ಕೆಡವಿ ನಿರ್ಮಿಸಿದ ತಾತ್ಕಾಲಿಕ 'ಮಂದಿರ'ದಲ್ಲಿ 'ದರ್ಶನ' ನೀಡಬೇಕೆಂಬ ಕೋಮುವಾದಿಗಳ ಒತ್ತಾಯಕ್ಕೆ ತಲೆಬಾಗಿದ ಘಟನೆಯೂ ನಡೆದಿತ್ತು. ಬಿ.ಜೆ.ಪಿ. ಕೂಟದ ಕಾನೂನು ಬಾಹಿರ ಚಟುವಟಿಕೆಯನ್ನು ಊರ್ಜಿತಗೊಳಿಸುವ ಫೈಜಾಬಾದ್ ಜಿಲ್ಲಾ ಆಡಳಿತದ ಈ ನಿರ್ಣಯ ಉತ್ತರಪ್ರದೇಶ ಮತ್ತು ಕೇಂದ್ರ ಸರಕಾರ ಒಪ್ಪಿಗೆಯಿಲ್ಲದೆ ಸಾಧ್ಯವಿರಲಿಲ್ಲ ಎಂಬುದು ಸ್ವಯಂ ವೇದ್ಯ. ಆಗಲೇ ಸಿಪಿಐ(ಎಂ), ಇತರ ಎಡಪಕ್ಷಗಳು ಹಾಗೂ ಜಾತ್ಯಾತೀತ ಪಕ್ಷಗಳು ಸರಕಾರ ಮತ್ತೊಮ್ಮೆ ಕೋಮುವಾದಿಗಳಿಗೆ ಹೆದರಿ ಹಿಂಜರಿಯುತ್ತಿದೆ ಎಂದು ಎಚ್ಚರಿಸಿದ್ದರು. ಈ ವಿವಾದ ಇತ್ಯರ್ಥವಾಗುವವರೆಗೆ ವಿವಾದಿತ ಪ್ರದೇಶದಲ್ಲಿಯಾವುದೇ ಧಾರ್ಮಿಕ ಚಟುವಟಿಕೆಗೆ ಅವಕಾಶ ಕೊಡಬಾರದು ಎಂದಿದ್ದರು. ಸುಪ್ರಿಂಕೋರ್ಟಿನ ಅಭಿಪ್ರಾಯವನ್ನು 143 ನೇ ಕಲಮಿನ ಪ್ರಕಾರ ಕೇಳಿದರೆ ಏನೂ ಪ್ರಯೋಜನವಿಲ್ಲ, 138 (2) ಕಲಮಿನ ಪ್ರಕಾರ ಈಗ ಅಲಹಾಬಾದ್ ಹೈಕೋರ್ಟಿನ ಮುಂದಿರುವ ಎಲ್ಲಾ ಕೇಸುಗಳನ್ನು ಸುಪ್ರೀಂ ಕೋರ್ಟಿನ ವಿಶೇಷ ಪೀಠಕ್ಕೆ ವರ್ಗಾಯಿಸಬೇಕು. ಇಲ್ಲವಾದರೆ ಈ ವಿವಾದ ಹಾಗೇ ಉಳಿಯುತ್ತದೆ ಎಂಬ ಬಲವಾದ ಅಭಿಪ್ರಾಯ ವ್ಯಕ್ತಗೊಂಡಿತ್ತು.

ಈ ಬಲವಾದ ಅಭಿಪ್ರಾಯವನ್ನು ಕಡೆಗಣಿಸಿ ಕೊನೆಗೂ ಕೇಂದ್ರ ಸರಕಾರ 143 ನೇ ಕಲಮಿನ ಪ್ರಕಾರವೇ ಸುಪ್ರೀಂ ಕೋರ್ಟಿನ ಅಭಿಪ್ರಾಯ ಕೇಳಲು ನಿರ್ಧರಿಸಿದೆ. ಕೇಂದ್ರ ಸರ್ಕಾರವೇನೊ ಈ ಅಭಿಪ್ರಾಯಕ್ಕೆ ಬದ್ಧವಾಗಿರುವುದಾಗಿ ಹೇಳಿದೆ. ಆದರೆ ಬೇರೆಯುವರು ಈ ಅಭಿಪ್ರಾಯ ತಮ್ಮ ಪರವಾಗಿರದಿದ್ದರೆ ಇದನ್ನು ಒಪ್ಪುವುದಿಲ್ಲ. ಹಾಗೆಂದು ಬಿ.ಜೆ.ಪಿ. ಕೂಟ ಈಗಾಗಲೇ ಸ್ಪಷ್ಟವಾಗಿ ಸಾರಿದೆ. ಹೀಗಿರುವಾಗ ಇದರಿಂದ ಏನು ಉಪಯೋಗ? ಬದಲಿಗೆ 138(2) ಕಲಮಿನ ಪ್ರಕಾರ ಕ್ರಮ ಕೈಗೊಂಡಿದ್ದರೆ ಸುಪ್ರೀಂ ಕೋರ್ಟಿನ ತೀರ್ಪಿಗೆ ಎಲ್ಲರೂ ಬದ್ಧರಾಗಬೇಕಿತ್ತು ಎಂದು ನಾಲ್ಕು ಎಡಪಕ್ಷಗಳು ನರಸಿಂಹರಾವ್ ಸರಕಾರದ ಈ ಕ್ರಮವನ್ನು ಒಂದು ಜಂಟಿ ಹೇಳಿಕೆಯಲ್ಲಿ ಟೀಕಿಸಿದೆ. ಅದೇ ರೀತಿ ವಿವಾದಿತ ಪ್ರದೇಶವನ್ನು ಕೇವಲ ವಶಪಡಿಸಿಕೊಳ್ಳದೆ ಸ್ವಾಧೀನಪಡಿಸಿಕೊಳ್ಳಬೇಕಿತ್ತು. ಈಗ ಆ ಪ್ರದೇಶದ ಮಾಲಕತ್ವದ ಬಗ್ಗೆ ಅನಗತ್ಯ ಕೋರ್ಟುದಾವೆಗಳು ಇರುತ್ತಿರಲಿಲ್ಲ ಎಂದು ಅವು ಅಭಿಪ್ರಾಯಪಟ್ಟಿವೆ.

ನರಸಿಂಹರಾವ್ ಸರಕಾರ ಕೋಮುವಾದಿಗಳಿಗೆ ನೀಡಿರುವ ಈ ರಿಯಾಯ್ತಿಯನ್ನು, ಕೋಮುವಾದಿಗಳೊಡನೆ ರಾಜಿ ಮಾಡಿಕೊಳ್ಳುವ ಸರಕಾರದ ಈ ಇನ್ನೊಂದು ಕ್ರಮವನ್ನು ಬಲವಾಗಿ ಪ್ರತಿಭಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಜಾತ್ಯಾತೀತ ಪಕ್ಷಗಳಿಗೆ, ಪ್ರಜಾಪ್ರಭುತ್ವವಾದಿಗಳಿಗೆ ಕರೆ ನೀಡಿದೆ.

ವಾರದ ನುಡಿ



ಬಾಪೂ ಹಮ್ ಶರ್ಮಿಂದಾ ಹೈಂ
ತೇರೆ ಕಾತಿಲ್ ಜಿಂದಾ ಹೈಂ
(ನಾಚಿಕೆಯಾಗುತ್ತಿದೆ ನಮಗೆ ಬಾಪೂ
ಬದುಕಿದ್ದಾರೆ ನಿನ್ನ ಕೊಲೆಗೈದವರು ಬಾಪೂ)

-ನವದೆಹಲಿಯಲ್ಲಿ ಕೇಳಬರುತ್ತಿರುವ ಜನರ ಘೋಷಣೆ

'ಹಿಂದುತ್ವ' ಶಕ್ತಿಗಳ ದುಷ್ಟ ಆಟ ಸಾಗದಂತೆ ಮಾಡುವ ಐಕ್ಯ ಪ್ರಯತ್ನ ಅಗತ್ಯ



ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಅಯೋಧ್ಯಾ ಘಟನೆಗಳ ಹಿನ್ನೆಲೆಯಲ್ಲಿ ಡಿಸೆಂಬರ್ 23-24 ರಂದು ಸಿಪಿಐ(ಎಂ) ಕೇಂದ್ರ ಸಮಿತಿ ನವದೆಹಲಿಯಲ್ಲಿ ಸಭೆ ಸೇರಿತ್ತು. ಈ ಸಭೆ 'ಹಿಂದುತ್ವ' ಕೂಟದ ಈ ಕರಾಳಕೃತ್ಯವನ್ನು, ಅದನ್ನೆದುರಿಸುವಲ್ಲಿ ನರಸಿಂಹರಾವ್ ವಿಫಲತೆಯನ್ನು, ನಂತರವೂ ಅವರ ಅರೆಮನಸ್ಸಿನ ನಿಲುವನ್ನು ಬಲವಾಗಿ ಖಂಡಿಸುತ್ತಾ, ಸಂಸತ್ತಿನ ಬಿ.ಜೆ.ಪಿ.ಯ ಅವಿಶ್ವಾಸದ ವಿರುದ್ಧ ಮತನೀಡಿದ್ದು, ಬಿ.ಜೆ.ಪಿ. ಸರಕಾರಗಳ ವಜಾ ಇವುಗಳ ಬಗ್ಗೆ ಪಕ್ಷದ ನಿಲುವನ್ನು ಅನುಮೋದಿಸಿತು. ಜನಸಾಮಾನ್ಯರ, ದುಡಿಯುವ ಜನಗಳ ಹಕ್ಕುಗಳ, ಜೀವನ ಮಟ್ಟದ ರಕ್ಷಣೆಯ ಹೋರಾಟಕ್ಕೆ ತಾನು ಬದ್ಧ ಎಂದು ಪುನರುಚ್ಚರಿಸಿತು. ಹಾಗೂ ಜನವರಿ ತಿಂಗಳಲ್ಲಿ ನಡೆಯಲಿರುವ ಪ್ರಚಾರ-ಪ್ರಕ್ಷೋಭೆ ಯಲ್ಲಿ ಸಂಪೂರ್ಣವಾಗಿ ಭಾಗವಹಿಸಿ 'ಹಿಂದುತ್ವ'ದ ಶಕ್ತಿಗಳ ಆಟ ಸಾಗದಂತೆ ಮಾಡಬೇಕೆಂದು ಕರೆ ನೀಡಿತು. ಸಭೆ ನಂತರ ನೀಡಿದ ಪತ್ರಿಕಾ ಹೇಳಿಕೆಯ ಅನುವಾದವನ್ನು ಮುಂದೆ ಕೊಡಲಾಗಿದೆ.

ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಕೆಡಹುವ ಮೊದಲಿನ ಹಾಗೂ ನಂತರದ ಬೆಳವಣಿಗೆಗಳ ಪರಾಮರ್ಶೆ ನಡೆಸಿದ ಕೇಂದ್ರ ಸಮಿತಿ ದೇಶದಲ್ಲೊಂದು ಗಂಭೀರ ಸ್ಥಿತಿ ಏರ್ಪಟ್ಟಿದೆ ಎಂಬ ತೀರ್ಮಾನಕ್ಕೆ ಬಂದಿದೆ. ಬಿ.ಜೆ.ಪಿ.- ಆರ್.-ಎಸ್.ಎಸ್., ವಿ.ಹೆಚ್.ಪಿ., ಕೂಟ ಎಸಗಿದ ಈ ವಿಶ್ವಾಸಘಾತುಕ, ರಾಷ್ಟ್ರ-ವಿರೋಧಿ ಕೃತ್ಯ ನಮ್ಮ ದೇಶದ ಐಕ್ಯತೆಯ ಆಧಾರಕ್ಕೆ ನಮ್ಮ ಸಮಾಜದ ಸಂವಿಧಾನ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಅಡಿಗಲ್ಲಿಗೇ ಗಂಭೀರ ಸವಾಲು ಒಡ್ಡಿದೆ. ಈ ಆಕ್ರಮಣವನ್ನು ಎದುರಿಸಲು, ಬಿ.ಜೆ.ಪಿ. ಆರ್.ಎಸ್.ಎಸ್.-ವಿ.ಹೆಚ್.ಪಿ.ಯ ಮುಂದುವರಿಯುತ್ತಲೇ ಇರುವ ಛಿದ್ರಕಾರಿ ಚಟುವಟಿಕೆಗಳಿಗೆ ತಡೆಯೊಡ್ಡಲು ಎಲ್ಲಾ ದೇಶಪ್ರೇಮಿ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸುವುದು ಬಹಳ ಮಹತ್ವದ ವಿಷಯ ಎಂಬ ಬಗ್ಗೆ ಕೇಂದ್ರ ಸಮಿತಿ ಒತ್ತಿಹೇಳಿದೆ. ದೇಶದ ಮೇಲೆ 'ಹಿಂದೂ ರಾಷ್ಟ್ರ' ಮತೀಯ ಪ್ರಭುತ್ವವನ್ನು ಹೇರಲು ಕಟಿಬದ್ಧರಾಗಿರುವ ಶಕ್ತಿಗಳೊಂದಿಗೆ ಯಾವುದೇ ರಾಜಿಗೆ ಅವಕಾಶ ಇಲ್ಲ.

ಮಸೀದಿಯನ್ನು ರಕ್ಷಿಸಲು ಸುಪ್ರೀಂಕೋರ್ಟ್‌ನ ಆದೇಶದ ಪರಿಪಾಲನೆ ಮಾಡಿಸಲು ಸಂವಿಧಾನವನ್ನು ರಕ್ಷಿಸಲು ತ್ವರಿತ ಹಾಗೂ ನಿರ್ಣಾಯಕ ಕೃತ್ಯಗಳನ್ನು ಕೈಗೊಳ್ಳುವಲ್ಲಿ ವಿಫಲಗೊಂಡಿರುವ ನರಸಿಂಹರಾವ್ ಸರ್ಕಾರದ ಪಾತ್ರವನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಪ್ರಧಾನ ಮಂತ್ರಿಗಳು ಈ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವ ನಿಲುವು ತಳೆದು ಅವು ಅಪರಾಧ ಎಸಗುವ ಕೊಬ್ಬು ತೋರಲು ಅವಕಾಶ ಮಾಡಿಕೊಟ್ಟರು. ಈಗಲೂ ತಾನೂ ಅನುಸರಿಸಿದ ಅಸಮರ್ಥನೀಯ ನಿಲುವನ್ನು ಸಮರ್ಥಿಸಿಕೊಳ್ಳಲು ಪ್ರಧಾನಮಂತ್ರಿಗಳು ಪ್ರಯತ್ನಿಸುತ್ತಿದ್ದಾರೆ.

ಈಗಲೂ ತಾನೂ ಅನುಸರಿಸಿದ ಅಸಮರ್ಥನೀಯ ನಿಲುವನ್ನು ಸಮರ್ಥಿಸಿಕೊಳ್ಳಲು ಪ್ರಧಾನಮಂತ್ರಿಗಳು ಪ್ರಯತ್ನಿಸುತ್ತಿದ್ದಾರೆ.

ಮಸೀದಿ ಕೆಡವಿದ ನಂತರವೂ ಪರಿಸ್ಥಿತಿಯನ್ನು ಎದುರಿಸುವಲ್ಲಿ ಕೇಂದ್ರ ತೋರಿದ ಅರೆ ಮನಸ್ಸಿನ ವರ್ತನೆಯನ್ನು ತೀಕ್ಷ್ಣವಾಗಿ ಖಂಡಿಸಿದ ಕೇಂದ್ರ ಸಮಿತಿ ಕೋಮುವಾದಿಗಳ ಆಕ್ರಮಣವನ್ನು ದಮನಮಾಡಲು, ತಡೆಗಟ್ಟಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ದೃಢತೆಯನ್ನು, ಬದ್ಧತೆಯನ್ನು ಕೇಂದ್ರ ಸರಕಾರ ತೋರಬೇಕು ಎಂದು ಹೇಳಿದೆ.

ಗಂಭೀರ ಸನ್ನಿವೇಶವನ್ನು ಎದುರಿಸಲು ಪೊಲಿಟ್‌ಬ್ಯೂರೋ ಕೈಗೊಂಡ ಕ್ರಮಗಳನ್ನು ಕೇಂದ್ರ ಸಮಿತಿ ಅನುಮೋದಿಸಿತು.

ಅಯೋಧ್ಯೆಯಲ್ಲಿ ಬಿ.ಜೆ.ಪಿ.-ಆರ್.-ಎಸ್.ಎಸ್.- ವಿ.ಹೆಚ್.ಪಿ. ನಡೆಸಿದ ಅತ್ಯಾಚಾರದಿಂದಾಗಿ ದೇಶವೆಲ್ಲಾ ಹಬ್ಬಿದ ಹಿಂಸಾಚಾರ, ಕೋಮುಗಲಭೆಗಳಲ್ಲಿ ಸಾವಿರಾರು ಜನ ಸಾವು, ನೋವು, ಆಸ್ತಿಪಾಸ್ತಿಗಳ ನಷ್ಟವಾಗಿರುವುದಕ್ಕೆ ಕೇಂದ್ರ ಸಮಿತಿ ಆಳ-

ಅಯೋಧ್ಯೆ ಕುರಿತಂತೆ ಬಿ.ಜೆ.ಪಿ.ಯ ನಿಲುವಿಗೆ ವಿರೋಧ, ಮಸೀದಿ ಕೆಡವಿದ್ದನ್ನು ಸಮರ್ಥಿಸಿಕೊಳ್ಳಲು ಅದು ನೀಡುವ ಕಾರಣಗಳನ್ನು ತಿರಸ್ಕರಿಸುವುದು ಇದೇ ಅವಿಶ್ವಾಸ ಠರಾವಿನ ಮೂಲಕ ಸಂಸತ್ತಿನ ಮುಂದಿನ ಏಕೈಕ ಪ್ರಶ್ನೆ.

ವಾದ ದೇಸರ ಹಾಗೂ ಆತಂಕವನ್ನು ವ್ಯಕ್ತಪಡಿಸಿದೆ. ತೊಂದರೆಗೀಡಾದ ಜನಗಳಿಗೆ ಪರಿಹಾರ ನೀಡಲು ಹಾಗೂ ಅವರು ತಮ್ಮ ಸಾಮಾನ್ಯ ಜೀವನವನ್ನು ಮತ್ತೆ ಆರಂಭಿಸಲು ಸಾಧ್ಯವಾಗುವಂತೆ ಎಲ್ಲಾ ನೆರವನ್ನು ಒದಗಿಸಬೇಕೆಂದು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳಿಗೆ ಕರೆ ನೀಡಿದೆ ಸುದ್ದಿ ಮಾಧ್ಯಮದ ಮೇಲೆ, ಪತ್ರಿಕವರದಿಗಾರರ ಮೇಲೆ ಬಿ.ಜೆ.ಪಿ.- ಆರ್.ಎಸ್.ಎಸ್.-ವಿ.ಹೆಚ್.ಪಿ. ಕೂಟದ ಅಮಾನುಷ ದೈಹಿಕ ಹಲ್ಲೆಗಳನ್ನು ಕೇಂದ್ರ ಸಮಿತಿ ಖಂಡಿಸಿದೆ.

ಲೋಕಸಭೆಯಲ್ಲಿ ಸರಕಾರದ ವಿರುದ್ಧ ಬಿ.ಜೆ.ಪಿ. ಅವಿಶ್ವಾಸವನ್ನು ಸೋಲಿಸಲು ಅದರ ವಿರುದ್ಧ ಮತನೀಡಿದ ಪಕ್ಷದ ನಿಲುವನ್ನು ಕೇಂದ್ರ ಸಮಿತಿ ಅನುಮೋದಿಸಿತು. ಅಯೋಧ್ಯೆ ಕುರಿತಂತೆ ಬಿ.ಜೆ.ಪಿ.ಯ ನಿಲುವಿಗೆ ವಿರೋಧ, ಮಸೀದಿ ಕೆಡವಿದ್ದನ್ನು ಸಮರ್ಥಿಸಿಕೊಳ್ಳಲು ಅದು ನೀಡುವ ಕಾರಣಗಳನ್ನು ತಿರಸ್ಕರಿಸುವುದು ಇದೇ ಅವಿಶ್ವಾಸ ಠರಾವಿನ ಮೂಲಕ ಸಂಸತ್ತಿನ ಮುಂದಿನ ಏಕೈಕ ಪ್ರಶ್ನೆ.

ಬಿ.ಜೆ.ಪಿ. ಆಳ್ವಿಕೆ ರಾಜ್ಯ ಸರಕಾರಗಳ ವಜಾಕ್ಕೆ ಸಂಸತ್ತಿನಲ್ಲಿ ಪಕ್ಷ ಬೆಂಬಲ ನೀಡಿದ್ದನ್ನು ಕೇಂದ್ರ ಸಮಿತಿ ಅನುಮೋದಿಸಿತು. ಕೇಂದ್ರ ಸರಕಾರ ಚುನಾಯಿತ ರಾಜ್ಯ ಸರಕಾರಗಳನ್ನು ವಜಾ ಮಾಡಲು ಅತ್ಯಂತ ಪಕ್ಷಪಾತಪೂರ್ಣ ರೀತಿಯಲ್ಲಿ 356 ನೇ ಕಾಲಮನ್ನು ಬಳಸುವುದನ್ನು ಪಕ್ಷ ಸತತವಾಗಿ ವಿರೋಧಿಸುತ್ತಾ ಬಂದಿದೆ. ಆದರೆ ಬಿ.ಜೆ.ಪಿ. ಸರಕಾರಗಳ ವಿರುದ್ಧ ಕೈಗೊಂಡಿರುವ ಕ್ರಮ ಒಂದು ಅತ್ಯಂತ ವಿಶಿಷ್ಟ ಪರಿಸ್ಥಿತಿಯಲ್ಲಿ ಕೈಗೊಂಡದ್ದು. ಬಿ.ಜೆ.ಪಿ.- ಇಡೀ ಸಂವಿಧಾನಕ್ಕೆ ಕಾನೂನಿನ ಆಳ್ವಿಕೆಗೇ ಸವಾಲುಹಾಕಿ ನಿಂತಿತ್ತು. ಈ ರಾಜ್ಯ ಸರಕಾರಗಳ ಬಿ.ಜೆ.ಪಿ. ಮುಖಂಡತ್ವ ಮಸೀದಿ ಕೆಡವಿದ್ದನ್ನು ಸಮರ್ಥಿಸಿಕೊಳ್ಳುತ್ತಿದ್ದವು. ಈ ಉದ್ದೇಶಸಾಧನೆಗೆ ಅಯೋಧ್ಯೆಗೆ ಕರಸೇವಕರ ನ್ನು ಸಂಘಟಿಸಿ ಕಳಿಸುವಲ್ಲಿ ಸಕ್ರಿಯ ಪಾತ್ರವಹಿಸಿದ್ದವು.

ಈ ರಾಷ್ಟ್ರವ್ಯಾಪಿ ಪ್ರಚಾರದಲ್ಲಿ ಪೂರ್ಣವಾಗಿ ಇಡೀ ಪಕ್ಷ ಹಾಗೂ ಎಲ್ಲಾ ಸಾಮೂಹಿಕ ಸಂಘಟನೆಗಳನ್ನು ತಮ್ಮನ್ನು ತೊಡಗಿಸಿಕೊಳ್ಳಬೇಕು, ಈ ಮೂಲಕ ಇನ್ನಷ್ಟು ಕೋಮು ವಿಭಜನೆ, ಛಿದ್ರಕಾರಿ ಭಾವನೆ ಬಿತ್ತುವ ಬಿ.ಜೆ.ಪಿ.-ಆರ್.ಎಸ್.ಎಸ್.-ವಿ.ಹೆಚ್.ಪಿ. ಕೂಟದ ಪ್ರಯತ್ನಗಳನ್ನು ಎದುರಿಸಲು ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಜನವಿಭಾಗಗಳ ಜನಗಳನ್ನು ಅಣಿನೆರೆಸಬೇಕು

ತಮ್ಮನ್ನು ಸಂವಿಧಾನ ಕಾನೂನು ಪರಿಧಿಗಿಂತ ಹೊರಗಿಟ್ಟುಕೊಂಡು ಆರ್.ಎಸ್.-ಎಸ್‌ಗೆ ಸೇರಿದ ಈ ವ್ಯಕ್ತಿಗಳು ಈ ಸರಕಾರಗಳನ್ನು ನಡೆಸುತ್ತಿದ್ದರು. 356 ನೇ ಕಾಲಮಿನಲ್ಲಿ ನೀಡಿರುವ ಅಧಿಕಾರವನ್ನು ಇನ್ನಷ್ಟು ಬಲಗೊಳಿಸಬೇಕೆಂಬ ಪ್ರಧಾನಮಂತ್ರಿಗಳ ಸೂಚನೆಯನ್ನು ಕೇಂದ್ರ ಸಮಿತಿ ಬಲವಾಗಿ ವಿರೋಧಿಸಿತು. ಕೇಂದ್ರ ವಿಫಲತೆಯನ್ನು ಮರೆಮಾಚಲು ಇದೊಂದು ತಂತ್ರ, ಎಂದು ಅದು ವರ್ಣಿಸಿತು. ಸಂವಿಧಾನದ 356 ನೇ ಕಾಲಮಿಗೆ ತನ್ನ ವಿರೋಧವನ್ನು ಕೇಂದ್ರ ಸಮಿತಿ ಮತ್ತೊಮ್ಮೆ ಒತ್ತಿಹೇಳಿದೆ.

ವಿವಾದದ ಅಂತಿಮ ಇತ್ಯರ್ಥದವರೆಗೆ ಕೇಂದ್ರ ಸರಕಾರ ಇಡೀ ವಿವಾದಗ್ರಸ್ತ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಾಯಿಸಿದೆ. ಮುಂದೆ ಯಾವುದೇ ಕಿಡಿಗೇಡಿತನ ಮಾಡದಂತೆ ತಡೆಯಲು ಇದು ಅಗತ್ಯ.

ನ್ಯಾಯಾಲಯಗಳ ಮುಂದಿರುವ ಅಯೋಧ್ಯೆ ವಿವಾದ ಕುರಿತಾದ ಎಲ್ಲಾ ಕೇಸುಗಳನ್ನು ಸುಪ್ರಿಂಕೋರ್ಟ್‌ಗೆ ವಿಶೇಷ ಪೀಠಕ್ಕೆ ಒಪ್ಪಿಸಬೇಕು.

ತನ್ನ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಾನೂನಿನ ಅನುಮೋದನೆ ಪಡೆಯಲು ಸಂವಿಧಾನ ಹಾಗೂ ಕಾನೂನನ್ನು ಬದಿಗೆ ತಳ್ಳಲು ಈ ಕೂಟ ವಿವಾದಿತ ಸ್ಥಳದಲ್ಲಿ 'ದರ್ಶನ'ಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸುತ್ತಿದೆ. ಎನ್ನುತ್ತಾ ಸಿಪಿಐ(ಎಂ) ಕೇಂದ್ರ ಸಮಿತಿ ಇದನ್ನು ಖಂಡಿಸಿದೆ. ಅಯೋಧ್ಯೆಯಲ್ಲಿ ಇನ್ನಷ್ಟು ಉದ್ರೇಕಕಾರಿ ಕೃತ್ಯ ನಡೆಯದಂತೆ ಕೇಂದ್ರ ಸರಕಾರ ಕ್ರಮವಹಿಸಬೇಕೆಂದು

ಸರಕಾರದ ಆರ್ಥಿಕ ನೀತಿಗಳು ಜನಗಳ ಜೀವನ ಪರಿಸ್ಥಿತಿಯ ಮೇಲೆ, ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ತೀವ್ರ ಆಘಾತ ಮಾಡುತ್ತಿದೆ.ಇದರಿಂದ ಉಂಟಾಗಿರುವ ಅಸಂತೃಪ್ತಿಯನ್ನು ವಿಚ್ಛಿದ್ರಕಾರಿ ಶಕ್ತಿಗಳು ತಮ್ಮ ಉದ್ದೇಶಸಾಧನೆಗೆ ಬಳಸಿಕೊಳ್ಳಲು ಅವಕಾಶವಾಗುತ್ತಿದೆ.

ಸರಕಾರದ ಆರ್ಥಿಕ ನೀತಿಗಳು ಜನಗಳ ಜೀವನ ಪರಿಸ್ಥಿತಿಯ ಮೇಲೆ, ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ತೀವ್ರ ಆಘಾತ ಮಾಡುತ್ತಿದೆ.ಇದರಿಂದ ಉಂಟಾಗಿರುವ ಅಸಂತೃಪ್ತಿಯನ್ನು ವಿಚ್ಛಿದ್ರಕಾರಿ ಶಕ್ತಿಗಳು ತಮ್ಮ ಉದ್ದೇಶಸಾಧನೆಗೆ ಬಳಸಿಕೊಳ್ಳಲು ಅವಕಾಶವಾಗುತ್ತಿದೆ. ದುಡಿಯುವ ಜನಗಳ ಹಕ್ಕುಗಳನ್ನು ಜನಸಮೂಹಗಳ ಜೀವನ ಪರಿಸ್ಥಿತಿಯನ್ನು ರಕ್ಷಿಸಲು ಸಿಪಿಐ(ಎಂ) ದೃಢ ನಿರ್ಧಾರ ಮಾಡಿದೆ ಎಂದು ಕೇಂದ್ರ ಸಮಿತಿ ಮತ್ತೊಮ್ಮೆ ಒತ್ತಿ ಹೇಳಿದೆ.

ಹನ್ನೊಂದು ಜಾತ್ಯಾತೀತ ವಿರೋಧ ಪಕ್ಷಗಳು ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳು ಡಿಸೆಂಬರ್ 19 ರ ಸಮಾವೇಶದಲ್ಲಿ ಜನವರಿಯಲ್ಲಿ ಒಂದು ಸಾಮೂಹಿಕ ಐಕ್ಯ ಪ್ರಚಾರ ನಡೆಸಬೇಕೆಂಬ ಕರೆಯನ್ನು ಕೇಂದ್ರ ಸಮಿತಿ ಅನುಮೋದಿಸಿತು. ಈ ರಾಷ್ಟ್ರವ್ಯಾಪಿ ಪ್ರಚಾರದಲ್ಲಿ ಪೂರ್ಣವಾಗಿ ಇಡೀ ಪಕ್ಷ ಹಾಗೂ ಎಲ್ಲಾ ಸಾಮೂಹಿಕ ಸಂಘಟನೆಗಳನ್ನು ತಮ್ಮನ್ನು ತೊಡಗಿಸಿಕೊಳ್ಳಬೇಕು, ಈ ಮೂಲಕ ಇನ್ನಷ್ಟು ಕೋಮು ವಿಭಜನೆ, ಛಿದ್ರಕಾರಿ ಭಾವನೆ ಬಿತ್ತುವ ಬಿ.ಜೆ.ಪಿ.-ಆರ್.ಎಸ್.ಎಸ್.-ವಿ.-ಹೆಚ್.ಪಿ. ಕೂಟದ ಪ್ರಯತ್ನಗಳನ್ನು ಎದುರಿಸಲು ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಜನವಿಭಾಗಗಳ ಜನಗಳನ್ನು ಅಣಿನೆರೆಸಬೇಕು ಎಂದು ಕರೆ ನೀಡಿದೆ.

ಧಾರ್ಮಿಕ ಭಾವನೆಗಳ ದುರ್ಲಾಭ ಪಡೆದು ಅಧಿಕಾರ ಗಿಟ್ಟಿಸುವ ಅತ್ಯಂತ ಹೀನ ಅಪರಾಧ ಎಸಗುವುದರಲ್ಲಿ ನಿರತವಾಗಿರುವ 'ಹಿಂದುತ್ವ' ದ ಶಕ್ತಿಗಳು ಹಾಕಿರುವ ಸವಾಲಿನ ಗಂಭೀರತೆಯನ್ನು ಎಲ್ಲಾ ಜನವಿಭಾಗಗಳು, ದೇಶಪ್ರೇಮಿ ಜಾತ್ಯಾತೀತ ಸಂಘಟನೆಗಳು ಮನಗಾಣಬೇಕು. ಎಂದು ಕೇಂದ್ರ ಸಮಿತಿ ಕರೆ ನೀಡಿದೆ ಸ್ವಾತಂತ್ರ್ಯ ಹೋರಾಟದ ಮೌಲ್ಯಗಳಲ್ಲಿ ನಂಬಿಕೆಯಿರುವ ಭಾರತದ ಜಾತ್ಯಾತೀತ ಗಣತಂತ್ರವನ್ನು ರಕ್ಷಿಸಿ, ಬಲಪಡಿಸಬಯಸುವ ಎಲ್ಲಾ ನಾಗರಿಕರು ಹಾಗೂ ಸಂಘಟನೆಗಳು ಐಕ್ಯ ಪ್ರಯತ್ನದ ಮೂಲಕ 'ಹಿಂದುತ್ವ' ಶಕ್ತಿಗಳ ಆಟ ಸಾಗದಂತ ಮಾಡಬೇಕು. ಈ ಮುಖ್ಯ ಗುರಿಸಾಧನೆಗೆ ಎಲ್ಲರನ್ನೂ ಒಗ್ಗೂಡಿಸಲು ಸಿಪಿಐ(ಎಂ) ಮತ್ತು ಎಲ್ಲಾ ಎಡ ಶಕ್ತಿಗಳು ಶ್ರಮಿಸುತ್ತವೆ.

ಸ್ವಾತಂತ್ರ್ಯ ಹೋರಾಟದ ಮೌಲ್ಯಗಳಲ್ಲಿ ನಂಬಿಕೆಯಿರುವ ಭಾರತದ ಜಾತ್ಯಾತೀತ ಗಣತಂತ್ರವನ್ನು ರಕ್ಷಿಸಿ, ಬಲಪಡಿಸಬಯಸುವ ಎಲ್ಲಾ ನಾಗರಿಕರು ಹಾಗೂ ಸಂಘಟನೆಗಳು ಐಕ್ಯ ಪ್ರಯತ್ನದ ಮೂಲಕ 'ಹಿಂದುತ್ವ' ಶಕ್ತಿಗಳ ಆಟ ಸಾಗದಂತೆ ಮಾಡಬೇಕು.

"ಕೆಡವಿದ್ದು ಮಸೀದಿ ಮಾತ್ರವಲ್ಲ"

— ಉಡುಪಿಯ ಅಧ್ಯಾಪಕರು, ಮತ್ತಿತರ 12 ಬುದ್ಧಿ ಜೀವಿಗಳು ಡಿಸೆಂಬರ್ 6 ರಂದು ಅಯೋಧ್ಯೆಯ ನಡೆದ ಘಟನೆಯ ಬಗ್ಗೆ ನೊಂದು ಡಿಸೆಂಬರ್ 6 ರಂದು ಒಂದು ಜಂಟಿ ಹೇಳಿಕೆಯನ್ನು 'ಐಕ್ಯರಂಗ'ಕ್ಕೆ ಕಳಿಸಿದ್ದಾರೆ. ಅದನ್ನು ಈ ಮುಂದೆ ಕೊಡಲಾಗಿದೆ.

ಇದೇ ಡಿಸೆಂಬರ್ 6 ರಂದು ಮುಸ್ಲಿಂ ಸೋದರರಿಗೆ ಪವಿತ್ರವಾದ ಬಾಬ್ರಿ ಮಸೀದಿಯನ್ನು ಹಿಂದೂ ಧರ್ಮದ ರಕ್ಷಣೆಯನ್ನು ವಹಿಸಿಕೊಂಡು ಮಾತಾನಾಡುವ ಮತಾಂಧರು ನಾಶಮಾಡುವ ಮೂಲಕ ಹಿಂದೂಧರ್ಮಕ್ಕೆ ಸಂವಿಧಾನಾದರ್ಶಗಳಿಗೆ, ಮತ್ತು ಸಾಂಕೇತಿಕ ಕರಸೇವೆ ಮಾಡುವುದಾಗಿ ಹೇಳಿಕೆಯಿತ್ತ ಇವರನ್ನು ನಂಬಿದ ಜನಸಮೂದಾಯದ ಮುಗ್ಧ ವಿಶ್ವಾಸಕ್ಕೆ ದ್ರೋಹವೆಸಗಿದ್ದಾರೆ, ಮಂದೆ ನಡೆದ ಅಮಾಯಕ ಜನರ ಕಗ್ಗೊಲೆ ಮತ್ತು ಹಿಂಸೆ- ಅತ್ಯಾಚಾರಗಳಿಗೆ ಕಾರಣರಾಗಿದ್ದಾರೆ. ಈ ಮತಾಂಧರ ಮುಖಂಡರು ಮೊಸಳೆ ಕಣ್ಣೀರು ಕೂಡಾ ಹಾಕುತ್ತಾರೆ. ಮಸೀದಿ ನಾಶ ಪೂರ್ವ ನಿಯೋಜಿತವಲ್ಲವೆಂದೂ ಅದು ಸ್ವಯಂಸ್ಫೂರ್ತವಾಗಿ ಕೈಗೊಂಡ ನಿರ್ಧಾರವೆಂದೂ ಇವರು ಹೇಳಿಕೊಳ್ಳುವುದು ಹೊಣೆಗೇಡಿತನವಾಗಿದೆ. ಇದೇ ಮುಖಂಡರಲೊಬ್ಬರಾದ ಅಡ್ವಾಣಿಯವರು ಹಿಂದೊಮ್ಮೆ ಅಲ್ಪಸಂಖ್ಯಾತ ಸಮುದಾಯದ ಹಿತಾಸಕ್ತಿ ಬಿ.ಜೆ.ಪಿ. ಸರಕಾರದಡಿ ಮಾತ್ರ ಸುರಕ್ಷಿತವಾಗಿರಬಲ್ಲುದು ಎಂದು ಹೇಳಿದ್ದರು. ಇತ್ತೀಚಿಗೆ ಮುಖಂಡರಾದ ಪೇಜಾವರಶ್ರೀಗಳು 'ಮಸೀದಿ ನಾಶಮಾಡದೆ ಮಂದಿರ ನಿರ್ಮಾಣವಾಗಬೇಕು' ಎಂದಿದ್ದರು. ಇಂಥ ದ್ವಿಮುಖ ನೀತಿಯ ಘಾತಕಿಗಳನ್ನು ಜನತೆ ಒಕ್ಕೊರಲಿನಿಂದ ಖಂಡಿಸಬೇಕಾಗಿದೆ.

ಮಸೀದಿ ನಾಶಮಾಡುವಾಗ ಮಣ್ಣಿನಡಿಯಲ್ಲಿ ಗಣಪತಿ, ಆಂಜನೇಯ ಮತ್ತಿತರ ವಿಗ್ರಹಗಳು ದೊರೆತವು ಎನ್ನಲಾಗಿದೆ. ಇದು 1949 ಡಿಸೆಂಬರ್ 22 ರಾತ್ರಿ ಬಾಬ್ರಿ ಮಸೀದಿಯೊಳಗೆ ತೂರಿಬಿಟ್ಟು ಉದ್ಭವವಾಯಿತೆಂದು ಪ್ರಚಾರಮಾಡಿದ ಸೀತಾರಾಮಾಲಕ್ಷ್ಮಣ ವಿಗ್ರಹಗಳಿಗೆ ಹೊಸ ಸೇರ್ಪಡೆಯಾಗಿದೆ. ಈ ಮುಖಂಡರಲ್ಲಿ ವಿಗ್ರಹಗಳು ಇನ್ನಷ್ಟು ಸಂಗ್ರಹವಿದ್ದಿರಬಹುದು; ಇನ್ನಷ್ಟು ಮಸೀದಿಗಳ ನಾಶವಾಗಿ ಅವುಗಳ ಆಸ್ತಿವಾರದಲ್ಲಿ ಇವು ಉದ್ಭವಗೊಳ್ಳಬಹುದು.

ಮಸೀದಿ ಹಿಂದೊಮ್ಮೆ ರಾಮಮಂದಿರವಾಗಿತ್ತು. ಎಂದು ವಾದಿಸುತ್ತ ಬಂದ ಈ ಹಿಂದೂವಾದಿಗಳಿಗೆ ನಮ್ಮ ಪ್ರತಿಕ್ರಿಯೆ: ಹೌದು ನಮಗೆ ಇದುವರೆಗೆ ಮಸೀದಿ ಮಂದಿರವೂ ಆಗಿತ್ತು. ಮುಸ್ಲಿಮರಿಗೆ ಮಂದಿರ ಮಸೀದಿಯೂ ಆಗಿತ್ತು. ಇದು ಹಿಂದೂಧರ್ಮದ ಮಂದಿರದ ಕಲ್ಪನೆ. ನೀವು ಮೊನ್ನೆ ಉರುಳಿಸಿದ್ದು ಮಸೀದಿಯನ್ನಷ್ಟೇ ಅಲ್ಲ; ಮಂದಿರವನ್ನು ಕೂಡ 'ಮಸೀದಿ-ಮಂದಿರ'ಗಳ ಅವಿನಾಭಾವದ ಸುಂದರ ಧಾರ್ಮಿಕ ಕಲ್ಪನೆಯನ್ನು ; ಇಂಥದೊಂದು ಕಲ್ಪನೆಗೆ ಆಕೃತಿಕೊಟ್ಟ ಹಿಂದೂ-ಮುಸ್ಲಿಂ ಸೌಹಾರ್ದಯುತ ಸಹಬಾಳ್ವೆಯ ಶತಮಾನಗಳ ಅರ್ಥಪೂರ್ಣ ಸಂಸ್ಕೃತಿಯನ್ನು ಇನ್ನು ನಿಮಗೆ ಹಿಂದೂ ಧರ್ಮ-ಸಂಸ್ಕೃತಿಗಳ ಬಗೆಗೆ ಮಾತನಾಡುವ ನೈತಿಕ ಹಕ್ಕಿಲ್ಲ. ನೀವು ಹಿಂದೂಗಳಲ್ಲ!

ಕೋಮುದಳ್ಳುರಿಗೆ ತತ್ತರಿಸಿದ ಗುಲ್ಬರ್ಗಾ-

ಪೋಲೀಸ್ ಬಲಹೀನತೆ ಪ್ರದರ್ಶನ
ಕೋಮುವಾದಿಗಳಿಂದ ವ್ಯವಸ್ಥಿತವಾದ ಹಿಂಸಾಚಾರಕ್ಕೆ ಅಮಾಯಕರ ಬಲಿ

ಅಯೋಧ್ಯೆ ಘಟನೆಯ ಹಿನ್ನೆಲೆಯಲ್ಲಿ ಕಲ್ಬುರ್ಗಿಯಲ್ಲಿ ಮತಾಂಧರಿಂದ ಮರುಕಳಿಸಿದ ಹಿಂಸಾಚಾರ 12 ಜೀವಗಳನ್ನು ಬಲಿತೆಗೆದುಕೊಂಡು. ಹಲವು ಮಂದಿರ- ಮಸೀದಿಗಳು ನೆಲಕಚ್ಚುವಂತೆ ಮಾಡಿದವು. ಮತೀಯ ಸಾಮರಸ್ಯಕ್ಕೆ ಹೆಸರಾದ ಗುಲ್ಬರ್ಗಾ ನಗರಕ್ಕೆ ಕಳಂಕ ತರುವ ರೀತಿಯಲ್ಲಿ ಹಿಂಸಾಕೃತ್ಯಗಳು ನಡೆದು ಇಡೀ ನಗರವನ್ನು ತತ್ತರಿಸುವಂತೆ ಮಾಡಿದವು.

ಹಿಂದೆಂದೂ ಕಾಣದಂತ ದೊಂಬಿ, ಲೂಟಿ, ಹಿಂಸಾಚಾರದ ಜೊತೆಗೆ ಮನೆಗಳಿಗೆ ನುಗ್ಗಿ ಮಹಿಳೆಯರನ್ನು ಹೊರಗೆಳೆದು ಬೆತ್ತಲೆಗೊಳಿಸಿ, ಮಾನಹರಣದಂತಹ ಅವಮಾನವೀಯ ಕೃತ್ಯಗಳು ನಡೆದು ಇಡೀ ಮಾನವಕುಲವೇ ತಲೆ ತಗ್ಗಿಸುವಂತೆ ಮಾಡಿದವು. ಈ ಎಲ್ಲಾ ಘಟನೆಗಳ ಹಿನ್ನೆಲೆಯಲ್ಲಿ 10 ದಿನಗಳ ಕಾಲ ಹಗಲೂ ರಾತ್ರಿ ಸತತ ಕರ್ಫ್ಯೂ ಹೇರಿದ್ದರಿಂದ ಜನಜೀವನ ಸ್ಥಗಿತಗೊಂಡು ದಿನನಿತ್ಯ ಕೂಲಿ ಮಾಡಿ ಬದುಕುವ ದುಡಿಯುವ ವರ್ಗದ ಜನತೆ ಉಪವಾಸದಿಂದ ನರಳುವಂತೆ ಮಾಡಿತು.

ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಆರ್.ಎಸ್.ಎಸ್., ವಿ.ಹೆಚ್.ಪಿ. ಬಿ.ಜೆ.ಪಿ. ಶಕ್ತಿಗಳು ಬಾಬ್ರಿ ಮಸೀದಿಯನ್ನು ನಾಶಪಡಿಸಿದ ಸುದ್ದಿ ರಾತ್ರಿ ನಗರದಲ್ಲಿ ಬಿ.ಬಿ.ಸಿ ಸ್ಟಾರ್‌ಟಿ.ವಿಗಳ ಮೂಲಕ ಕಾಳ್ಗಿಚ್ಚಿನಂತೆ ಹರಡಿತು. ಅಂದೇ ರಾತ್ರಿ, ಗುಲ್ಬರ್ಗಾ ನಗರದ ಮುಸ್ಲಿಂಲೀಗ್ ಶಾಸಕರಾದ ಕಮರಲ್ ಇಸ್ಲಾಂ ಅವರ ನಿವಾಸದಲ್ಲಿ ಮುಸ್ಲಿಂ ಮೂಲಭೂತವಾದಿಗಳ ಸಭೆ ಜರಗಿ ನಗರದಲ್ಲಿ ವ್ಯವಸ್ಥಿತವಾಗಿ ಕೋಮುಗಲಭೆಗಳು ಜರುಗುವಲ್ಲಿ ಸಹಕಾರಿಯಾಯಿತು. ಬೆಳಗಾಗುವುದರಲ್ಲಿಯೇ ಪೂಜಾಸ್ಥಳಗಳ ನಾಶ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರಕಾಶ್ ಕೋರೆ ಅವರ ಮನೆಯ ಮೇಲೆ ಭೀಭೀಕರ ದಾಳಿ ನಡೆದು, ನಗರದಲ್ಲಿ ಕೋಮು ಗಲಭೆಗೆ ಹುಟ್ಟಿಗೆ ಕಾರಣೀಭೂತವಾಯಿತು.

ಡಿಸೆಂಬರ್ 7 ರಂದು ಬೆಳಿಗ್ಗೆ ನಗರದಲ್ಲಿ ಹಿಂಸಾಚಾರಗಳು ಬುಗಿಲೆದ್ದವು ಪೂಜಾ-ಪ್ರಾರ್ಥನಾ ಸ್ಥಳಗಳ ನಾಶ ಅವ್ಯಾಹತವಾಗಿ ಮುಂದುವರಿಯಿತು. ನಗರದ ಮುಸ್ಲಿಂ ಚೌಕದಲ್ಲಿ 3000ಕ್ಕೂ ಅಧಿಕ ಸಂಖ್ಯೆಯಲ್ಲಿ ಸೇರಿದ ಮುಸ್ಲಿಂ ಬಾಂಧವರನ್ನು ಉದ್ದೇಶಿಸಿ ಶಾಸಕ ಕಮರಲ್ ಇಸ್ಲಾಂ ಆವೇಶಪೂರಿತ ಭಾಷಣವನ್ನು ಮಾಡಿ ಇದಕ್ಕೆ ಪ್ರತೀಕಾರ ತೆಗೆದುಕೊಳ್ಳಲೇಬೇಕೆಂದು ಕರೆ ನೀಡಿದರು. ಅಯೋಧ್ಯೆ ಘಟನೆಯ ಪ್ರತಿಧ್ವನಿಯಾಗಿ ಸಹಜವಾಗಿ ಹೊರಹೊಮ್ಮಿದ ಮುಸ್ಲಿಂ ಜನತೆಯ ಭಾವೋದ್ವೇಗಗಳನ್ನು ತಮ್ಮ ರಾಜಕೀಯ ಹಿತಾಸಕ್ತಿಗೆ . ಬಳಸಿಕೊಳ್ಳುವ ಮೂಲಕ ಶಾಸಕ ಕಮರಲ್ ಇಸ್ಲಾಂ ಅವರು ಹಿಂಸಾಚಾರಕ್ಕೆ ತೊಡಗಲು ಜನತೆಗೆ ಪ್ರಚೋದನೆ ನೀಡಿದರು ಇದಕ್ಕೆ ಜಿಲ್ಲಾಧಿಕಾರಿ ಮತ್ತು ಪೋಲೀಸ್ ಸೂಪರಿಡೆಂಟ್ ಸಾಕ್ಷಿಯಾಗಿದ್ದಾರೆ ಈ ಮತಾಂಧನ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ.- ಅಲ್ಲಿಂದ ಚೆದುರಿದ ಜನತೆ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿಸಿಕೊಂಡಿತು. ಕಲ್ಲುತೂರಾಟ, ಬೆಂಕಿ, ಹಚ್ಚುವಿಕೆ ನಿರಂತರವಾಗಿ ನಡಿಯಿತು. ಈ ಸಂದರ್ಭದಲ್ಲಿ ಗಲಭೆಪೀಡಿತ ಪ್ರದೇಶಕ್ಕೆ ಸಮಾಜವಾದಿ ಜನತಾಪಕ್ಷದ ರಾಜ್ಯಾಧ್ಯಕ್ಷ ವೈಜನಾಥ ಪಾಟೀಲರೊಂದಿಗೆ ತೆರಳಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆಯವರು ಕಲ್ಲು ತೂರಾಟದ ನಡುವೆ ಸಿಗಿಬಿದ್ದು ಉದ್ರಿಕ್ತ ಜನತೆಯನ್ನು ಶಾಂತಗೊಳಿಸುವಲ್ಲಿ ನಿಸ್ಸಹಯಕರಾದರು ಒಂದು ಗುಂಪು ರೋಜಾ ಪೋಲೀಸ್ ಠಾಣೆಯ ಮೇಲೆ ಧಾಳಿ ಮಾಡಿ ಬಂಧಿತ ರೌಡಿಯೊಬ್ಬನನ್ನು ಬಿಡಿಸಿಕೊಂಡು ಹೋಗುತ್ತಿದ್ದಾಗ ಪೋಲೀಸರು ಗೋಲಿಬಾರ್ ಮಾಡಿದ್ದರಿಂದಾಗಿ 5 ಜನ ಸ್ಥಳದಲ್ಲಿಯೇ ಮೃತಪಟ್ಟರು. ಟಿಯರ್-ಗ್ಯಾಸ್, ಅಶ್ರುವಾಯು ಪ್ರಯೋಗಿಸಿ ಜನತೆಯನ್ನು ಚದರಿಸದೇ ನೇರವಾಗಿ ಗೋಲಿಬಾರ್ ಮಾಡಿದ್ದು ಅವಶ್ಯಕವಾಗಿತ್ತೆಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಭಿಪ್ರಾಯಪಟ್ಟಿದೆ.

ಈ ಹಿಂಸಾಚಾರಕ್ಕೆ ಪ್ರತೀಕಾರವೆಂಬಂತೆ ಶಹಬಜಾರ್ ಪ್ರದೇಶದಲ್ಲಿ ಹಿಂಸೆ ಮರುಕಳಿಸಿ 2 ಮಸೀದಿಯನ್ನು ನಾಶಪಡಿಸಲಾಯಿತು. ಮುಸ್ಲಿಂ ಮಹಿಳೆಯರನ್ನು ಬೆತ್ತಲೆಗೊಳಿಸುವಿಕೆ ಮಾನಭಂಗದ ಅಮಾನವೀಯ ಘಟನೆಗಳು ಸಂಭವಿಸಿದವು ಪ್ರಜಾವಾಣಿ ಪ್ರೆಸ್ ಕಟ್ಟಿಂಗ್ ಇವರ ಬೆನ್ನಹಿಂದೆಯೇ ನ್ಯೂ ರಾಘವೇಂದ್ರ ಕಾಲೋನಿಯ ಮೇಲೆ ಧಾಳಿ ಮಾಡಿದ ಉನ್ಮತ್ತ ಮತಾಂಧ ಗುಂಪೊಂದು ಯುವತಿಯರ ಬೆತ್ತಲೆಗೊಳಿಸುವಿಕೆ ಮಾನಭಂಗಕ್ಕೆ ಪ್ರಯತ್ನಪಡುತ್ತಿದ್ದಾಗ ಸ್ಥಳಕ್ಕೆ ಧಾವಿಸಿದ ಪೋಲೀಸರು ಗುಂಡು ಹಾರಿಸಿದ್ದರಿಂಗಾಗಿ ನಾಲ್ವರು ಅಸುನೀಗಿದರು ನಗರದಲ್ಲಿ ಕರ್ಫ್ಯೂ ಹೇರಿದ ಸಮಯದಲ್ಲಿಯೇ ನಗರದ ಗಲಭೆಪೀಡಿತ ಪ್ರದೇಶಗಳಲ್ಲಿ, ಮಾನ್ಪಡೆ, ಸಿ.ಎ. ಪಾಟೀಲ್ ವಿಜಯ. ಕುಮಾರ್‌ಶರ್ಮಾ, ಕಲ್ಲಪ್ಪ ಕಿರಣಗಿ ಮೆಹಿಬೆಲಾರ್ ಜಲಾಲ್‌ರನ್ನೊಳಗೊಂಡ ಸಿಪಿಐ(ಎಂ) ನಿಯೋಗವು ಗಲಭೆ ಪೀಡಿತ ಸಂಚರಿಸಿದವು.

ಈ ನಡುವೆ ಗುಲ್ಬರ್ಗಾ ನಗರ ಹತ್ತಿ ಉರಿಯುತ್ತಿರವಾಗ ರಾಘವೇಂದ್ರ ಕಾಲೋನಿಯ ಘಟನೆಗಳು ನಡೆಯುತ್ತಿದ್ದಾಗಲೇ ನಗರಕ್ಕೆ ಬಂದಿಳಿದ ರಾಜ್ಯ ಸರ್ಕಾರದ ಸಚಿವರುಗಳಾದ ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ, ಭೀಮಣ್ಣ ಖಂಡ್ರೇ ಇವರುಗಳು ಪ್ರವಾಸಿ ಮಂದಿರದಲ್ಲಿಯೇ ಸಮಯವನ್ನು ಕಳೆದು ಗಲಭೆ ಪೀಡಿದ ಪ್ರದೇಶಗಳಿಗೆ ಭೇಟಿ ನೀಡಿ ಸಾಂತ್ವನಗೊಳಿಸದೆ ಉದ್ರಿಕ್ತ ಪರಿಸ್ಥಿತಿಯನ್ನು ಉಪಶಮನಗೊಳಿಸುವ ಯಾವ ಪ್ರಯತ್ನ ಮಾಡದೆ ಹಿಂದಿರುಗಿದರು.

ಶಾಂತಿ ಸಭೆಗಳು ನಡೆಯುತ್ತಿರುವಾಗಲೇ ಹಿಂಸಾಚಾರಗಳು ಮರುಕಳಿಸಿರುವುದರ ಕುರಿತು ಶಂಕೆ ವ್ಯಕ್ತಪಡಿಸಿರುವ ಸಿಪಿಐ(ಎಂ) ಈ ಘಟನೆಗಳು ಪೂರ್ವನಿಯೋಜಿತ ಎಂದು ಜಿಲ್ಲಾ ಆಡಳಿತವರ್ಗಕ್ಕೆಮನವರಿಕೆ ಮಾಡಲು ಪ್ರಯತ್ನಿಸಿದೆ. ಜನತೆಯನ್ನು ವಿಧ್ವಂಸಕ ಕಾರ್ಯಕಗಳಿಗೆ ಪ್ರಚೋದಿಸಿದ ರಾಜಕೀಯ ಪಕ್ಷದ ನಾಯಕರನ್ನು ಬಂಧಿಸಲು ಸಿಪಿಐ(ಎಂ) ಜಿಲ್ಲಾ ಸಮಿತಿ ಆಗ್ರಹಪಡಿಸಿದೆ. ಇದೇ ಸಂದರ್ಭದಲ್ಲಿ ಕರ್ಫ್ಯೂವಿನಿಂದಾಗಿ ಕೃಷಿಕೂಲಿಕಾರರ ಜೀವನ ನಿರ್ವಹಣ ಕಷ್ಟಕ್ಕೀಡಾಗಿದ್ದು ಉಚಿತವಾಗಿ ಆಹಾರದಾನ್ಯಗಳನ್ನು ಪೂರೈಸಲು ಸಿಪಿಐ(ಎಂ) ಮನವಿ ಮಾಡಿದೆ.

ಡಿಸೆಂಬರ್ 9 ರಂದು ಧರ್ಮಗುರುಗಳಾದ ಶರಣಬಸಪ್ಪ ಅಪ್ಪಾ ಅವರು ಅಧ್ಯಕ್ಷತೆಯಲ್ಲಿ ಶಾಂತಿ ಸಭೆ ಜರುಗಿತು. ಅಯೋಧ್ಯೆಯಲ್ಲಿ ಬಾಬರಿ ಮಸೀದ ನಾಶಪಡಿಸಿದ್ದನ್ನು ಒಮ್ಮತದಿಂದ ಖಂಡಿಸಲಾಯಿತು. ನಗರದಲ್ಲಿ ನಾಶಕ್ಕೊಳಗಾದ ಪೂಜಾ-ಪ್ರಾರ್ಥನಾ ಸ್ಥಳಗಳನ್ನು ಪುನರ್ ನಿರ್ಮಾಣ ಮಾಡುವದರೊಟ್ಟಿಗೆ ನಾಗರೀಕರಲ್ಲಿ ವಿಸ್ವಾಸ ಮೂಡಿಸಲು ಶಾಂತಿಯಾತ್ರೆ ಕೈಗೊಳ್ಳಬೇಕೆಂದು ವಿಧಾನ ಪರಿಷತ್ತಿನ ಉಪಸಭಾಪತಿ ಬಿ. ಆರ್. ಪಾಟೀಲ್ ಮಂಡಿಸಿದ ನಿರ್ಣಯವನ್ನು ಸಿಪಿಐ(ಎಂ)ನ ಮಾರುತಿ ಮಾನ್ಪಡೆ ಅನುಮೋದಿಸಿದರು.

ಎರಡು ದಿನಗಳಿಂದ ಸ್ಥಬ್ಧಗೊಂಡಿದ್ದ ಹಿಂಸಾಚಾರಗಳು ಡಿಸೆಂಬರ್ 11 ರಂದು



ಅಯೋಧ್ಯೆಯಿಂದ ಕರಸೇವಕರು ನಗರಕ್ಕೆ ಬಂದಿಳಿದ ನಂತರ ಹಿಂಸೆಗೆ ಚಾಲನೆ ದೊರಕಿತು. ಆರ್.ಎಸ್.ಎಸ್. ಮುಖ್ಯ ಕಚೇರಿಯಿರುವ ವಿಠಲ್‌ನಗರದಲ್ಲಿಯ ಮಸೀದಿಯೊಂದಕ್ಕೆ ಒಳನುಗ್ಗಿದ ಕೆಲವು ಯುವಕರು ವಿಶ್ರಮಿಸುತ್ತಿದ್ದ ಇಬ್ಬರು ವಯೋವೃದ್ಧರನ್ನು ಚೂರಿಯಿಂದ ಇರಿದು ಕೊಲೆ ಮಾಡಿದರು. ಇದು ಮುಂದೆ ನಗರದಲ್ಲಿ ಗಲಬೆ ಲೂಟಿ, ಹಿಂಸಾಚಾರಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯಲು ಕಾರಣವಾಯಿತು.

ಪಕ್ಷದ ಜಿಲ್ಲಾ ಸಮಿತಿ ದಿನಾಂಕ 5.12.92 ರಂದು ಮಾನವ ಸರಪಳಿ ರಚಿಸಿ ಕೋಮು ಸೌಹಾರ್ದವನ್ನು ಪ್ರಚಾರ ಮಾಡಿತು. 2000 ಕರ ಪತ್ರಗಳನ್ನು ಮುದ್ರಿಸಲಾಗಿತ್ತು. ಇತರ ಜಾತ್ಯಾತೀತ ಪಕ್ಷಗಳೊಡನೆ ಸೇರಿ ಮೂರು ಬಾರಿ ಗಲಭೆ ಪೀಡಿತ ಪ್ರದೇಶಗಳಿಗೆ ಬೇಟಿ ನೀಡಲಾಗಿದೆ!

ದಿನಾಂಕ 13.12.90 ರಂದು ಕರ್ಫ್ಯೂ ಸಡಿಲಿಸಿದಾಗ ಜನತಾದಳ, ಸಿಪಿಐ, ಸಿಪಿಐ(ಎಂ) ಪಕ್ಷಗಳಿಂದ ಕಲಬುರ್ಗಿ ನಗರದ ಪ್ರಮುಖ ರಸ್ತೆಗಳಲ್ಲಿ ಪಾದಯಾತ್ರೆ ನಂತರ ಧರಣಿ ಸತ್ಯಾಗ್ರಹ ಮಾಡಲಾಯಿತು. ಜನತಾದಳದ ಎಸ್.ಕೆ. ಕಾಂತ್ ಮತ್ತು ಹನುಮಂತರಾವ್ ದೇಸಾಯಿ ಪಾಲ್ಗೊಂಡಿದ್ದರು. ಸಿಪಿಐ(ಎಂ) ನಿಂದ ಮಾರುತಿ ಮಾನ್ಪಡೆ, ಕಲ್ಲಪ್ಪ ಕಿರನಾಗಿ, ಸಿ.ಎ. ಪಾಟೀಲ್ ಪಾಲ್ಗೊಂಡಿದ್ದರು.

- ಈಶ್ವರ ಚಂದ್ರ

ರಾಷ್ಟ್ರೀಯ ಏಕತೆ ಬಯಸುವವರಿಗೀಗ ಪರೀಕ್ಷಾ ಕಾಲ
ಸಕ್ರಿಯವಾಗಿ ಭಾಗವಹಿಸಿ, ಹೊಸ ವಿಭಾಗಗಳನ್ನು ತಲುಪಿ

-ಕಾಂ. ಪಿ. ರಾಮಚಂದ್ರನ್ ಕರೆ

ನಮ್ಮ ಮುಂದೆ ಬಹಳ ಕಷ್ಟದ ಪ್ರಶ್ನೆಗಳಿವೆ ನಿಜ. ಆದರೂ ಎಡಪಕ್ಷಗಳು ಮುನ್ನೆಜ್ಜೆಯಿಟ್ಟಿವೆ. ಡಿಸೆಂಬರ್ 19ರ ದೆಹಲಿ ಸಮಾವೇಶ ಕೋಮುವಾದ- ವಿರೋಧಿ ಹೋರಾಟದಲ್ಲಿ ಹೊಸ ಸ್ಫೂರ್ತಿ ತುಂಬಿದೆ. ಇನ್ನೊಂದು ಕಷ್ಟದ ಪ್ರಶ್ನೆಗಳಿರುವಂತೆ ಜನಗಳನ್ನು ತಲುಪುವ, ಹೊಸ ಹೊಸ ಜನವಿಭಾಗಗಳನ್ನು ತಲುಪುವ ಅವಕಾಶವೂ ಇವೆ. ಇದನ್ನು ಬಳಸಿ ಜನರನ್ನು ತಲುಪೋಣ. ಒಂದು ಜಾತ್ಯಾತೀತ ಪ್ರಜಾಪ್ರಭುತ್ವ ಆಂದೋಲನದ ಮುಂದಾಳುಗಳಾಗೋಣ. ಆರ್ಥಿಕ ಪ್ರಶ್ನಗಳ ಬಗ್ಗೆ ಹೋರಾಟವನ್ನು ತೀವ್ರಗೊಳಿಸೋಣ. ಏಕೆಂದರೆ ಸರಕಾರ ಆರ್ಥಿಕ ನೀತಿಗಳ ವಿರುದ್ಧ ಹೋರಾಟ ಕೋಮುವಾದದ ವಿರುದ್ಧ ಹೋರಾಟ ಕೂಡಾ. ಈ ಹೋರಾಟದಲ್ಲಿ ದುಡಿಯುವ ಜನಗಳ ಐಕ್ಯತೆಯನ್ನು ಮತ್ತೆ ಕಟ್ಟೋಣ. ಸಕ್ರಿಯವಾಗಿ ಮುನ್ನಡೆಯಿರಿ- ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ.ಪಿ. ರಾಮಚಂದ್ರನ್ ಪಕ್ಷದ ಕಾರ್ಯಕರ್ತರಿಗೆ , ಹಿತೈಷಿಗಳಿಗೆ ನೀಡಿದ ಕರೆಯಿದು. ಅವರು ಅಯೋಧ್ಯಾ ಬೆಳವಣಿಗೆಗಳ ಬಗ್ಗೆ ಪಕ್ಷದ ವಿಮರ್ಶೆಯನ್ನು ಬೆಂಗಳೂರಿನಲ್ಲಿ ಜನವರಿ 2ರಂದು ಪಕ್ಷದ ಕಾರ್ಯಕರ್ತರಿಗೆ ಹಿತೈಷಿಗಳಿಗೆ ವಿವರಿಸುತ್ತಿದ್ದರು.

ಸಾಮಾನ್ಯ ಘಟನೆಯಲ್ಲ

ಡಿಸೆಂಬರ್ 6ರ ಘಟನೆ ಒಂದು ಸಾಮಾನ್ಯ ಘಟನೆಯಲ್ಲ. ಭಾರತ ಮುಂದಿನ ಕೆಲವು ವರ್ಷಗಳಲ್ಲಿ ಯಾವ ದಾರಿ ಹಿಡಿಯಬೇಕು ಎಂದು ನಿರ್ಧರಿಸಬೇಕಾದ ಸಂದರ್ಭದಲ್ಲಿ ಈಗ ಕವಲುದಾರಿಯಲ್ಲಿ ನಿಂತಿದೆ. ಪಕ್ಷದ ಮುಂದೆಯೂ ತುಂಬಾ ಕಷ್ಟದ ಸಮಸ್ಯೆಗಳನ್ನು ಇದು ತಂದಿಟ್ಟಿದೆ. ಆದರೂ ಪಕ್ಷ ಡಿಸೆಂಬರ್ 6ರ ಘಟನೆಯ ಸುದ್ದಿ ಬಂದ ಕ್ಷಣದಿಂದಲೇ ಪ್ರತಿ ಹಂತದಲ್ಲೂ ಮಧ್ಯಪ್ರವೇಶಿಸಿದೆ. ಒಂದು ಸರಿಯಾದ ರಾಜಕೀಯ ಮಾರ್ಗವನ್ನು ನಮಗಷ್ಟೇ ಅಲ್ಲ, ಇಡೀ ದೇಶಕ್ಕೇ ಕಂಡುಕೊಳ್ಳಲು ಪ್ರಯತ್ನಿಸಿದೆ ಎಂದು ಕಾಂ.ಪಿ.ಆರ್.ಸಿ. ಹೇಳಿದರು.

ಕಳೆದ ನಾಲ್ಕೈದು ವರ್ಷಗಳಿಂದ ಬಿಜೆಪಿ ಈ ರೀತಿಯ ವಾತಾವರಣ ಸೃಷ್ಟಿಸಲು ಪ್ರಯತ್ನ ನಡೆಸಿತ್ತು. ಪ್ರಧಾನಿ ನರಸಿಂಹರಾವ್ ದೃಢ ಕ್ರಮ ಕೈಗೊಳ್ಳುವುದಿಲ್ಲ ಎಂದು ಆರ್.ಎಸ್.ಎಸ್ ಮುಖಂಡರಿಗೆ ಸ್ಪಷ್ಟವಾಗಿ ತಿಳಿದಿತ್ತು. ಅದರಿಂದ ಅವರಿಗೆ ಇನ್ನಷ್ಟು ಧೈರ್ಯ ಬಂದಿತ್ತು. ನರಸಿಂಹರಾವ್ ಸರಕಾರದ ಹಿಂಜರಿಕೆಯನ್ನು ಕಂಡೇ ಸಿಪಿಐ(ಎಂ) ಮತ್ತಿತರ ಎಡಪಕ್ಷಗಳು ಹಾಗೂ ರಾಷ್ಟ್ರೀಯ ರಂಗ ಪಕ್ಷಗಳ ಒತ್ತಾಯದ ಮೇಲೆ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕರೆದಿದ್ದರೂ ಅದನ್ನು ನವಂಬರ್ 23ರಂದು ಕೂಡಾ ಮುಂದೂಡುವ ಬಗ್ಗೆ ಪ್ರಧಾನಿಗಳು ಯೋಚಿಸುತ್ತಿದ್ದರು. ಮಂಡಳಿಯ ಸಭೆಯಲ್ಲಿ ಸರಕಾರ ಮಂಡಿಸಿದ ದಸ್ತಾವೇಜಿನಲ್ಲೂ ಸರಕಾರದ ಹಿಂಜರಿಕೆ ಕಾಣುತ್ತಿತ್ತು. ಆದರೆ ಆ ಸಭೆಯಲ್ಲಿ ಮಾತನಾಡಿದವರೆಲ್ಲಾ ಒಂದು ನಿರ್ಣಾಯಕ ಕ್ರಮ ಅಗತ್ಯವೆಂದು ಅಭಿಪ್ರಾಯಪಟ್ಟಿದ್ದು ಆದ್ದರಿಂದಲೇ ಸುರ್ಜಿತ್‌ರವರು ಪ್ರಧಾನಿಗಳಿಗೆ ಸೂಕ್ತವಾದ ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರ ನೀಡುವ ಒಂದು ವಾಕ್ಯದ ನಿರ್ಣಯ ಮಂಡಿಸಿದರು ಎಂದ ಕಾಂ.ಪಿ.ಆರ್.ಸಿ.ಯವರು ಪ್ರಧಾನಮಂತ್ರಿಗಳು ಬೇಜವಾಬ್ದಾರಿತನವನ್ನು ವಿವರಿಸುತ್ತಾ "ಯಾವುದೇ ಸಂದರ್ಭವನ್ನು ಎದುರಿಸುವ ಯೋಜನೆ ಸಿದ್ಧವಾಗಿತ್ತು" ಎಂದ ಗೃಹಮಂತ್ರಿಗಳ ಹೇಳಿಕೆಯತ್ತ ಗಮನ ಸೆಳೆಯುತ್ತಾ. ಆದರೆ ಈ ಯೋಜನೆಗಳನ್ನು ಜಾರಿ ಮಾಡಲು ಅನುಮತಿ ಸಿಗಲಿಲ್ಲ ಎಂದು ಹೇಳಿದರು. ಪ್ರಧಾನಿಗಳು ಬಿಜೆಪಿಯನ್ನು ಎದುರು ಹಾಕಿಕೊಳ್ಳಲು ಸಿದ್ಧರಿರಲಿಲ್ಲ, ಆದ್ದರಿಂದಲೇ ಈ ಸ್ಥಿತಿ ಬಂತು ಎಂದರು.

ಇನ್ನೂ ಪರಿಸ್ಥಿತಿಯ ಗಂಭೀರತೆಯ ಅರಿವಿಲ್ಲ

ಡಿಸೆಂಬರ್ 6ರ ಘಟನೆಯ ನಂತರದ ಹಿಂಸಾಚಾರಗಳ ನಂತರ ಈಗ ಸ್ಥಿತಿ

ಪುಟ 8 ಕ್ಕೆ.......

ಚಂದಾದಾರರ, ಏಜೆನ್ಸಿದಾರರ ಗಮನಕ್ಕೆ

ನಮ್ಮ ಡಿ.ಟಿ.ಪಿ. ಘಟಕದಲ್ಲಿ ತೊಂದರೆ ಹಾಗೂ ವಿದ್ಯುತ್ ಅಡಚಣೆಗಳಿಂದಾಗಿ ಹಿಂದಿನ ಸಂಚಿಕೆಯನ್ನು ಹೊರತರುವುದು ಸಾಧ್ಯವಾಗಲಿಲ್ಲ. ಆದ್ದರಿಂದ ಈ ಸಂಚಿಕೆ 12 ಪುಟಗಳೊಂದಿಗೆ ಬರುತ್ತಿದೆ. ಓದುಗರು, ಏಜನ್ಸಿದಾರರು ಈ ತೊಂದರೆಗಾಗಿ ಕ್ಷಮಿಸಬೇಕೆಂದು ಕೋರುತ್ತೇವೆ.

-ವ್ಯವಸ್ಥಾಪಕರು

"ಮತೀಯ ಮೂಲವಾದಿಗಳನ್ನು ಮಣ್ಣು ಮುಕ್ಕಿಸೋಣ"

ಅಯೋಧ್ಯೆ ದುರಂತಕ್ಕೆ ಬಾಬ್ರಿ ಮಸ್-ಜೀದ ನೆಲಸಮವಾಗಿ ಇಡೀ ದೇಶದ ಜನತೆ ಜಗತ್ತಿನ ಮುಂದೆ ತಲೆತಗ್ಗಿಸುವಂತಾಗಲಿಕ್ಕೆ ಭಾರತದಲ್ಲಿ ಜಾತ್ಯಾತೀತತೆ ಎಂಬುದು ಉಳಿದಿಲ್ಲವೆಂದು ಸಾರುವಂತೆ ಮಾಡಲಿಕ್ಕೆ ಪ್ರಧಾನಮಂತ್ರಿ ಪಿ.ವಿ. ನರಸಿಂಹರಾವ್ ಮತ್ತು ಹಿಂದುತ್ವ ಶಕ್ತಿಗಳಾದ ಬಿಜೆಪಿ, ಆರ್‌ಎಸ್‌ಎಸ್, ವಿಹೆಚ್‌ಪಿ ಮತ್ತು ಭಜರಂಗದಳವೇ ಕಾರಣವಾಗಿರುವುದರಿಂದ ಅಂಥ ಮತೀಯ ಶಕ್ತಿಗಳನ್ನು ಮಣ್ಣು ಮುಕ್ಕಿಸಲು ದೇಶದಲ್ಲಿ ಕೋಮು ಸೌಹಾರ್ದತೆ, ಐಕ್ಯತೆ, ಸಾರ್ವಭೌಮತೆಯನ್ನು ರಕ್ಷಿಸಲು ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಜೀವದ ಹಂಗು ಬಿಟ್ಟು ಹೋರಾಡಬೇಕೆಂದು ಸಿಪಿಐ(ಎಂ) ಸೆಕ್ರೆಟಾರಿಯೆಟ್ ಸದಸ್ಯರಾದ ಎನ್.ಕೆ.ಉಪಾಧ್ಯಾಯರು ಕರೆ ನೀಡಿದರು. ದಿ. 27 ರಂದು ಗುಲ್ಬರ್ಗಾದಲ್ಲಿ ಸಿಪಿಐ(ಎಂ) ಸಂಘಟಿಸಿದ್ದ ಕೋಮು ಸೌಹಾರ್ದತ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತಿದ್ದರು.

ಅಯೋಧ್ಯೆಯ ಪ್ರಕರಣ ಆರ್ಥಿಕ ಸಮಸ್ಯೆಗಳನ್ನು ಹಿಂದೆ ಸರಿಸಿದೆ. ಬೆಲೆ ಏರಿಕೆ, ನಿರುದ್ಯೋಗ, ಖಾಸಗೀಕರಣ, ವಿದೇಶೀ ಸಾಲ, ಡಂಕೆಲ್ ಕರಾರುಗಳು ಮೊದಲಾದ ಜನಸಾಮಾನ್ಯರನ್ನು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಸಲುವಾಗಿ, ಹೋರಾಟಗಳನ್ನು ನಡೆಸಲು ಅಯೋಧ್ಯೆ ಸಮಸ್ಯೆ ಅಡ್ಡಬಂದಿದೆ. ಕೇಂದ್ರದ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟ ನಡೆಯಬೇಕು. ಹಿಂದೂ- ಮುಸ್ಲಿಂ ಪಂಥವಾದಿಗಳ ವಿರುದ್ಧವೂ ಚಳುವಳಿ ನಡೆಯಬೇಕು. ಹಿಂದುತ್ವ ಅಧಿಕಾರಕ್ಕೆ ಬಂದರೆ ಹಿಟ್ಲರನ ಪುನರ್ಜನ್ಮವಾದಂತೆ. ಜೀವದ ಪಣ ತೊಟ್ಟು ಅದರ ವಿರುದ್ಧ ಹೋರಾಡಿ ಎಂದು ಎನ್.ಕೆ.ಉಪಾಧ್ಯಾಯ ಕರೆ ನೀಡಿದರು.

ರಾಜ್ಯ ಸಮಿತಿ ಸದಸ್ಯರಾದ ಮಹಮ್ಮದ್ ದಸ್ತಗೀರ ಅವರು ಭಾಷಣ ಮಾಡುತಾ ಬಂಡವಾಳಶಾಹಿ ವರ್ಗ ಜಾತೀಯತೆಯನ್ನು ಕಾರ್ಮಿಕರ ಐಕ್ಯತೆ ಮುರಿಯುವುದರ ಸಲುವಾಗಿ ಹೇಗೆ ಉಪಯೋಗಿಸುತ್ತದೆಂದು ವಿವರಿಸಿ, ಜಾತೀಯತೆ ಬಹಳ ಅಪಾಯಕಾರೀ ಎಂದು ಹೇಳಿದರು.

ಕಲ್ಲಪ್ಪ ಕಿರಣಗಿಯವರು ಮಾತನಾಡಿ ಜಿಲ್ಲಾಧಿಕಾರಿಗಳು, ಪೋಲೀಸರು ಸರಿಯಾಗಿ ತಮ್ಮ ಕರ್ತವ್ಯ ನಿರ್ವಹಿಸದೆ ಹಿಂಸಾಚಾರ ಉಲ್ಬಣಿಸಲು ಕಾರಣರಾದರೆಂದು ಆರೋಪಿಸಿದರು. ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆಯವರು ಸ್ವಾಗತ ಭಾಷಣದಲ್ಲಿ ಅಯೋಧ್ಯೆ ಪ್ರಕರಣದಿಂದಾಗಿ ಜನರ ಮೇಲಾದ ಪರಿಣಾಮಗಳನ್ನು ವಿವರಿಸಿ ಮತೀಯ ಶಕ್ತಿಗಳ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸಮಾವೇಶ ಪ್ರಾರಂಭವಾಗುವ ಮುಂಚೆ ನೂರಾರು ಪಕ್ಷದ ಬೆಂಬಲಿಗರು ಮೂರು ಗಂಟೆ ಕಾಲ ಹದಿನೈದು ಕಿಲೋಮೀಟರಿನಷ್ಟುದೂರ ಮೆರವಣಿಗೆಯಲ್ಲಿ ಹೋಗಿ ಗಲಭೆಗೊಳಗಾದ ಹಿಂದೂ-ಮುಸ್ಲಿಂ ಪ್ರದೇಶಗಳಲ್ಲಿ ಮೆರವಣಿಗೆ ನಡೆಸಿದರು. ಅದರಲ್ಲಿ ಘೋಷಾ ಇದ್ದಾ, ಘೋಷಾ ಇಲ್ಲದ ಮುಸ್ಲಿಮ್ ಮಹಿಳೆಯರು, ಹಿಂದೂ ಮಹಿಳೆಯರೇ ನೂರಾರು ಸಂಖ್ಯೆಯಲ್ಲಿದ್ದರು. ಕಹಾಬಾದಿನ ಎಬಿಎಲ್ ಬೆಟ್‌ಕಾಕ್ ಕಾರ್ಖಾನೆಯ ಮಹಿಳಾ ಕಾಂಟ್ರಾಕ್ಟ್ ಕೆಲಸಗಾರರೂ ಇತರ ಕೆಲಸಗಾರರೂ ಭಾಗವಹಿಸಿದ್ದರು.

ದಿ. 28 ರಂದು ಎನ್.ಕೆ.ಉಪಾಧ್ಯಾಯ, ಮಹಮ್ಮದ್ ದಸ್ತಗೀರ ಅವರು ಮಹಮ್ಮದ ಜಲಾಲ ಮತ್ತು ನಮ್ಮ ದಿನಾಯಾ ಪಿ.ಸಿ.ಯಲ್ಲಿ ಗಲಭೆ ಪೀಡಿತ ಹಿಂದೂ-ಮುಸ್ಲಿಂ ಪ್ರದೇಶಗಳಿಗೆ ಹೋಗಿ ಜನರನ್ನು [illegible] ಸ್ಥಿತಿಯನ್ನು ತಿಳಿದುಕೊಂಡರು.

"ಏಕೀಕರಣದ ಕನಸು ನನಸಾಗಿಸಲು ದಿಟ್ಟ ಹೆಜ್ಜೆ ಇಡಲಿಲ್ಲ"

ದೇಶದ ಬಡತನ, ಅನಕ್ಷರತೆ, ನಿರುದ್ಯೋಗ, ಅಸ್ಪೃಶ್ಯತೆಯಂತ ಸಮಸ್ಯೆಗಳ ನಿವಾರಣೆ ಒಂದು ವ್ಯವಸ್ಥಿತ ಹಾಗೂ ನಿಗದಿತ ಕಾರ್ಯ ಯೋಜನೆ ಸರ್ಕಾರಗಳಲ್ಲಿ ಇಲ್ಲದಿರುವುದೇ ಜನತೆ ಹಿಂದುಳಿದಿರುವಿಕೆ ಕಾರಣವಾಗಿದೆಯೆಂದು ಕರ್ನಾಟಕ ಸರ್ಕಾರ ಲೋಕಪಯೋಗಿ ಸಚಿವರಾದ ಶ್ರೀಮಾನ್ ಕೆ.ಹೆಚ್. ರಂಗನಾಥ್‌ರವರು ಹೇಳಿದರು. ಅವರು ಡಿ.ವೈ.ಎಫ್.ಐ. ಕೆ.ಜಿ. ಐ. ಕಾಲೋನಿಯಲ್ಲಿ ಏರ್ಪಡಿಸಿದ್ದ ಕರ್ನಾಟಕ ರಾಜ್ಯೋತ್ಸವದ ಬಹಿರಂಗ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು. ದುಡಿಯುವ ಜನತೆ ಬದುಕಲು ಕನಿಷ್ಟ ಅವಶ್ಯಕತೆ ಕಲ್ಪಿಸುವ ನಿರುದ್ಯೋಗದ ಬಗ್ಗೆ ಗಮನಹರಿಸಿ ಸರ್ವಜನರು ವಿದ್ಯಾವಂತರಾಗುವಂತೆ ಮಾಡುವುದು ಇಂದಿನ ಅಗತ್ಯವೆಂದು ಹೇಳಿದರು. 1956 ರ ಕರ್ನಾಟಕ ಏಕೀಕರಣ ಚಳುವಳಿಯ ಮುಖಂಡ ಎನ್.ಕೆ. ಉಪಾಧ್ಯಾಯರವರು ಮಾತನಾಡಿ ಏಕೀಕರಣದ ಕನಸು ರಾಜ್ಯದಲ್ಲಿರುವ ಅಪಾರ ಸಂಪತ್ತನ್ನು ಬಳಸಿ ಕನ್ನಡ ಸಮೃದ್ಧ ಕರ್ನಾಟಕ ನಿರ್ಮಾಣವಾಗಿತ್ತೆಂದು ಹೇಳಿ ಈ ನಿಟ್ಟಿನಲ್ಲಿ ಯಾವ ಸರ್ಕಾರಗಳೂ ದಿಟ್ಟ ಹೆಜ್ಜೆ ಹಿಡಿಯದಿರುವುದು ವಿಷಾದಕರವೆಂದರು.

ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ನಿರಂತರ ಹೋರಾಡುತ್ತಿರುವ ಡಿ. ವೈ.ಎಫ್.ಐ. ರಾಜ್ಯದ ನಿರುದ್ಯೋಗಿ ಯುವ ಜನತೆಯ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸುತ್ತಾ ಬಂದಿದೆ ಎಂದು ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವೈ. ಗುರುಶಾಂತ್ ಹೇಳಿ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಸಾಧನೆಗೆ ದುಡಿಯಲು ಹಾಗೂ ಜನತೆಯನ್ನು ಭಾಷೆ, ಧರ್ಮದ ಹೆಸರಿನಲ್ಲಿ ಎತ್ತಿ ಕಟ್ಟಿ ಐಕ್ಯತೆ ಸಾಮರಸ್ಯಕ್ಕೆ ಧಕ್ಕೆ ತರುವ ಶಕ್ತಿ ವಿರುದ್ಧ ಹೋರಾಡದೇಕೆಂದು ಕರೆ ನೀಡಿದರು.

ಗಾಂಧಿನಗರ ವಿಧಾನಸಭಾ ಸದಸ್ಯ ಆರ್. ದಯಾನಂದ ರಾವ್, ನಗರ ಸಭಾ ಸದಸ್ಯ ಎಸ್. ಆರ್. ಕೃಷ್ಣಕುಮಾರ್, ಯುವ ನಾಯಕ ವಸಂತರವರು ಸಮಾರಂಭದಲ್ಲಿ ಮಾತನಾಡಿ ಕನ್ನಡೇತರರಲ್ಲಿ ಪ್ರೀತಿ, ವಿಶ್ವಾಸ ಮೂಡಿಸಿ ಸೌಹಾರ್ದತೆಯಿಂದ ಬಾಳಲು ಸ್ಥಳೀಯ ಜನತೆಯ ಹಲವು ಸಮಸ್ಯೆಗಳ ಪರಿಹಾರಕ್ಕೆ ದುಡಿಯುವುದಾಗಿ ಭರವಸೆ ನೀಡಿದರು.

ರಾಜ್ಯೋತ್ಸವ ಅಂಗವಾಗಿ ಅಧಿಕ ಅಂಕ ಪಡೆದ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್. ಸಿ ವಿದ್ಯಾರ್ಥಿಗಳಿಗೆ ಉತ್ತೇಜನ ಬಹುಮಾನ, ಹೆಣ್ಣು ಮಕ್ಕಳು ಪಾಲ್ಗೊಂಡ ರಂಗೋಲಿ ಸ್ಪರ್ಧೆ, ಮುಂತಾದುವುಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಅಂದು ಬೆಳಿಗ್ಗೆ 9 ಗಂಟೆ "ಈ ಸಂಜೆ" ದಿನಪತ್ರಿಕೆಯ ಸಂಪಾದಕರಾದ ಮಾನ್ಯ ಶ್ರೀ ಜಾಣಗೆರೆ ವೆಂಕಟರಾಮಯ್ಯನವರು ರಾಜ್ಯೋತ್ಸವದ ಕಾರ್ಯಕ್ರಮವನ್ನು ಧ್ವಜಾರೋಹಣ ಮಾಡುವ ಮೂಲಕ ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಸಿ.ಓ.ಡಿ. ಸೂಪರಿಂಟೆಡೆಂಟ್ ಆಫ್ ಪೋಲೀಸ್ ಇನ್ಸ್‌ಪೆಕ್ಟರ್‌ವರು ಶ್ರೀಮಾನ್ ಕೆ.ಸಿ. ರಾಮಮೂರ್ತಿಯವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ತುಮಕೂರಿನಲ್ಲಿ ತಾಲ್ಲೂಕು ಮಟ್ಟದ ಎಸ್.ಎಫ್.ಐ. ಶಿಬಿರ

ತುಮಕೂರು : ತುಮಕೂರು ಜಿಲ್ಲೆಯ ಅಮ್ಮಸಂದ್ರದಲ್ಲಿ ತುರುವೇಕೆರೆ ತಾಲ್ಲೂಕು ಎಸ್.ಎಫ್.ಐ. ಕಾರ್ಯಕರ್ತರ ತರಬೇತಿ ಶಿಬಿರ ಇತ್ತೀಚೆಗೆ ನಡೆಯಿತು. ಶಿಬಿರದಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿ ಅಧ್ಯಕ್ಷರಾದ ಕಾಂ. ಜಿ.ಸಿ ಬಯ್ಯಾರೆಡ್ಡಿ ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್, ಕನ್ನಡ ಉಪನ್ಯಾಸಕರಾದ ಆನಂದವಾಡೇಕರ್ ಇತರರು ಮಾತನಾಡಿದರು. ಕಾರ್ಯಾಗಾರದಲ್ಲಿ 25 ಮಂದಿ ಕಾರ್ಯಕರ್ತರು ಭಾಗವಹಿಸಿದ್ದು ಒಂದು ದಿನದ ಈ ಶಿಬಿರ ಯಶಸ್ವಿಯಾಗಿ ಜರುಗಿತು.

ಸಿಪಿಐ(ಎಂ) ಉಳ್ಳಾಲ ಸಮಿತಿ ಒತ್ತಾಯ

ಅಯೋಧ್ಯೆಯನ್ನು 'ಸಂಘಪರಿವಾರ' ಬಾಬ್ರಿ ಮಸೀದಿಯನ್ನು ಕೆಡವಿದ ಕೃತ್ಯದ ಹಿನ್ನೆಲೆಯಲ್ಲಿ ಕೋಮು ಹಿಂಸಾಚಾರ ನಡೆದು ಅಪಾರ ಪ್ರಾಣಹಾನಿ ಆಸ್ತಿ ಪಾಸ್ತಿ ಲೂಟಿ ಹಾಗೂ ಸಾವಿರಾರು ಜನರು ಅಂಗವಿಕಲರಾಗಿ ನಿರ್ಗತಿಕರಾದ ಬಗ್ಗೆ ಸಿಪಿಐ(ಎಂ) ಉಳ್ಳಾಲ ವಲಯದ ಸಮಿತಿ ತೀವ್ರ ದುಃಖ ವ್ಯಕ್ತಪಡಿಸಿದೆ. ಸಂತ್ರಸ್ತ ಜನರಿಗೆ ಪರಿಹಾರ ಕೊಡಬೇಕು, ಅಂಗಡಿ ಮುಂಗಟ್ಟು ಆಸ್ತಿಪಾಸ್ತಿ ಹಾನಿಗೊಂಡವರಿಗೆ ಸಂಪೂರ್ಣ ನಷ್ಟವನ್ನು ಸರಕಾರ ಭರ್ತಿ ಮಾಡಿಕೊಡಬೇಕು, ವ್ಯಾಪಾರ ವಹಿವಾಟು ಮಾಡಲು ರಕ್ಷಣೆ ಕೊಡಬೇಕು ಎಂದು ಅದು ಒತ್ತಾಯಿಸಿದೆ.

ಉಳ್ಳಾಲ ಕ್ಷೇತ್ರದ ವಿವಿಧ ಕ್ಷೇತ್ರಗಳಲ್ಲಿ ನಡೆದ ಲೂಟಿ ಮತ್ತು ದೌರ್ಜನ್ಯಕ್ಕೆ ಪೋಲೀಸು ನಿಷ್ಕ್ರಿಯತೆ ಮತ್ತು ಪಕ್ಷಪಾತತನದ ವರ್ತನೆ ಕಾರಣವೆಂದು ವ್ಯಾಪಕವಾಗಿ ಆರೋಪಗಳು ಕೇಳಿ ಬರುತ್ತಿರುವುದರಿಂದ ಒಂದೆರಡು ಮೇಲಾಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿ ಕೈ ತೊಳೆದುಕೊಂಡರೇ ಸಾಲದು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥ ಪೋಲೀಸ್ ಸಿಬ್ಬಂದಿಗಳನ್ನು ಶಿಕ್ಷಿಸಬೇಕೆಂದು ಅದು ಒತ್ತಾಯಿಸಿದೆ.

ಕೋಮು ಹಿಂಸಾಚಾರ ನಡೆಸಿದ ಕೊಲೆಗಡುಕರು ಮತ್ತು ಲೂಟಿಕೋರರನ್ನು ಶೀಘ್ರದಲ್ಲಿ ಪತ್ತೆಹಚ್ಚಿ ನಿರ್ದಾಕ್ಷಿಣ್ಯವಾಗಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.

ಧಾರ್ಮಿಕರ ಮೂಲಭೂತವಾದಿಗಳ ವಿಷಪ್ರಚಾರಕ್ಕೆ ಜನತೆ ಬಲಿ ಬೀಳಬಾರದು. ದೇಶದ ಐಕ್ಯತೆ ಸಮಗ್ರತೆ ಹಾಗೂ ಕೋಮು ಸೌಹಾರ್ದತೆಯನ್ನು ಎತ್ತಿ ಹಿಡಿದು ಕೋಮುವಾದಿ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಜಾತ್ಯಾತೀತ ಶಕ್ತಿಗಳ ಹೋರಾಟವನ್ನು ದೃಢವಾಗಿ ಬೆಂಬಲಿಸಬೇಕೆಂದು ಶ್ರೀ ರಾಮಚಂದ್ರ ಉಚ್ಚಿಲ್‌ರವರ ಅಧ್ಯಕ್ಷತೆಯಲ್ಲಿ ಸೇರಿದ ವಲಯ ಸಮಿತಿ ಜನರನ್ನು ವಿನಂತಿಸಿದೆ.



ರಂಗೋಲಿಯಲ್ಲಿ ಕೋಮು ಸಾಮರಸ್ಯ - ಬಹುಮಾನ ವಿಜೇತ ರಂಗೋಲಿ

"ಕೋಮು ಸಾಮರಸ್ಯ ಕಾಪಾಡಿ"

ಸಿಐಟಿಯು ರಾಜ್ಯ ಮಂಡಳಿ ಕರೆ

ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಹಿಂದೂ ಮತಾಂಧರು ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ತಲೆದೋರಿದ ಕೋಮು ಗಲಭೆಗಳಿಂದ ಉಂಟಾದ ಪರಿಸ್ಥಿತಿಯನ್ನು ಅವಲೋಕಿಸಿ ಕೋಮು ಸಾಮರಸ್ಯವನ್ನು, ಕಾರ್ಮಿಕ ವರ್ಗದ ಐಕ್ಯತೆಯನ್ನು ರಕ್ಷಣೆ ಮಾಡಲು ಸೂಕ್ತ ಕಾರ್ಯಕ್ರಮವನ್ನು ರೂಪಿಸಲು ಸಿ.ಐ.ಟಿ.ಯು ರಾಜ್ಯ ಮಂಡಳಿ ತುರ್ತು ಸಭೆಯನ್ನು 25-12-1992 ರಂದು ಬೆಂಗಳೂರಿನಲ್ಲಿ ಕರೆಯಲಾಗಿತ್ತು. ಸಿಐಟಿಯು ರಾಜ್ಯ ಸಮಿತಿಯ ಅಧ್ಯಕ್ಷರಾಗಿರುವ ಎಸ್. ಸೂರ್ಯನಾರಾಯಣ ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಅವರು ಮಂಡಿಸಿದ ವರದಿಯನ್ನು ಮತ್ತು ಉಪಾಧ್ಯಕ್ಷ ಸಿ.ನಂಜುಂಡಪ್ಪ ಅವರು ಮಂಡಿಸಿದ "ಕೋಮು ಸಾಮರಸ್ಯ ಕಾಪಾಡಿರಿ" ನಿರ್ಣಯವನ್ನು ಸುದೀರ್ಘವಾಗಿ ಚರ್ಚಿಸಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಯಿತು.

"ಸಂಘ ಪರಿವಾರ"ದ ನೇತೃತ್ವದಲ್ಲಿ ಕರಸೇವೆಯ ಹೆಸರಿನಲ್ಲಿ ಉನ್ಮತ್ತ ಮತಾಂಧ ಜನರು ಐದು ಶತಮಾನಗಳಷ್ಟು ಪುರಾತನವಾದ ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿದುದನ್ನ ಮತ್ತು ಅನಂತರ ದೇಶದಲ್ಲಿಯೂ ಹಾಗೂ ವಿದೇಶಗಳಲ್ಲಿಯೂ ಪೂಜಾ ಸ್ಥಳಗಳನ್ನು ಕೆಡವಿರುವುದನ್ನು ಖಂಡಿಸಿದ ಸಿಐಟಿಯು ರಾಜ್ಯಮಂಡಳಿ ಸಭೆ ಅಂಗೀರಿಸಿದ ನಿರ್ಣಯ.

ಇದೇ ಸಂಘ ಪರಿವಾರದವರು ಹರಡುತ್ತಿರುವ ಕೋಮು ವಿಷವು ಕಾರ್ಮಿಕ ಸಂಘಗಳ ಐಕ್ಯತೆಯನ್ನು ಒಡೆದು ಬಂಡವಾಳಗಾರರ ಲಾಭವನ್ನು ಹೆಚ್ಚಿಸಲು ನೆರವಾಗುತ್ತದೆ, ಐ.ಎಂ.ಎಫ್. ವಿಶ್ವಬ್ಯಾಂಕ್ ಪ್ರೇರಿತ ಹೊಸ ಆರ್ಥಿಕ ನೀತಿಗೆ ಬಿ.ಜೆ.ಪಿ. ನೇತೃತ್ವದ ಈ ಶಕ್ತಿಗಳು ಬೆಂಬಲ ಕೊಡುತ್ತಾ ಬಂದಿವೆ ಎಂಬುದರ ಕಡೆ ಈ ನಿರ್ಣಯ ಕಾರ್ಮಿಕರ ಗಮನ ಸೆಳೆದಿದೆ.

ಪ್ರಧಾನಿ ಕಾಂಗ್ರೆಸ್ (ಐ) ನಾಯಕ ಶ್ರೀ. ಪಿ.ವಿ ನರಸಿಂಹರಾವ್ ಸಕಾಲದಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳದೆ ಬಾಬ್ರಿ ಮಸೀದಿ ಧ್ವಂಸವಾಗುವುದಕ್ಕೆ ದಾರಿ ಮಾಡಿಕೊಟ್ಟರು ಎಂದೂ ನಿರ್ಣಯ ಖಂಡಿಸಿದೆ.

ಕರ್ನಾಟಕದ ಮಂಗಳೂರು, ಮೈಸೂರು, ತುಮಕೂರು, ಕುಣಿಗಲ್, ಗುಲ್ಬರ್ಗಾ, ಬೀದರ್ ಮತ್ತೂ ಕೆಲವು ಕಡೆ ಪೋಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಕೋಮು ಗಲಭೆಗಳನ್ನು ತಡೆಯಲು ವಿಫಲವಾಗಿರುವುದನ್ನು, ಕೋಮು ವಾದಿಗಳಿಗೆ ಪ್ರೋತ್ಸಾಹದಾಯಕವಾಗಿ ವರ್ತಿಸಿರುವುದನ್ನು, ಪಕ್ಷಪಾತಿಗಳಾಗಿ ನಡೆದುಕೊಂಡಿರುವುದನ್ನು ರಾಜ್ಯ ಮಂಡಳಿ ಖಂಡಿಸಿದೆ. ಪೋಲೀಸ್ ಇಲಾಖೆ ನಿಷ್ಪಕ್ಷಪಾತವಾಗಿ ಸಕಾಲದಲ್ಲಿ ಕ್ರಮಕೈಗೊಂಡಿದ್ದರೆ, ರಾಜ್ಯದಲ್ಲಿ ಇಷ್ಟು ಸಾವು ನೋವುಗಳು ಆಗುತ್ತಿರಲ್ಲ. ಆಸ್ತಿಪಾಸ್ತಿಗಳಿಗೆ ಇಷ್ಟು ನಷ್ಟ ಸಂಭವಿಸುತ್ತಿರಲಿಲ. ಈ ವಿಷಯದಲ್ಲಿ ರಾಜ್ಯ ಸರ್ಕಾರವು ನ್ಯಾಯಾಂಗ ವಿಚಾರಣೆ ನಡೆಸಬೇಕೆಂದೂ, ಕರ್ತವ್ಯಚ್ಯುತರಾದ ಪೋಲೀಸ್ ಅಧಿಕಾರಿಗಳನ್ನು ಶಿಕ್ಷಿಸಬೇಕೆಂದು ರಾಜ್ಯ ಮಂಡಲಿಯ ನಿರ್ಣಯ ಆಗ್ರಹ ಪಡಿಸಿದೆ.

ಡಿಸೆಂಬರ್ 19 ರಂದು ನವದೆಹಲಿಯಲ್ಲಿ ಎಡ ಪಕ್ಷಗಳು ನಡೆಸಿದ ಸಮಾವೇಶದಲ್ಲಿ ಭಾಗವಹಿಸಿದ್ದ 11 ರಾಜಕೀಯ ಪಕ್ಷಗಳು, ಸಿ.ಐ.ಟಿ.ಯು ಮತ್ತು ಇತರ 34 ಸಾಮೂಹಿಕ ಸಂಘಟನೆಗಳು ದೇಶದ ಐಕ್ಯತೆಯನ್ನು ಮತ್ತು ಕೋಮು ಸಾಮರಸ್ಯವನ್ನು ಕಾಪಾಡಲು ಜಾತ್ಯತೀತೆಯನ್ನು ಎತ್ತಿ ಹಿಡಿಯಲು ಒಟ್ಟಾಗಿ ಕೆಲಸ ಮಾಡಲು ತೀರ್ಮಾನಿಸಿವೆ. ಆ ಸಮಾವೇಶವು ಜನವರಿ 1 ರಿಂದ 15 ರವರೆಗೆ ಮನೆ ಮನೆಗೆ ಹೋಗಿ ಪ್ರಚಾರ ಮಾಡಬೇಕೆಂದೂ ಹಳ್ಳಿಗಳಲ್ಲಿ, ವಾರ್ಡುಗಳಲ್ಲಿ, ಮೊಹಲ್ಲಾಗಳಲ್ಲಿ, ಕಾರ್ಖಾನೆಗಳಲ್ಲಿ ಸಭೆಗಳನ್ನು ನಡೆಸಬೇಕೆಂದು, ಜನವರಿ 16 ರಿಂದ 30 ರವರೆಗೆ ರ್‍ಯಾಲಿಗಳನ್ನು ನಡೆಸಬೇಕೆಂದು ಕರೆ ಕೊಟ್ಟಿದ್ದು ಈ ಕರೆಯನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲು ಸಿಐಟಿಯು ಕಾರ್ಮಿಕ ಸಂಘಗಳು ತಕ್ಷಣದಿಂದ ಕಾರ್ಯ ಪ್ರವರ್ತರಾಗಬೇಕೆಂದು ಕರೆ ನೀಡಿ ಇತರ ಎಲ್ಲಾ ಕಾರ್ಮಿಕ ಸಂಘಗಳಿಗೂ ಸಿಐಟಿಯು ರಾಜ್ಯಮಂಡಳಿಯ ನಿರ್ಣಯ ಮನವಿ ಮಾಡಿದೆ.

ಬಾಬ್ರಿ ಮಸೀದಿಯ ನಿವೇಶನ ಮತ್ತು ಸುತ್ತಲಿನ ಸ್ಥಳವನ್ನು ಕೇಂದ್ರ ಸರ್ಕಾರ ತನ್ನ ವಶಕ್ಕೆ ತಗೆದುಕೊಳ್ಳಬೇಕೆಂದು, ಬಾಬ್ರಿ ಮಸೀದಿ ವಿವಾದಕ್ಕೆ ಸಂಬಂಧಿಸಿದ ಎಲ್ಲಾ ಕೇಸುಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದು ಈ ನಿರ್ಣಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.



ಮಾರ್ಚ್ 15 : ಅಸಂಘಟಿತ ಕಾರ್ಮಿಕರ ರಾಜ್ಯವ್ಯಾಪಿ ಮುಷ್ಕರ, ಪಿಕೆಟಿಂಗ್

ಸಿಐಟಿಯು ರಾಜ್ಯ ಮಂಡಳಿ ಇನ್ನೆರಡು ನಿರ್ಣಯ ಅಂಗೀಕರಿಸಿ ಕಳೆದ ನವಂಬರ್ 1 ರಿಂದ 3 ರವರೆಗೆ ಕಲ್ಕತ್ತಾದಲ್ಲಿ ನಡೆದ ಅಸಂಘಟಿತ ಕಾರ್ಮಿಕರ ಪ್ರಥಮ ಅಖಿಲ ಭಾರತ ಸಮಾವೇಶದ ಕರೆಯನ್ನು ರಾಜ್ಯದಲ್ಲಿ ಜಾರಿ ಮಾಡಲು ತೀರ್ಮಾನಿಸಿದೆ. ದೇಶದ ಐಕ್ಯತೆ, ಜಾತ್ಯಾತೀತೆಗೆ ಕೋಮುವಾದಿಗಳಿಂದ ಎದುರಾಗಿರುವ ಸವಾಲನ್ನು ಸಮರ್ಪಕವಾಗಿ ಎದುರಿಸಲು ಸಂಘಟಿತ ಕಾರ್ಮಿಕರನ್ನು ಅವರು ಆರ್ಥಿಕ ಬೇಡಿಕೆಗಳಿಗೆ ಈಗ ಐಕ್ಯ ಹೋರಾಟಕ್ಕೆ ಇಳಿಸುವುದು ತುಂಬಾ ಮುಖ್ಯವಾಗಿದೆ ಎಂದು ರಾಜ್ಯ ಮಂಡಳಿ ಸಭೆ ಅಭಿಪ್ರಾಯಪಟ್ಟಿದೆ.

ಅಸಂಘಟಿತ ಕಾರ್ಮಿಕರ ಚಳುವಳಿಯ ಭಾಗವಾಗಿ ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಹುಬ್ಬಳ್ಳಿಯನ್ನು ಕೈಮಗ್ಗ ನೇಕಾರರ ರಾಜ್ಯ ಸಮ್ಮೇಳನವನ್ನು ಮಾರ್ಚ್ ತಿಂಗಳ 7 ಮತ್ತು 8 ರಂದು ಮಂಗಳೂರಿನಲ್ಲಿ ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನವನ್ನು ಮತ್ತು ಫೆಬ್ರವರಿ 22 ರಂದು ಬೆಂಗಳೂರಿನಲ್ಲಿ ಗುತ್ತಿಗೆ ಕಾರ್ಮಿಕರ ಸಮಾವೇಶನವನ್ನು ನಡೆಸಲು ರಾಜ್ಯ ಮಂಡಳಿ ತೀರ್ಮಾನಿಸಿದೆ.

ಮಾರ್ಚ್ ತಿಂಗಳ 15 ರಂದು ಬೀಡಿ ಕಾರ್ಮಿಕರು, ತೋಟ ಕಾರ್ಮಿಕರು, ಹೋಟಲ್ ಕಾರ್ಮಿಕರು, ಕೈಮಗ್ಗದ ನೇಕಾರರು ಮೊದಲಾದ ಅಸಂಘಟಿತ ವಲಯದ ಕಾರ್ಮಿಕರು ರಾಜ್ಯವ್ಯಾಪಿ ಮುಷ್ಕರ ನಡೆಸಲು, ಸಿ.ಐ.ಟಿ.ಯು ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ.

ಭೂಪಾಲ : ಬಿ.ಜೆ.ಪಿ. ಸರಕಾರದ ಉಸ್ತುವಾರಿಯಲ್ಲೇ ಅಮಾನುಷ ಅತ್ಯಾಚಾರ



ಮಧ್ಯ ಪ್ರದೇಶದ ರಾಜಧಾನಿ ಭೋಪಾಲ ಇಂದು ಚಿಂದಿ-ಚಿಂದಿಯಾಗಿರುವ ನಗರ. ಗುಡಿಸಲುಗಳು, ಮನೆಗಳು, ಬಾಝಾರ್‌ಗಳೆಲ್ಲಾ ಸುಟ್ಟು ಬೂದಿಯಾಗಿವೆ. ಸಾವಿರಾರು ಮಂದಿ ನಿರಾಶ್ರಿತ ಶಿಬಿರಗಳಲ್ಲಿ ದಿನಗಳೆಯುತ್ತಿದ್ದಾರೆ- ಆರ್.-ಎಸ್. ಎಸ್., ವಿ.ಹೆಚ್.ಪಿ., ಭಜರಂಗದಳದ ಕಾರ್ಯಕರ್ತರು ಪೋಲೀಸರ ಸಹಕಾರದೊಂದಿಗೆ ಬಿ.ಜೆ.ಪಿ. ರಾಜ್ಯ ಸರಕಾರದ ನೇರ ಉಸ್ತುವಾರಿಯಲ್ಲಿ ನಡೆಸಿದ ಹಿಂಸಾಚಾರ, ಅತ್ಯಾಚಾರದ ನೆನಪುಗಳಿಂದ ಈಗಲೂ ತತ್ತರಿಸುತ್ತಿದ್ದಾರೆ. ಇಷ್ಟೊಂದು ಅತ್ಯಾಚಾರ ಅವರು ನಡೆಸುತ್ತಾರೆಯೇ ಎಂದು ನಂಬಲೂ ಈಗಲೂ ಅಸಾಧ್ಯವಾದಂತಹ ಅಮಾನುಷ ವರ್ತನೆಗಳಿಗೆ ಅವರು ತುತ್ತಾಗಿದ್ದರು. ಆ ಸರಕಾರ ಈಗ ವಜಾ ಆಗಿದ್ದರೂ ತನ್ನ ಹಿಂದೆ ಅದೊಂದು ಪಾಳು ಬಿದ್ದ ಪ್ರದೇಶವನ್ನು, ಜನಗಳ ಮನಸ್ಸಿನಲ್ಲಿ ಕೋಮು ವಿಷ ಆಳವಾಗಿ ಹರಡಿರುವ ಒಂದು ಪ್ರದೇಶವನ್ನು ಬಿಟ್ಟು ಹೋಗಿದೆ.

ದಂಗೆಗಳಿಂದಾಗಿ ಸುಮಾರು 40 ಸಾವಿರ ಮಂದಿ ತಮ್ಮ ಮನೆ-ಮಾರು ಬಿಟ್ಟೋಡಿದ್ದಾರೆ, 150 ಕ್ಕೂ ಹೆಚ್ಚು ಮಂದಿ ಅಮಾನುಷ ರೀತಿಯಲ್ಲಿ ಕೊಲ್ಲಲ್ಪಟ್ಟಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇಂದ್ರ ಶೈಲಿ ಪತ್ರಕರ್ತರಿಗೆ ತಿಳಿಸಿದ್ದಾರೆ. ಸುಮಾರು 20 ಸಾವಿರ ನಿರಾಶ್ರಿತರಿರುವ ಒಂದು ಕ್ಯಾಂಪ್‌ನಲ್ಲಿ ಸಿಪಿಐ(ಎಂ) ಒಂದು ಸರ್ವೆ ನಡೆಸಿತು. ಸರ್ವೆ ನಡೆಸಿದ 1181 ಕುಟುಂಬಗಳಲ್ಲಿ 959 ಮುಸಲ್ಮಾನರ ಕುಟುಂಬಗಳು, 222 ಹಿಂದೂ ಕುಟುಂಬಗಳು. ಈ 1181 ಕುಟುಂಬಗಳಿಗಾದ ಹಾನಿ 5 ಕೋಟಿ 99 ಲಕ್ಷ, ಇಷ್ಟೊಂದು

> **"ವಾತಾವರಣ ಶಾಂತಿಯುತವಾಗಿದೆ" ಎಂದು ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತಿದ್ದಾಗ ಭೂಪಾಲ ಹತ್ತಿ ಉರಿಯುತ್ತಿತ್ತು. ಸತತವಾಗಿ ಏಳು ದಿನ.**

ಅಪಾರ ಸಂಖ್ಯೆಯಲ್ಲಿದ್ದ ನಿರಾಶ್ರಿತರಿಗೆ ಪರಿಹಾರ ಒದಗಿಸಲು ಬಿ.ಜೆ.ಪಿ. ರಾಜ್ಯ ಸರಕಾರ ಯಾವುದೇ ಕ್ರಮವಹಿಸಲಿಲ್ಲ. ಸಾರ್ವಜನಿಕರ ನೆರವಿನಿಂದ ಹಾಕಿದ ಪರಿಹಾರ ಕ್ಯಾಂಪುಗಳಿಗೆ ನೀರು ಮುಂತಾದ ಮೂಲಭೂತ ಅಗತ್ಯಗಳನ್ನು ಕೂಡಾ ಪೂರೈಸಲಿಲ್ಲ. ಮುಖ್ಯಮಂತ್ರಿ ಪಟ್ವಾ "ವಾತಾವರಣ ಶಾಂತಿಯುತವಾಗಿದೆ" ಎಂದು ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತಿದ್ದಾಗ ಭೂಪಾಲ ಹತ್ತಿ ಉರಿಯುತ್ತಿತ್ತು. ಸತತವಾಗಿ ಏಳು ದಿನ. ಈ ವಿನಾಶದ ನಿಜವಾದ ಗಾತ್ರವೆಷ್ಟು ಎಂದು ಇನ್ನು ಅಂದಾಜು ಹಾಕಿಲ್ಲ.

ನಿರಾಶ್ರಿತ ಶಿಬಿರಗಳಲ್ಲಿನ ವಾಸಿಗಳದ್ದು ಪ್ರತಿಯೊಬ್ಬರದ್ದೂ ಒಂದೊಂದು ಗೋಳಿನ ಕಥೆ. "ಹೊರಗಿನವರು ಮನೆಗೆ ನುಗ್ಗಿದರು, ಲೂಟಿಮಾಡಿದರು, ಬೆಂಕಿ ಹಚ್ಚಿ ಓಡಿಹೋದರು,". "ಪೋಲೀಸರು ಮನೆಯೊಳಗೆ ಬಂದು ನಮ್ಮನ್ನು ಹೊರಗೆಸೆದರು, ದಂಗೆಕೋರರಿಗೆ ಅವಕಾಶ ಮಾಡಿಕೊಟ್ಟರು", "ಪೋಲೀಸರು ಬಂದರು, ಯುವಕರನ್ನು ಹೊರಗೆಳೆದೊಯ್ದುರು, ಗುಂಡಿಕ್ಕಿ ಕೊಂದರು" ಇದು ಹೆಚ್ಚಿನವರ ಗೋಳಿನ ಕಥೆಯ ಸಾರಾಂಶ. ಹಳೆ ನಗರ ಪ್ರದೇಶದಲ್ಲಿ ಮುಸಲ್ಮಾನ ಯುವಕರನ್ನು ಗುಂಡಿಕ್ಕಿ ಕೊಂದು ಸುಟ್ಟುಹಾಕಿದ, ಜನಗಳನ್ನು ಜೀವಂತ ಸುಟ್ಟ ಘಟನೆಗಳೂ ವರದಿಯಾಗಿದೆ.

"ವಿಜಯೋತ್ಸವ" ವಿನಾಶಲೀಲೆಗೆ ನಾಂದಿ

ಈ ಗಲಭೆ ಆರಂಭವಾದದ್ದು ಹೇಗೆ? ಡಿಸೆಂಬರ್ 6 ರಂದು ಅಯೋಧ್ಯಾ ಘಟನೆಯ ನಂತರ ನಗರದಲ್ಲಿ ಸ್ಮಾಶಾನ ಮೌನ ವ್ಯಾಪಿಸಿತು. ಬಿ.ಜೆ.ಪಿ. ಕೂಟದ ಮಂದಿ ಆ ರಾತ್ರಿ "ವಿಜಯೋತ್ಸವ" ಆರಂಭಿಸಿದಾಗಲೇ ಈ ಮೌನ ಒಡೆದದ್ದು. ಪಟಾಕಿಗಳ ಸದ್ದಿನ ನಡುವೆ ಈ ಮಂದಿ ಸಿಹಿತಿಂಡಿ ಹಂಚಿದರು. ವಾತಾವರಣ ಗಂಭೀರಗೊಂಡಿತ್ತು. ಭಯ ವ್ಯಾಪಿಸಿತ್ತು. ಆದರೆ ಆ ರಾತ್ರಿ ಏನೂ ಆಗಲಿಲ್ಲ. ಮರುದಿನ ಬೆಳಿಗ್ಗೆ ಕೆಲವು ಮುಸಲ್ಮಾನ ಹುಡುಗರು ಕೆಲವು ರಸ್ತೆಗಳಲ್ಲಿ ಕಲ್ಲುಗಳನ್ನಿಟ್ಟು ತಡೆ ಹಾಕಿದರು, ಕಲ್ಲೆಸೆದರು, ಘರ್ಷಣೆಗಳು ಆರಂಭವಾದವು. ಎರಡೂ ಕೋಮಿನ ಗುಡಿಸಲುವಾಸಿಗಳೇ ಇದಕ್ಕೆ ಮೊದಲ ಆಹುತಿ ಎರಡೂ ಕೋಮಿನ ಪೂಜಾಸ್ಥಳಗಳ ಮೇಲೂ ಹಲ್ಲೆ ನಡೆದವು. ನಂತರ ಸುಳ್ಳು ವದಂತಿಗಳದ್ದೆ ದರ್ಬಾರು. ಇಡಬಾರರು ಕೆಲವು ಪತ್ರಿಕೆಗಳು ಹಸೀಸುಳ್ಳುಗಳನ್ನು ಪ್ರಚಾರಮಾಡಿದವು. ಬಿ.ಜೆ.ಪಿ. ಹತೋಟಿಯ ಪತ್ರಿಕೆಯೊಂದು ಹಿಂದೂ

> **ಬಿ.ಜೆ.ಪಿ. ಹತೋಟಿಯ ಪತ್ರಿಕೆಯೊಂದು ಹಿಂದೂ ಮಹಿಳೆಯರ ಮಾನಭಂಗ ನಡೆದಿದೆ ಎಂಬ ಸುಳ್ಳು ಸುದ್ದಿಯನ್ನು ಪ್ರಕಟಿಸಿತು. ಇದು ಸುಳ್ಳು ಸುದ್ದಿ ಎಂದು ಆ ಪತ್ರಿಕೆಯೇ ಮತ್ತೆ ಪ್ರಕಟಿಸುವಷ್ಟರಲ್ಲಿ ಭೂಪಾಲ ಕೋಮು ದಳ್ಳುರಿಗೆ ಆಹುತಿಯಾಗಿತ್ತು.**

ಮಹಿಳೆಯರ ಮಾನಭಂಗ ನಡೆದಿದೆ ಎಂಬ ಸುಳ್ಳು ಸುದ್ದಿಯನ್ನು ಪ್ರಕಟಿಸಿತು. ಇದು ಸುಳ್ಳು ಸುದ್ದಿ ಎಂದು ಆ ಪತ್ರಿಕೆಯೇ ಮತ್ತೆ ಪ್ರಕಟಿಸುವಷ್ಟರಲ್ಲಿ ಭೂಪಾಲ ಕೋಮು ದಳ್ಳುರಿಗೆ ಆಹುತಿಯಾಗಿತ್ತು. ಡಿಸೆಂಬರ್ 8 ರಿಂದ 13 ರವರೆಗೆ ಇಡೀ ಭೋಪಾಲ ಆರ್.ಎಸ್.-ಎಸ್., ವಿ.ಹೆಚ್.ಪಿ., ಭಜರಂಗದಳದವರ ಸಂಪೂರ್ಣ ಹತೋಟಿಯಲ್ಲಿತ್ತು. ಮುಸಲ್ಮಾನರು ಆಕ್ರಮಣ ನಡೆಸಿದರೆಂಬ. ಸುಳ್ಳು ವದಂತಿ ಹರಡುವುದು ಜನಜಂಗುಳಿ ಮುಸಲ್ಮಾನ ಜನ ವಸತಿ ಹೆಚ್ಚಿರುವ ಪ್ರದೇಶಗಳ ಮೇಲೆ ಏರಿ ಹೋಗುವಂತೆ ಮಾಡುವುದು ಇದು ಅವರ ದಿನ ಚರ್ಯೆಯಾಯಿತು. ಪೋಲೀಸರು ಏನೂ ಮಾಡಲಿಲ್ಲ.

ಡಿಸೆಂಬರ್ 7 ರಂದೇ ಸಿಪಿಐ(ಎಂ) ಇಡೀ ನಗರವನ್ನು ಸೇನೆಗೆ ಒಪ್ಪಿಸಿ ಎಂದು ರಾಜ್ಯಪಾಲರನ್ನು, ಮುಖ್ಯಮಂತ್ರಿಗಳನ್ನು ಒತ್ತಾಯಿಸಿತ್ತು. ಮುಖ್ಯಮಂತ್ರಿಗಳು ನಿರಾಕರಿಸಿದರು, ಸೇನೆ ಸನ್ನದ್ಧವಾಗಿ ನಿಲ್ಲುವಂತೆ ಹೇಳಿದರಷ್ಟೇ ಭೂಪಾಲ 40 ಶೇ. ಮುಸಲ್ಮಾನ ಜನಸಂಖ್ಯೆಯಿರುವ ಪ್ರದೇಶ. ಬಾಬ್ರಿ ಮಸೀದಿ ಕೆಡವಿದ್ದರಿಂದ ಗಂಭೀರ ಪರಿಸ್ಥಿತಿ ಉಂಟಾಗುತ್ತದೆ ಎಂದು ಯಾರಾದರೂ ನಿರೀಕ್ಷಿಸಬಹುದಿತ್ತು. ಆದರೆ ಆಡಳಿತ ಯಾವ ಕ್ರಮವನ್ನು ಕೈಗೊಳ್ಳಲಿಲ್ಲ. ಡಿಸೆಂಬರ್ 7 ರಂದು ಗಲಭೆ ಸ್ಫೋಟಗೊಂಡಾಗ ನಗರದಲ್ಲಿ ಇದ್ದದ್ದು ಕೇವಲ 300 ಪೋಲೀಸರು, 136 ಬಂದೂಕುಗಳು. ಬಾಬ್ರಿಮಸೀದಿ ಕೆಡವಿದ್ದಕೆ ಪ್ರತಿಕ್ರಿಯೆ ಬರಲಿ, ನಂತರ ದೊಡ್ಡ ಪ್ರಮಾಣದಲ್ಲಿ ಗಲಬೆಗಳನ್ನು ನಡೆಯಲು ಅವಕಾಶ ನೀಡಿ ಹಿಂದೂಗಳೆಲ್ಲಾ ತಮ್ಮನ್ನೇ ಆಶ್ರಯಿಸುವಂತಾಗಲಿ ಎಂಬುದೇ ಬಿ.ಜೆ.ಪಿ. ಸರಕಾರದ ಬಯಕೆಯಾಗಿತ್ತು ಎಂಬುದು ಈಗ ಸ್ಪಷ್ಟ.

ಸಿಪಿಐ(ಎಂ) ಪ್ರಯತ್ನ

ಸಿಪಿಐ(ಎಂ) ನ ಶಕ್ತಿ ಸೀಮಿತವಾಗಿದ್ದರೂ ಪರಿಸ್ಥಿತಿಯನ್ನು ಹತೋಟಿಗೆ ತರಲು, ರಕ್ತಪಾತದಲ್ಲಿನೊಂದವರಿಗೆ ಪರಿಹಾರ ಒದಗಿಸಲು ಪ್ರಯತ್ನ ನಡೆಸಿದರು. ಪಕ್ಷದ ಮುಖಂಡರು ಡಿಸೆಂಬರ್ 7 ರಂದೇ ರಾಜ್ಯಪಾಲರನ್ನು ಭೇಟಿಯಾದರು. ಸಿಪಿಐ(ಎಂ) ಕಾರ್ಯಕರ್ತರು ನಿರಾಶ್ರಿತ ಶಿಬಿರಗಳಲ್ಲಿ ಬಿಡುವಿಲ್ಲದೆ ದುಡಿದರು.

ಡಿಸೆಂಬರ್ 19 ರಂದು ಹಿರಿಯ ಸಿಪಿಐ(ಎಂ) ಮುಖಂಡರಾದ ಸಮರ್‌ಮುಖರ್ಜಿ ಹಾಗೂ ಸಂಸತ್ ಸದಸ್ಯ ಮಹಮ್ಮದ್ ಅಮೀನ್ ನಗರಕ್ಕೆ ಭೇಟಿನೀಡಿ ಸಿಲಾಕ್ರತ ಶಿಬಿರಗಳನ್ನು ಸಂದರ್ಶಿಸಿದರು. ಈ ಸಂದರ್ಭದಲ್ಲಿ ಶಾಂತಿಯಾತ್ರೆ ನಡೆಸಲು ಜಿಲ್ಲಾ ಆಡಳಿತ ಅವಕಾಶ ನೀಡಲಿಲ್ಲ. ಒಂದು ದೊಡ್ಡ ಸಭೆ ನಡೆಯಿತು. ಸಿಪಿಐ ಎಂ.ಪಿ. ಭೋಗೇಂದ್ರ ಝಾ, ಕಾಂಗ್ರೆಸ್(ಐ) ಎಂ.ಪಿ. ದಿಗ್ವಿಜಯ್ ಸಿಂಗ್, ಜನತಾದಳದ ಸವಿತಾ ವಾಜಪೇಯಿ ಹಾಗೂ ಕ್ರಿಕೆಟ್ ಪಟು ಪಟೌಡಿಯವರೂ ಈ ಸಭೆಯಲ್ಲಿ ಹಾಜರಿದ್ದರು. ದೇಶದಲ್ಲಿ ಹರಿಯಬಿಟ್ಟಿರುವ ಕೋಮು ವಿಷವನ್ನು ತಡೆಯಲು ನಿರಂತರ, ಐಕ್ಯ ಪ್ರಚಾರ ನಡೆಸಬೇಕು ಎಂದು ಸಮರ್ ಮುಖರ್ಜಿ ಕರೆ ನೀಡಿದರು.

ಸಮರ್ ಮುಖರ್ಜೀ, ರಾಜ್ಯ ಸಿಪಿಐ(ಎಂ) ಮುಖಂಡರೊಂದಿಗೆ ರಾಜ್ಯಪಾಲ ಕುಂವರ್ ಮಹಮೂದ್ ಆಲಿ ಬಾಗ್‌ರನ್ನು ಭೇಟಿ ಮಾಡಿ ಒಂದು ಮನವಿ ಅರ್ಪಿಸಿದರು. ಸಿಪಿಐ(ಎಂ) ಮಾಡಿದ ಸರ್ವೇಯ ವರದಿಯನ್ನು ನೀಡಿದರು. ನಿರ್ಬಂಧಿತ ಸಂಘಟನೆಗಳ ವಿರುದ್ಧ ಕ್ರಮ, ದಂಗೆಕೋರರಿಗೆ ಶಿಕ್ಷೆ, ತೊಂದರೆಗೊಳಗಾದವರಿಗೆ ಪರಿಹಾರ, ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ, ದಂಗೆಗಳಲ್ಲಿ ಭಾಗವಹಿಸಿದ ಪೋಲೀಸ್ ಮತ್ತು ಆಡಳಿತ ಸಿಬ್ಬಂದಿಯ ವಿರುದ್ಧ ತ್ವರಿತ ಕ್ರಮ ಹಾಗೂ ನಿರಾಶ್ರಿತ ಶಿಬಿರಗಳಿಗೆ ಸೂಕ್ತ ಸೌಲಭ್ಯಗಳ ಪೂರೈಕೆ ಇತ್ಯಾದಿ ಬೇಡಿಕೆಗಳನ್ನು ಒತ್ತಾಯಿಸಲಾಯಿತು. ರಾಜ್ಯಪಾಲರು ಈ ಬೇಡಿಕೆಗಳನ್ನು ಒಪ್ಪಿಕೊಂಡರು. ಸಿಪಿಐ(ಎಂ) ನಿರಾಶ್ರಿತ ಶಿಬಿರಗಳಲ್ಲಿ ಹಾಗೂ ಇತರೆಡೆ ಮಾಡಿದ ಪ್ರಯತ್ನಗಳನ್ನು ಶ್ಲಾಘಿಸಿದರು.

ಡಿಸೆಂಬರ್ 16 ರಂದು ನೀಡಿದ ಅಧಿಕೃತ ಅಂಕೆ-ಸಂಖ್ಯೆ ಪ್ರಕಾರ ಇಡೀ ರಾಜ್ಯದಲ್ಲಿ 170 ಜನ ಸತ್ತರು. ಅವರಲ್ಲಿ 116 ಮಂದಿ ರಾಜಧಾನಿ ಭೋಪಾಲದಲ್ಲೇ ಸತ್ತರು. ಶಾಂತಿ, ಸೌಹಾರ್ದ ಕಾಪಾಡುವ ಜಿಲ್ಲಾ ಪ್ರಯತ್ನಗಳನ್ನು ಬಿ.ಜೆ.ಪಿ. ಸರಕಾರ ವಿಫಲಗೊಳಿಸಿತು. ಕರ್ಫ್ಯೂ ಪಾಸುಗಳನ್ನು ವಿ.ಹೆಚ್.ಪಿ., ಭಜರಂಗಧಳದವರಿಗೆ ಮುಕ್ತವಾಗಿ ನೀಡಲಾಯಿತು. ಆದರೆ ಸಿಪಿಐ(ಎಂ) ಮತ್ತಿತರ ಜಾತ್ಯಾತೀತ ಪಕ್ಷಗಳಿಗೆ ನೀಡಲು ನಿರಾಕರಿಸಿದರು. ಹಲವಾರು ಸಂದರ್ಭಗಳಲ್ಲಿ ಬಿ.ಜೆ.ಪಿ. ಮಂತ್ರಿಗಳೇ ಬಹಿರಂಗವಾಗಿ ದಂಗೆಕೋರರಿಗೆ ಪ್ರೋತ್ಸಾಹ ನೀಡಿದರು.

ಬಿ.ಜೆ.ಪಿ. ಸರಕಾರವೀಗ ವಜಾಗೊಂಡಿದೆ. ಪರಿಸ್ಥಿತಿ ಮೆಲ್ಲಮೆಲ್ಲನೆ ಸಾಮಾನ್ಯವಾಗುತ್ತಿದೆ. ಆದರೆ ಬಿ.ಜೆ.ಪಿ. ಬಿತ್ತಿದ, ದಂಗೆಗಳು ಹರಡಿಸಿದ ವಿಷಬೀಜ ಕೀಳಲು ಮಾತ್ರ ಬಹಳ ಸಮಯ ಹಿಡಿಯುತ್ತದೆ. ಈ ನಗರದ ಜನಗಳ ಮನದಲ್ಲಿ ಬೇರುಬಿಟ್ಟ ವಿಷಾಣುಗಳನ್ನು ನಾಶಮಾಡಲು ಒಂದು ಸತತ ಪ್ರಚಾರ ಅಗತ್ಯ.

"ನೂಲು ಕೊಡಿ ಇಲ್ಲವೆ ಕೊರಳಿಗೆ ಹಗ್ಗ ಕೊಡಿ" ಕಚ್ಚಾ ನೂಲು ಪೂರೈಕೆಗೆ ನೇಕಾರರ ಆಗ್ರಹ

ರಾಜ್ಯವಲ್ಲಿ ಕೈಮಗ್ಗ ನೇಕಾರರಿಗೆ ಕಳೆದ ಎರಡುತಿಂಗಳುಗಳಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಕಚ್ಚಾ ಮಾಲನ್ನು ಪೂರೈಸಲು ವಿಫಲವಾಗಿರುವುದನ್ನು ರಾಜ್ಯ ಕೈಮಗ್ಗ ನೇಕಾರರ ಸಮನ್ವಯ ಸಮಿತಿಯು ಬಲವಾಗಿ ಖಂಡಿಸಿದೆ. ನೂಲು ಪೂರೈಕೆ ಸ್ಥಗಿತಗೊಂಡಿರುವುದರಿಂದ ಉಂಟಾಗಿರುವ ಪರಿಸ್ಥಿತಿಯನ್ನು ಪರೀಶೀಲಿಸಲು 28-12-1992 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಸಮನ್ವಯ ಸಮಿತಿಯು ರಾಜ್ಯದ ಸುಮಾರು 25 ಸಾವಿರ ನೇಕಾರರ ಕುಟುಂಬಗಳು "ನಮಗೆ ನೂಲು ಕೊಡಿ ಇಲ್ಲವೆ ಕೊರಳಿಗೆ ಹಗ್ಗ ಕೊಡಿ" ಎಂದು ಕೇಳುವ ಪರಿಸ್ಥಿತಿ ಬಂದಿದೆ ಎಂದು ಅಭಿಪ್ರಾಯ ಪಟ್ಟಿದೆ.

ಮುಖ್ಯಮಂತ್ರಿಗೆ ಮನವಿ : ಅಸಮರ್ಪಕ ನೂಲಿನ ಪೂರೈಕೆಯಿಂದ ನಿರುದ್ಯೋಗಕ್ಕೆತಳ್ಳಲ್ಪಟ್ಟ ನೇಕಾರರ ಕುಟುಂಬಗಳು ಉಪವಾಸ ವನವಾಸ ಅನುಭವಿಸುತ್ತಿವೆ ಎಂದು ಮುಖ್ಯಮಂತ್ರಿ ಶ್ರೀ ಎಂ. ವೀರಪ್ಪಮೊಯಿಲಿ ಅವರಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಮನವಿಯೊಂದನ್ನು ಸಲ್ಲಿಸಿ, ತಮ್ಮ ಗೋಳನ್ನು ತೋಡಿಕೊಂಡಿದೆ. ತಿಂಗಳಲ್ಲಿ 300 ರಿಂದ 400 ರೂಪಾಯಿಗಳು ಮಾತ್ರ ಈಗ ತಿಂಗಳಲ್ಲಿ ಹತ್ತು ಹನ್ನೆರೆಡು ದಿನ ಮಾತ್ರ ಕೆಲಸ ಒದಗಿಸಲಾಗುತ್ತಿದ್ದು ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿರುವ ಈ ದಿನಗಳಲ್ಲಿ ನೇಕಾರರು ಜೀವನ ನಿರ್ವಹಣೆಗೊಸ್ಕರ ಪರದಾಡುವಂತಾಗಿದೆ.

ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಹೆಸರಿನಿಂದ ಬ್ಯಾಂಕ್ ಸಾಲವನ್ನು ಪಡೆಯುತ್ತದೆ. ನೇಕಾರರು ತನ್ನ ದುಡಿಮೆಯಿಂದ ಈ ಸಾಲವನ್ನು ಬಡ್ಡಿ ಸಮೇತವಾಗಿ ತೀರಿಸಬೇಕು. ಕೈಮಗ್ಗ ನಿಗಮಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಸಬ್ಸಿಡಿ ರೂಪದಲ್ಲಿ ಹಣ ದೊರೆಯುತ್ತದೆ. ನಿಗಮದ ಸಂಪನ್ಮೂಲಗಳ ಬಹುದೊಡ್ಡ ಭಾಗ ಸಂಸ್ಥೆಯ ಆಡಳಿತಾತ್ಮಕ ಖರ್ಚಿಗೆ ಹೋಗುವುದರಿಂದ ನೇಕಾರರಿಗೆ ಸಕಾಲಕ್ಕೆ ಸರಿಯಾಗಿ ಕಚ್ಚಾ ನೂಲು ಪೂರೈಸಲು ಅವರಿಗೆ ಸರಿಯಾಗಿ ವೇತನ ನೀಡಲು ಹಣ ಇರುವುದಿಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸಬೇಕೆಂದ ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕೇಂದ್ರ ಸರ್ಕಾರದಿಂದ ನಿಗಮಕ್ಕೆ ಬರಬೇಕಾದ 4 ಕೋಟಿ ರೂಪಾಯಿಗಳನ್ನು ಬಾಕಿ ಹಣವನ್ನು ತಕ್ಷಣ ಪಡೆಯಲು ಕ್ರಮವಹಿಸಬೇಕೆಂದು, ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಬೇಕಾದ ಹಣವನ್ನು ತಕ್ಷಣವೇ ಬಿಡುಗಡೆ ಮಾಡಿ ಕಚ್ಚಾ ನೂಲನ್ನು ಪೂರೈಸಲು ವ್ಯವಸ್ಥೆ ಮಾಡಬೇಕೆಂದು ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳಲಾಗಿದೆ.

ರಾಜ್ಯವಲ್ಲಿರುವ ಸಹಕಾರಿ ನೂಲಿನ ಗಿರಣಿಗಳು ಸರಿಯಾಗಿ ನಡೆಯುವಂತೆ ಸರ್ಕಾರ ಗಮನ ನೀಡಬೇಕೆಂದೂ, ಈ ನೂಲಿನ ಗಿರಣಿಗಳು ಉತ್ಪಾದಿಸುವ ಒಟ್ಟು ನೂಲಿನಲ್ಲಿ ಶೇ. 50 ರಷ್ಟು ನೂಲು ಕೈಮಗ್ಗ ಕ್ಷೇತ್ರಕ್ಕೆ ಕಡ್ಡಾಯವಾಗಿ ಲಭ್ಯವಾಗುವಂತೆ ಮಾಡಬೇಕೆಂದು ಮನವಿಯಲ್ಲಿ ಕೇಳಲಾಗಿದೆ.

ಹಿಂದಿನ ಮುಖ್ಯಮಂತ್ರಿ ಬಂಗಾರಪ್ಪನವರು ನೇಕಾರರ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಕಾಲಕಾಲಕ್ಕೆ ಸಲಹೆ ನೀಡಲು ರಾಜ್ಯಮಟ್ಟದ ಒಂದು ಸಲಹಾ ಸಮಿತಿಯನ್ನು ರಚಿಸುವುದಾಗಿ ಭರವಸೆ ನೀಡಿದ್ದರು. ಆದರೆ ಅಂತಹ ಸಮಿತಿ ಇಲ್ಲಿಯವರೆಗೆ ರಚನೆ ಆಗದೆ ಇರುವುದರಿಂದ ನೇಕಾರರ ಸಮಸ್ಯೆಗಳು ಇಷ್ಟು ಉಲ್ಬಣಗೊಳ್ಳುವಂತಾಗಿದೆ. ತಕ್ಷಣ ರಾಜ್ಯ ಸಲಹಾ ಸಮಿತಿಯನ್ನು ರಚಿಸಿ ಕಾರ್ಯೋನ್ಮುಖಗೊಳಿಸಬೇಕೆಂದು ಮನವಿಯಲ್ಲಿ ಮೊಯಿಲಿಯವರನ್ನು ವಿನಂತಿಸಲಾಗಿದೆ.

ಮುಖ್ಯಮಂತ್ರಿ ಭರವಸೆ : ಮನವಿಯನ್ನು ಸ್ವೀಕರಿಸಿದ ಮುಖ್ಯಮಂತ್ರಿಯವರು ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ನೂಲು ಪೂರೈಕೆಗೆ ಕ್ರಮಕೈಗೊಳ್ಳುವ ಭರವಸೆ ನೀಡಿದರಲ್ಲದೆ ನೇಕಾರರ ಪ್ರತಿನಿಧಿಗಳನ್ನು ಬೆಂಗಳೂರಿಗೆ ಕರೆದು ಚರ್ಚಿಸುವ ಭರವಸೆ ನೀಡಿದರು. ಕರ್ನಾಟಕ ರಾಜ್ಯ ಕೈಮಗ್ಗ ನೇಕಾರರ ಸಮನ್ವಯ ಸಮಿತಿ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಉಪಾಧ್ಯಕ್ಷರಾದ ವಿ.ಜಿ. ಮಾಗಿನ ಹಳ್ಳಿ ಕಾರ್ಯದರ್ಶಿಗಳಾದ ಸದಾಶಿವ ಗೊಂದಕರ ಮತ್ತು ಖಜಾಂಚಿ ಟಿ.ಟಿ. ದೇವರೆಡ್ಡಿ ಅವರನ್ನು ಒಳಗೊಂಡ ನಿಯೋಗವು ಮುಖ್ಯಮಂತ್ರಿಯವರನ್ನು ಕಂಡು ಮನವಿಯನ್ನು ಸಲ್ಲಿಸಿತ್ತು.

ಹೋರಾಟ ತೀರ್ಮಾನ : ರಾಜ್ಯ ಸರ್ಕಾರ ನೇಕಾರರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸಲು, ಸಕಾಲಕ್ಕೆ ಸಾಕಷ್ಟು ಪ್ರಮಾಣದಲ್ಲಿ ಕಚ್ಚಾ ನೂಲನ್ನು ಪೂರೈಸಲು ಕ್ರಮಕೈಗೊಳ್ಳಲು ವಿಳಂಬ ಮಾಡಿದರೆ ರಾಜ್ಯಾದ್ಯಾಂತ ಕೈಮಗ್ಗಗಳನ್ನು ಅನಿರ್ದಿಷ್ಟವಾಗಿ ಬಂದ್‌ಮಾಡಿ ಬೆಂಗಳೂರಿನಲ್ಲಿ ಸತ್ಯಾಗ್ರಹ ಹೂಡಲು ಕರ್ನಾಟಕ ರಾಜ್ಯ ಕೈಮಗ್ಗ ನೇಕಾರರ ಸಮನ್ವಯ ಸಮಿತಿ ತೀರ್ಮಾನಿಸಿದೆ.

ಕೋಮುವಾದಿಗಳ ಇನ್ನಷ್ಟು ಸುಳ್ಳುಗಳಿಗೆ ಮಾರುತ್ತರ

ಕಳೆದ ಸಂಚಿಕೆಯಲ್ಲಿ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಸೀತಾರಾಂ ಯೆಚೂರಿ ಕೋಮುವಾದಿಗಳು ಹಾಗೂ ಅವರ ಪತ್ರಿಕೆಗಳ ದೇಶವನ್ನು ಕೋಮುಕರಡುತ್ತಿರುವ ಸುಳ್ಳುಗಳಿಗೆ ಉತ್ತರ ನೀಡಿದ್ದರು. ಇಲ್ಲಿ ಇನ್ನಷ್ಟು ಸುಳ್ಳುಗಳಿಗೆ ಉತ್ತರ ನೀಡಿದ್ದಾರೆ.

ಕೋಮು ವಿಷ ಬಿತ್ತುವವರಿಂದ ಪ್ರಜಾಪ್ರಭುತ್ವದ ಮಾತು

ರಾಜಾಸ್ತಾನ ಮಧ್ಯಪ್ರದೇಶ ಹಿಮಾಚಲ ಪ್ರದೇಶಗಳಲ್ಲಿನ ರಾಜ್ಯ ಸರ್ಕಾರಗಳನ್ನು ಸಂವಿಧಾನದ 356ನೇ ವಿಧಿಯ ಪ್ರಕಾರ ವಜಾ ಮಾಡುತ್ತಿದ್ದಂತೆ ಬಿ.ಜೆ.ಪಿ.ಗಳು (ಕಾವಿ ಅಂಗಿಯ ಬಿ.ಜೆ.ಪಿ.-ಆರ್.ಎಸ್.ಎಸ್-ವಿ.ಹೆಚ್.ಪಿ. ಬಜರಂಗದಳ ಇತ್ಯಾದಿಗಳು) ಪ್ರಜಾಪ್ರಭುತ್ವದ ಕೊಲೆಯಾಗಿದೆಯೆಂದು ಬೊಬ್ಬೆ ಹೊಡೆಯಲಾರಂಭಿಸಿದ್ದಾರೆ.

ಪ್ರಜಾಪ್ರಭುತ್ವದ ಏಕೈಕ ರಕ್ಷಕನಂತೆ ಬಿ.ಜೆ.ಪಿ. ನಟಿಸುತ್ತಿದೆ ಈ ರಕ್ಷಕನ ಪಾತ್ರದಲ್ಲಿ ಅದು ಸಂವಿಧಾನದ 356 ನೇ ವಿಧಿಯ ಬಳಕೆಯನ್ನು ಖಂಡಿಸುತ್ತಿದೆ. ಆದರೆ ಸ್ವಲ್ಪ ಆಳವಾಗಿ ವಿಚಾರಿಸುವ ಎಲ್ಲರಿಗೂ ಬಿ.ಜೆ.ಪಿ.ಯ ನಿಜ ಬಣ್ಣ ತಿಳಿಯುತ್ತದೆ. ಬಾಬ್ರಿ ಮಸೀದಿಯ ನಾಶಕ್ಕೆ ಯೋಜನೆಗಳನ್ನು ಹಮ್ಮಿಕೊಂಡು ಕರಸೇವಕರನ್ನು ತರದೇತುಗೋಳಿಸಿ ಡಿಸೆಂಬರ್ 6ನೇ ತಾರೀಖು 'ಕರಸೇವೆಯನ್ನು ಯೋಜಿಸಿ ಸಂಘಟಿಸಿ ಕೊನೆಗೆ ಕೇಂದ್ರ ಸರ್ಕಾರ ಮತ್ತು ಸುಪ್ರಿಂಕೋರ್ಟಿಗೆ 'ಮಸೀದಿಗೆ ಹಾನಿ ಮಾಡುವುದಿಲ್ಲವೆಂದು ಲಿಖಿತ ಭರವಸೆ ನೀಡಿದ ಬಿ.ಜೆ.ಪಿ ಮಸೀದಿಯನ್ನು ನಾಶಪಡಿಸಿದರೆ ಅದು ಪ್ರಜಾಪ್ರಭುತ್ವದ ಕೊಲೆಯಲ್ಲವೆ?' ಈಗ ಆರ್.ಎಸ್.ಎಸ್. ಈ ಮಸೀದಿಯ ನಾಶವನ್ನೇ ಸಮರ್ಥಿಸುತ್ತಿದೆ. ಪ್ರಜಾಪ್ರಭುತ್ವದ ಮೂಲಭೂತ ಪಾಠವೆಂದರೆ ಅದರ ಚೌಕಟ್ಟಿನೊಳಗೆ ವ್ಯವಹರಿಸುವವರಿಗೆ ಮಾತ್ರ ಅದು ನೀಡುವ ಹಕ್ಕುಗಳಿರುತ್ತವೆ. ಬಿ.ಜೆ.ಪಿ. ಈ ಚೌಕಟ್ಟನ್ನು ಹರಿದೊಗೆದಿರುವಾಗ ಅದಕ್ಕೆ ಆ ಹಕ್ಕುಗಳನ್ನು ಕೇಳುವ ಅಧಿಕಾರವೆಲ್ಲಿ?

ಮಸೀದಿಯನ್ನು ನಾಶಪಡಿಸುವುದರೊಂದಿಗೆ ಬಿ.ಜೆ.ಪಿ. ನಮ್ಮ ಸಂವಿಧಾನ ಕಲ್ಪಿಸಿರುವ ಪ್ರಜಾತಾಂತ್ರಿಕ ಹಕ್ಕುಗಳನ್ನು ತಾನೇ ಕಳಕೊಂಡಿದೆ.

ಈ ಮೂಲಭೂತ ವಿಷಯವನ್ನು ಗಮನಿಸದೇ ಇರುವ ಹಲವು ಪತ್ರಿಕಾ ಅಂಕಣಕಾರರು ಬಿ.ಜೆ.ಪಿ.ಯನ್ನು ಸಮರ್ಥಿಸಿಕೊಳ್ಳುವ ಸಾಹಸಕ್ಕೆ ಕೈ ಹಾಕಿದ್ದಾರೆ. ಈ ಸಾಹಸದಲ್ಲಿ ಸಿಪಿಐ(ಎಂ) ಅನ್ನು ಈ ಅಂಕಣಕಾರರು ನೇರ ಟೀಕೆಗೆ ಗುರಿಪಡಿಸಿದ್ದಾರೆ. ಸಂವಿಧಾನದ 356ನೇ ವಿಧಿಯನ್ನು ತೆಗೆದುಹಾಕುವಂತೆ ಒತ್ತಾಯಿಸುತ್ತಿದ್ದ ಸಿಪಿಐ(ಎಂ) ಈ ತನ್ನ ನಿಲುವನ್ನೆ ತಿರುವು ಮುರುವು ಮಾಡಿದೆ ಎನ್ನುತ್ತಾರೆ. ಅವರು ಈ ಟೀಕೆಯಲ್ಲಿ ಏನಾದರೂ ಹುರುಳಿದೆಯೋ?

ಸತ್ಯ ಸಂಗತಿ ಇದು. ಸಿಪಿಐ(ಎಂ) ಸಂವಿಧಾನದ 356 ನೇ ವಿಧಿಯನ್ನು ತೆಗೆದುಹಾಕುವಂತೆ ಕೇಳುತ್ತಿರುವುದು ನಿಜ. ಇಂದಿಗೂ ಈ ನಿಲುವನ್ನು ಸಿಪಿಐ(ಎಂ) ಹೊಂದಿದೆ. ಈ ಒತ್ತಾಯಕ್ಕೆ ಕಾರಣ ರಾಜಕೀಯ ಕಾರಣಗಳಿಗಾಗಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಸರ್ಕಾರ ಈ ವಿಧಿಯನ್ನು ದುರುಪಯೋಗಪಡಿಸಿಕೊಳ್ಳಬಹುದೆಂಬುದು. ಈ ಹಿಂದೆ ಕೇಂದ್ರ ಸರ್ಕಾರಗಳು ಈ ವಿಧಿಯನ್ನು ದುರುಪಯೋಗಪಡಿಸಿಕೊಂಡಿರುವುದು ಅನುಭವದಿಂದ ವೇದ್ಯ. ಇದು ಸಂವಿಧಾನದ ಒಕ್ಕೂಟ ಸ್ವರೂಪವನ್ನು, ಸಾರವನ್ನು ಮಿತಿಗೊಳಿಸಿದೆ. ಅಷ್ಟರಮಟ್ಟಿಗೆ ಅದು ಪ್ರಜಾಪ್ರಭುತ್ವ-ವಿರೋಧಿ.

ಬಿ.ಜೆ.ಪಿ.ಯ ಬೊಬ್ಬೆ ಸಂವಿಧಾನದಲ್ಲಿನ ಪ್ರಜಾಪ್ರಭುತ್ವ ಅಂಶವನ್ನು ಇನ್ನಷ್ಟು ವ್ಯಾಪಕಗೊಳಿಸಬೇಕು ಎಂಬ ನಿಲುವಿನಿಂದ ಬಂದದ್ದಲ್ಲ. ಬದಲಾಗಿ ಅದರ ವಿರುದ್ಧವಾದ, ಪ್ರಜಾಪ್ರಭುತ್ವ-ವಿರೋಧಿ ನಿಲುವಿನಿಂದ ಬಂದದ್ದು. ಅದು ಸಂವಿಧಾನವನ್ನು ಉಲ್ಲಂಘಿಸಿಬಹುದು. ಸಂವಿಧಾನಕ್ಕೆ ಅದು ಕೊಡಲಿಯೇಟು ಹಾಕಿದರೂ ಅದರ ವಿರುದ್ಧ ಕ್ರಮಕೈಗೊಳ್ಳಕೂಡದು. ಅಷ್ಟೇ.

ಒಂದು ಉದಾಹರಣೆ ನೋಡೋಣ. ಪಂಜಾಬಿನಂತಹ ರಾಜ್ಯದಲ್ಲಿ ಚುನಾವಣೆಯ ನಂತರ ಖಾಲಿಸ್ತಾನಿಗಳು ಅಧಿಕಾರಕ್ಕೆ ಬಂದು ಪಂಜಾಬ್ ಭಾರತದಿಂದ ಸ್ವತಂತ್ರವಾಗಿದೆ ಎಂದು ಘೋಷಿಸುವ ಒಂದು ಸಂದರ್ಭವನ್ನು ಊಹಿಸಿಕೊಳ್ಳಿ. ಆಗ ಆ ಸರ್ಕಾರವನ್ನು ವಜಾಮಾಡದೇ ಇರಲು ಸಾಧ್ಯವೇ? ಹಾಗೆಯೇ ಬಿ.ಜೆ.ಪಿ. ಸರ್ಕಾರಗಳು ಪ್ರಜಾತಂತ್ರಕ್ಕೆ ಅಡಿಗಲ್ಲಾದ ಸಂವಿಧಾನವನ್ನೇ ಉಲಂಘಿಸಿ ಹೊರಟರೆ ದೇಶ[illegible]ದನ್ನು ಸಹಿಸುವುದು ಸಾಧ್ಯವೆ?

ಈ ಸಂದರ್ಭದಲ್ಲಿ 356 ನೇ ವಿಧಿಯ ಬಳಕೆ ಪ್ರಜಾತಂತ್ರ ವಿರೋಧಿ ಎಂಬ ಕೂಗು ಬಿ.ಜೆ.ಪಿ.ಯ ಸಂವಿಧಾನ ಬಾಹಿರ ಕುಕೃತ್ಯಗಳನ್ನು ಮುಚ್ಚಿಹಾಕುವ ಪ್ರಯತ್ನ ಹುನ್ನಾರ ಎಂದೇ ಹೇಳಬೇಕಾಗುತ್ತದೆ.

ಭಾರತೀಯ ರಾಜಕೀಯ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಮತ್ತು 'ಜಾತ್ಯತೀತತೆ' ಅವಿಭಾಜ್ಯವಾದವುಗಳು.

ಬಿ.ಜೆ.ಪಿ.ಯ 'ಪತ್ರಿಕಾ ಸ್ವಾತಂತ್ರ್ಯದ' ಪ್ರತಿಪಾದನೆಯ ಮಿಥ್ಯೆಯನ್ನು ಅಯೋಧ್ಯೆಯ ಘಟನೆಗಳು ನುಚ್ಚುನೂರಾಗಿಸಿವೆ. ಬಿ.ಜೆ.ಪಿ. ಕೋಮುವಾದವನ್ನು ಹರಡಲು ಪತ್ರಿಕಾಸ್ವಾತಂತ್ರ್ಯವನ್ನೂ ಬಯಸುತ್ತದೆ. ಈ ಸ್ವಾತಂತ್ರ್ಯವನ್ನು ಪತ್ರಿಕಾರಂಗ ಕೋಮುವಾದದ ವಿರುದ್ಧ ಬಳಸಿದ ಗಳಿಗೆಯಲ್ಲೇ ಈ ಸ್ವಾತಂತ್ರ್ಯವನ್ನೂ ಅಮಾನುಷವಾಗಿ ಕ್ರೂರವಾಗಿ ಹತ್ತಿಕ್ಕಲಾಗುತ್ತದೆ ಎಂಬುದೇ ಅಯೋಧ್ಯೆಯ ಪಾಠ.

ಮುಸಲ್ಮಾನರ ಬಗ್ಗೆ ಅಪಪ್ರಚಾರ

ದೇಶದ ಸಂವಿಧಾನವನ್ನೇ ಉಲ್ಲಂಘಿಸಿ ಬಾಬ್ರಿ ಮಸೀದಿಯನ್ನು ನಾಶಪಡಿಸಿದ ಬಿ.ಜೆ.ಪಿ. ತನ್ನ ಕುಕೃತ್ಯಗಳನ್ನು ಸಮರ್ಥಿಸಲು ಸುಳ್ಳುಗಳ ಸರಮಾಲೆಯನ್ನೇ ಹೆಣೆದಿದೆ, ಕೋಮುವಾದ ಹರಡುವ [illegible] ಸುಳ್ಳುಗಳನ್ನೇ ನೆಚ್ಚಿರುವುದು. ಈ ಕಾವಿ ಅಂಗಿಗಳ ಸಮರ್ಥನೆಯವಾದಗಳಾವುವು?

ಪಾಕಿಸ್ತಾನದಲ್ಲಿ ಹಲವು ದೇವಾಲಯಗಳನ್ನು ನಾಶ ಪಡಿಸಿದ್ದಾರೆ. ಆದಕ್ಕೆ ಬಾಬ್ರಿ ಮಸೀದಿ ನಾಶಪಡಿಸಿದ್ದು ಸಮರ್ಥನೀಯ! ಇದು ಒಂದುವಾದ.

ಭಾರತದ ಪ್ರಜಾಸತ್ತೆಯನ್ನು ಪಾಕಿಸ್ತಾನದ ಧರ್ಮೀಯ ಸರ್ಕಾರಕ್ಕೆ ಹೋಲಿಸುವುದು ಸರಿಯಾಗಲಾರದು. ಧರ್ಮೀಯ ಸರಕಾರವಿರುವಲ್ಲಿ ಮತಾಂಧತೆ ಇರುವುದು ಸಹಜ ಆದರೆ ಭಾರತ ಧರ್ಮೀಯ ರಾಜ್ಯವಲ್ಲ. ಹಿಂದೂ ರಾಷ್ಟ್ರದ ಪರಿಕಲ್ಪನೆ ಜಾತ್ಯಾತೀತವಾದಕ್ಕೆ ವಿರುದ್ಧವಾದುದಷ್ಟೇ ಅಲ್ಲ ಪ್ರಜಾಪ್ರಭುತ್ವದ ಮೂಲತತ್ವಗಳಿಗೇ ವಿರುದ್ಧವಾದದ್ದು.

ಮುಸ್ಲಿಮರು ನಾಲ್ಕಾರು ಹೆಂಡತಿಯರನ್ನು ಹೊಂದುವ-

ವಿವಿಧ ಹುದ್ದೆಗಳಲ್ಲಿ, ಶಿಕ್ಷಣ ಸಂಸ್ಥೆಗ[illegible] ಎಷ್ಟು ಶೇಕಡಾ ಜನರಿಗೆ ಅವಕಾಶ ಸಿಕ್ಕಿದೆ, [illegible] ಆ ವಿಭಾಗವನ್ನು ವಿಶೇಷವಾಗಿ ಮುದ್ದು ಮಾ[illegible] 1983ರಲ್ಲಿ ಅಲ್ಪಸಂಖ್ಯಾಕ ಆಯೋಗಕ್ಕೆ ದಿ[illegible] ಮಟ್ಟದ ಸಮಿತಿಯೊಂದು ಸಲ್ಲಿಸಿದ ವರ[illegible] ಮುಸ್ಲಿಮರ ಶೇಕಡಾ ಸಂಖ್ಯೆ ಹಾಗೂ ಮುಸ್ಲಿ[illegible] ಬೇಕಾಗಿದ್ದ ಸಂಖ್ಯೆಯು ತಖ್ತೆ ಹೀಗಿದೆ:

ಹುದ್ದೆಗಳು	ಮುಸ್ಲಿಮರ [illegible]
ಇಂಜಿನಿಯರುಗಳು	2.[illegible]
ಡಾಕ್ಟರುಗಳು	2.[illegible]
ಐ.ಎ.ಎಸ್	2.[illegible]
ಐ.ಪಿ.ಎಸ್	2.[illegible]
ಆದಾಯಕರ ಅಧಿಕಾರಿಗಳು	3.[illegible]
ರಾಜ್ಯ ಪ್ರಥಮದರ್ಜೆ ಅಧಿಕಾರಿಗಳು	3.[illegible]
ಬ್ಯಾಂಕುಗಳು	2.[illegible]
ಖಾಸಗೀ ಉದ್ದಿಮೆಗಳು	4.[illegible]

ಗೋಲಿಬಾರಿನ ಸಂಜೆ

ಬಂದೂಕುಗಳು [illegible]
ಬೆಳಕಿನ ಸೂರ್ಯನ ಸುತ್ತ
ಭಯದ, ಭೀತಿಯ ಮುದ್ದೆ
ಗೋಲಿಬಾರಿನ ಸಂಜೆ.
ಸಾವಿನ ಗುಳಿಗೆಗಳ ಉಗುಳುತ್ತವೆ
ಎಲ್ಲೆಡೆಗಳ ಮೇಲೆ
[illegible]
[illegible]
[illegible]
[illegible]
[illegible]
[illegible]
[illegible]
ಗೋಲಿಬಾರಿನ ಸಂಜೆ [illegible]
[illegible]
[illegible]
[illegible]
ಗೋಲಿಬಾರಿನ ಸಂಜೆ.
ಬೀದಿ ಬೀದಿಗೆ ಬೇಲಿ
ಎಲ್ಲೆಡೆ [illegible]

-[illegible]



ಬಯಲಾಗುತ್ತಿರುವ ಕಾವಿ ಪತ್ರಿಕೆಗಳು

ಹಣ ಮಾಡುವ ದಂಧೆಯನ್ನೇ ಮುಖ್ಯವಾಗಿರಿಸಿಕೊಂಡು ಬ್ಲಾಕ್‌ಮೇಲ್ ತಂತ್ರ ಅನುಸರಿಸುತ್ತಿದ್ದ ಪೀತ ಪತ್ರಿಕೋದ್ಯದೊಂದಿಗೆ ಇದೀಗ ಕಾವಿ ಪತ್ರಿಕೋದ್ಯಮ ತಲೆ ಎತ್ತಿದೆ. ಪತ್ರಿಕೆಗಳಲ್ಲಿರುವ ಕಾವಿ ಜನರು ಸುದ್ದಿ ಬರೆಯುತ್ತಾರೋ ಇಲ್ಲಾ ಓದುಗರಿಗೆ ಕಾವಿ ತೊಡಿಸುತ್ತಾರೋ ಎಂಬುದರತ್ತ ಒಂದು ಕಿರುನೋಟ.

●

ಸತ್ಯ ಹೇಳಬೇಕೆಂದರೆ ಯಾವ ಪತ್ರಿಕೆಯೂ ಸತ್ಯ ಹೇಳುವುದಿಲ್ಲ ಎನ್ನುತ್ತಾರೆ ಖ್ಯಾತ ಪತ್ರಿಕೋದ್ಯಮಿ, ಅಂಕಣಕಾರ ಎಂ.ವಿ. ಕಾಮತ್. ಈ ಮಾತನ್ನು ಕೇವಲ ವಾರ್ತಾಸಂಸ್ಥೆಗಳಿಗೆ ಮಾತ್ರವೇ ಅಲ್ಲದೆ ಪತ್ರಿಕೆಗಳಿಗೂ ಅನ್ವಯಿಸಬೇಕಾದ ಕಾಲ ಬಂದಿದೆ. ಹೌದು-ಸತ್ಯ ಹೇಳಬೇಕೆಂದರೆ ಪತ್ರಿಕೆ ಹೇಳುವುದೆಲ್ಲಾ ಸತ್ಯವಲ್ಲ.

ಕೋಮು ಗಲಭೆಯಂತಹ ಸಂದಿಗ್ಧ ಪ್ರಕರಣಗಳಲ್ಲಿ ಸಮೂಹಮಾಧ್ಯಮಗಳು ಅದರಲ್ಲಿಯೂ ಬಹಳಷ್ಟು ಪತ್ರಿಕೆಗಳು ನಡೆದುಕೊಂಡಿರುವ ರೀತಿ ಅತ್ಯಂತ ನಿರಾಶಾದಾಯಕ. ಬೆಂಕಿಗೆ ತುಪ್ಪ ಎರೆಯಲು ಸದಾ ಸಿದ್ಧವಾಗಿರುವ ಪತ್ರಿಕೆಗಳು ಕೋಮು ಗಲಭೆಗಳ ವೇಗವರ್ಧಕಗಳಾಗಿ ಬದಲಾಗಿವೆ. 1990 ನವೆಂಬರ್‌ನಲ್ಲಿ ನಡೆದ ಕರಸೇವೆಯ ಸಂದರ್ಭದಲ್ಲಿ ಪತ್ರಿಕೆಗಳು ನಡೆದುಕೊಂಡ ರೀತಿ 'ನಾಲ್ಕನೇ ಆಸ್ತಿ'ಯ ಮಹತ್ವವನ್ನು ಪ್ರಶ್ನಿಸುವಂತಿತ್ತು. ಕರಸೇವೆಯ ವಕ್ತಾರರಂತೆ ಅನೇಕ ಪತ್ರಿಕೆಗಳೂ ವರ್ತಿಸಿದ್ದವು. ಪತ್ರಿಕಾ ಮಂಡಲಿಯಿಂದ ಅನುಚಿತಕರ ವರ್ತನೆಗೆ ಛೀಮಾರಿ ಹಾಕಿಸಿಕೊಂಡಿರುವ ಪತ್ರಿಕೆಗಳ ಪಟ್ಟಿಯೇ ಪತ್ರಿಕಾಧರ್ಮವನ್ನು ಪ್ರಶ್ನಿಸುವಂತೆ ಮಾಡಿದೆ.

ಈ ಮೊದಲು ಜನರನ್ನು, ರಾಜಕಾರಣಿಗಳನ್ನು 'ಬ್ಲಾಕ್‌ಮೇಲ್' ಮಾಡುವ ದಂಧೆಯನ್ನೇ ಮುಖ್ಯವಾಗಿರಿಸಿಕೊಂಡು ಪತ್ರಿಕಾ ನೀತಿಯನ್ನು ಗಾಳಿಗೆ ತೂರಿದ 'ಪೀತ ಪತ್ರಿಕೋದ್ಯಮ' ಮಾತ್ರ ಅಸ್ತಿತ್ವದಲ್ಲಿತ್ತು. ಈಗ ಇದರೊಂದಿಗೆ ಪತ್ರಕರ್ತರ ನಿಜಬಣ್ಣ ಹೊರಗೆಡಹುವ 'ಕಾವಿ ಪತ್ರಿಕೋದ್ಯಮ'ದ ಯುಗ ಆರಂಭವಾಗಿದೆ. ಕಳೆದಬಾರಿ ಅಡ್ವಾಣಿಯ ರಥಯಾತ್ರೆಯ ಸಂದರ್ಭದಲ್ಲಿ ಸ್ಫೋಟಗೊಂಡ ಈ ಕಾವಿ ಪತ್ರಿಕೋದ್ಯಮ ಈ ಬಾರಿಯೂ ತನ್ನ ಆಟ ಆಡುತ್ತಿರುವುದು ಆತಂಕಕಾರಿ ವಿಚಾರ.

ಕಳೆದ ರಥಯಾತ್ರೆಯಲ್ಲಿ ಪತ್ರಿಕೆಗಳು ಮಸೀದಿ ನಾಶ ಎಂಬ ದೊಡ್ಡತಲೆ ಬರಹಗಳನ್ನು ಪ್ರಕಟಿಸಿದ್ದಲ್ಲದೆ ಯಾವುದೇ ಪ್ರತ್ಯಕ್ಷದರ್ಶಿಯ ಪ್ರಮಾಣವಿಲ್ಲದೆ ಈ ಕಾರ್ಯದಲ್ಲಿ ಸೇನೆಯ ಕಾರ್ಯಚರಣೆಯಲ್ಲಿ 400 ಜನ ಸತ್ತರು, ಸತ್ತವರ ಹೆಣ ಸರಯೂ ನದಿಯ ತುಂಬಾ ತೇಲುತ್ತಿವೆ. ಈ ಘಟನೆ ಜಲಿಯಾನ್‌ವಾಲಾಬಾಗ್ ದುರಂತವನ್ನು ಮೀರಿಸಿದ್ದು ಎಂಬ ಆವೇಶಕಾರಿ ಸುದ್ದಿಗಳನ್ನು ಪ್ರಕಟಿಸಿದವು ಕೇವಲ ಜಿಲ್ಲಾ ಪತ್ರಿಕೆಗಳಲ್ಲದೇ ರಾಷ್ಟ್ರಮಟ್ಟದ ಪತ್ರಿಕೆಗಳೂ ಇಂತಹ ಸುದ್ದಿ ಪ್ರಕಟಿಸುವುದರಲ್ಲಿ ಹಿಂದೆ ಬೀಳಲಿಲ್ಲ. ಸಂಪಾ[illegible] ಕೀಯದಲ್ಲೂ ಇಂತಹದ್ದೇ ವಾ[illegible] ನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ [illegible] ಸುವ ಹಂಬಲವನ್ನು ಎಲ್ಲಾ ಪತ್ರಿಕೆಗ[illegible] ವ್ಯಕ್ತಪಡಿಸಿದವು. 400 ಜನರ ಸಾ[illegible] ಯಾವ ಪತ್ರಿಕೆಯವರೂ ಖುದ್ದಾಗಿ [illegible] ಲಿಲ್ಲ. ಪತ್ರಿಕೆಗಳಲ್ಲಿ ಕರಸೇವೆಯಲ್ಲಿ ಭಾ[illegible] ಹಿಸಿದವರ ಮೂಲಗಳ ಪ್ರಕಾರ ಎಂದು [illegible] ಈ ಸಾವನ್ನು ಪ್ರಕಟಿಸಿದ್ದು ಸುದ್ದಿ ಎಂಬು[illegible] ಅರ್ಥವನ್ನೇ ತಿರುಚಿದಂತಿತ್ತು.

ಈ.ಹಿಂದಿನಿಂದಲೂ ಕೋಮು ಗ[illegible] ಸಂಬವಿಸಿದರೆ ಪತ್ರಿಕೆಗಳಲ್ಲಿ ಯಾ[illegible] ಧರ್ಮದ ಹೆಸರನ್ನು ಪ್ರಕಟಿಸಿದೆ, ಗಾ[illegible] ವದಂತಿಗಳಿಗೆ ನೀರೆರೆಯದೆ ಯಾರೇ [illegible] ವರ ಹೆಸರನ್ನು ಪ್ರಕಟಿಸದೆ ಕೋಮು ಗ[illegible] ಭೆಗಳ ಮೇಲೆ ತಣ್ಣೀರೆರೆಯುವ ಸಂಪ್ರದಾ[illegible] ಯವನ್ನು ಪತ್ರಿಕೆಗಳು ಆಚರಿಸಿಕೊಂ[illegible] ಬಂದಿವೆ. ಆದರೆ ಅಡ್ವಾಣಿ ರಥಯಾ[illegible] ಆರಂಭವಾದಂದಿನಿಂದ ಈ ಸತ್ಯ ಸಂಪ್ರದಾ[illegible] ಯಕ್ಕೆ ತಿಲಾಂಜಲಿ ನೀಡಲಾಗಿದೆ.

ಧರ್ಮದ ಅಫೀಮಿನ ಹಿಡಿತ[illegible] ಕುಣಿಯಲಾರಂಭಿಸಿದಂದಿನಿಂದ ಪತ್ರಿಕೆ[illegible] ಒಳಹೊರಗೆ ನಿಷ್ಪಕ್ಷಪಾತ ವರದಿಗ[illegible] ಬರೆಯುವವರ ತಂಡ ಕಾಣಿಸಿಕೊಂಡಿ[illegible] ಇಡೀ ಪತ್ರಿಕಾಮಾಧ್ಯಮ ಪ್ರಶ್ನಾರ್ಹ[illegible] ನಡೆದುಕೊಂಡಿತು. ಸುದ್ದಿ ಎಂಬ [illegible] ರಲ್ಲಿ ವರದಿಗಾರರು ತಮ್ಮ ವೈಯುಕ್ತಿಕ [illegible]

ದರಿಂದ ಅವರು ಹಿಂದೂಗಳನ್ನೂ ಮೀರಿ ಬೆಳೆದು ಹಿಂದುಗಳನ್ನು ಮುಗಿಸಿಬಿಡುತ್ತಾರೆನ್ನುವುದು ಇನ್ನೊಂದು ವಾದ.

ಈ ವಾದದ ಇನ್ನೊಂದು ಮುಖ ! ಹಿಂದುಗಳ ಹೀನಾಯ ಸ್ಥಿತಿಗೆ ಮುಸ್ಲಿಮರೇ ಕಾರಣ.

ಈ ವಾದದಲ್ಲಿ ಏನೂ ಹುರುಳಿಲ್ಲ. 1961 ಮತ್ತು 1981 ರ ಜನಗಣತಿ ಅಂಕಿ ಅಂಶಗಳನ್ನು (1991 ರ ಗಣತಿಯ ಅಂಕಿ ಅಂಶಗಳು ಇನ್ನೂ ಲಭ್ಯವಿಲ್ಲ) ಗಮನಿಸಿದರೆ ಆ 20 ವರ್ಷಗಳ ಅವಧಿಯಲ್ಲಿ ಮುಸ್ಲಿಮರ ಸಂಖ್ಯೆ ಶೇ. 0.7 ರಷ್ಟು ಮಾತ್ರ ಹೆಚ್ಚಾಗಿದೆ. ಈ ವೇಗದಲ್ಲಿ ಬೆಳೆದರೆ ಹಿಂದೂ ಜನಸಂಖ್ಯೆಯನ್ನು ಮೀರಿಸಲು ಸಾವಿರಾರು ವರ್ಷಗಳು ಬೇಕಾಗುತ್ತದೆ.

ಮುಸ್ಲಿಮರು ಕುಟುಂಬ ಯೋಜನೆಯ ಮಾಡಿಕೊಳ್ಳುವುದಿಲ್ಲ ಎಂಬುದು ಇನ್ನೊಂದು ವಾದ.

ಆದರೆ ಬರೋಡೆಯ ಸಂಶೋಧನೆಯೊಂದರ ಪ್ರಕಾರ 1980-89ರ ಅವಧಿಯಲ್ಲಿ ಖಾಯಂ ಕುಟುಂಬ ಯೋಜನ ಪದ್ಧತಿಗಳನ್ನು ಅನುಸರಿಸಿದವರ ಪೈಕಿ ಮುಸ್ಲಿಮರ ಪ್ರಮಾಣ ಶೇ. 11.5 ರಷ್ಟು ಏರಿದರೆ ಹಿಂದುಗಳಲ್ಲಿ ಅದು ಶೇ. 10 ರಷ್ಟು ಮಾತ್ರ ಏರಿದೆ.

ಇನ್ನು ಮುಸ್ಲಿಮರು ಹೆಚ್ಚು ಆಸ್ತಿವಂತರು ಎಂಬ ವಾದ ಮುಸ್ಲಿಮರ ತಲಾ ವಾರ್ಷಿಕ ಆದಾಯ ರಾಷ್ಟ್ರೀಯ ಸರಾಸರಿಯಾದ ರೂಪಾಯಿ 4247 ಕ್ಕಿಂತ ಶೇ. 5 ರಷ್ಟು ಕಡಿಮೆ ಯೋಜನಾ ಆಯೋಗದ 1987-88 ರ ಸಮೀಕ್ಷೆಯ ಪ್ರಕಾರ ರಾಷ್ಟ್ರೀಯ ಸಾಕ್ಷರತೆ ಶೇ. 52.11 ಇದ್ದರೆ ಮುಸ್ಲಿಮರಲ್ಲಿ ಅದು ಶೇ. 4 ರಷ್ಟು ಮಾತ್ರ ಮುಸ್ಲಿಮ್ ಮಹಿಳೆಯರ ಸ್ಥಿತಿ ಇನ್ನೂ ಹೀನ. ರಾಷ್ಟ್ರೀಯ ಸರಾಸರಿ ಶೇ. 39.42 ಇದ್ದರೆ ಮುಸ್ಲಿಂ ಮಹಿಳೆಯರಲ್ಲಿ ಆ ಸಾಕ್ಷರತೆ ಶೇ. 11. ಮಾತ್ರ.

ಅಂಕಿ ಅಂಶಗಳು ಮತ್ತು ವಾದಗಳನ್ನು ಮನನ ಮಾಡುವ ಯಾವುದೇ ವ್ಯಕ್ತಿಗೂ ಬಿ.ಜೆ.ಪಿ. ಸುಳ್ಳುಗಳ ಸರಮಾಲೆಗಳನ್ನೇ ಹೆಣೆದು ದೇಶದ ಜನತೆಯೊಂದಿಗೆ ಚೆಲ್ಲಾಟವಾಡುತ್ತಿರುವುದು ಸ್ಪಷ್ಟವಾಗುತ್ತದೆ.

ಇಂತಹ ಸುಳ್ಳುಗಾರರನ್ನು ವಿರೋಧಿಸದೆ. ಈ ಪ್ರತಿಗಾಮಿ ಶಕ್ತಿಗಳು ಕುತಂತ್ರಗಳಿಂದ ಅಧಿಕಾರಕ್ಕೆ ಬರುವುದನ್ನು ಸಹಿಸುವುದು ದೇಶದ ಸಾತ್ವಿಕ ಶಕ್ತಿಗಳಿಗೆ ಸಾಧ್ಯವೆ?

ಆಧುನಿಕ ಭಾರತದ ಈ ಶತ್ರುಗಳನ್ನು ಸಂಪೂರ್ಣ ವಾಗಿ ವಿರೋಧಿಸುವುದು ಮತ್ತು ಅದರ ಬಣ್ಣವನ್ನು ಬಯಲು ಮಾಡುವುದು ಇವತ್ತಿನ ಸನ್ನಿವೇಶದಲ್ಲಿ ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಾಗಿದೆ. ದೇಶದ ಸ್ವಾತಂತ್ರ್ಯವನ್ನು ಸಂರಕ್ಷಿಸುವುದು ಮತ್ತು ಈ ದೇಶವನ್ನು ಸಂಪದ್ಭರಿತ, ಜಾತ್ಯಾತೀತ ರಾಷ್ಟ್ರವನ್ನಾಗಿ ಬೆಳೆಸುವುದು ನಮ್ಮ ಕರ್ತವ್ಯವಾಗಿದೆ.

ಮು ವಿಭಾಗದ ಒಟ್ಟು ಅರ್ಹ ವ್ಯಕ್ತಿಗಳಲ್ಲಿ ಕ್ಕೆ ಸಿಗಬೇಕಾಗಿತ್ತು ಎಂಬುದರ ಹೋಲಿಕೆ ದೆಯೇ ಎಂಬುದಕ್ಕೆ ಇನ್ನೊಂದು ಸಂಕೇತ. ಡಾ.ಗೋಪಾಲ್ ಸಿಂಗ್ ನೇತೃತ್ವದ ಉಚ್ಚ ಾರ 1970-80ರಲ್ಲಿ ವಿವಿಧ ಹುದ್ದೆಗಳಲ್ಲಿ ಅರ್ಹ ವ್ಯಕ್ತಿಗಳ ಸಂಖ್ಯೆಯ ಪ್ರಕಾರ ಇರ-

ಅರ್ಹ ವ್ಯಕ್ತಿಗಳ ಸಂಖ್ಯೆಗಳ ಪ್ರಕಾರ ಇರಬೇಕಾಗಿದ್ದ ಶೇ.
16.67
20.00
25.00
16.67
-
-
-
-

ಪ್ರಾಯಗಳನ್ನು ತುರುಕಿದರು. ಸುದ್ದಿ ಮತ್ತು ವಿಶ್ಲೇಷಣೆ ಎಂಬುದರಲ್ಲಿ ಭಿನ್ನತೆಯೇ ಇರಲಿಲ್ಲ ಎನ್ನುತ್ತಾರೆ. ಫ್ರಂಟ್‌ಲೈನ್ ಪತ್ರಿಕೆಯ ಸಂಪಾದಕರಾದ ಎನ್. ರಾಂ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖವಾಣಿಯಾದ 'ಪೀಪಲ್ಸ್ ಡೆಮಾಕ್ರಸಿ' ಅಲ್ಲದೆ 'ಮೈನ್‌ಸ್ಟ್ರೀಂ' ಪತ್ರಿಕೆ ಮಾತ್ರವೇ ಈ ಸಂದರ್ಭದಲ್ಲಿ ದಿಟ್ಟತನದಿಂದ ವರ್ತಿಸಿ ಕೋಮುಗಲಭೆಗಳ ಹೂರಣವನ್ನು ಬಯಲಿಗೆಳೆಯುವುದರ ಜೊತೆಜೊತೆಯಲ್ಲಿಯೇ ಪತ್ರಿಕೆಗಳ ಮೂಲವನ್ನು ಕೆದಕಿತು.

ಈ ಸಾಲಿನ ಗಲಭೆಗಳಲ್ಲೂ ಪತ್ರಿಕೆಗಳ ವರ್ತನೆ ಅತ್ಯಂತ ಆಶಾದಾಯಕವಾಗೇನಿಲ್ಲ. ಹಿಂದಿ ಪತ್ರಿಕೋದ್ಯಮ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ವರ್ತಿಸಿತಲ್ಲದೆ. ಸಂಪಾದಕೀಯಗಳಲ್ಲಿ ತೀವ್ರ ಖಂಡನೆ ಮಾಡಿದವರು ನಂತರ ದಿನದ ಸುದ್ದಿಯಲ್ಲಿಯೇ ಮತ್ತೆ ಕಾವಿಯ ಮೊರೆಹೋದರು. ಇಡೀ ಹಿಂದಿ ಪತ್ರಿಕೆಗಳು ಸರಿಯಾದ ನಿಲುವು ತೆಗೆದುಕೊಳ್ಳದೆ ಗೊಂದಲದಲ್ಲಿ ಮುಳುಗಿದವು. ಡಿಸೆಂಬರ್ 6 ರ ಅಯೋಧ್ಯೆ ಘಟನೆ ನಂತರದ ಬೆಳವಣಿಗೆಗಳಲ್ಲಿ ಹಿಂದಿ ಪತ್ರಿಕೆಗಳು ದಿನೇ ದಿನೇ ತಮ್ಮ ನಿಲುವನ್ನು ಬದಲಾಯಿಸಿಕೊಂಡು ಸಂಪಾದಕೀಯವನ್ನು ಬರೆದವು. ಇಂದು ಪಿ.ವಿ. ನರಸಿಂಹರಾವರ ನಿಲುವನ್ನು ಬೆಂಬಲಿಸಿದ ಪತ್ರಿಕೆಗಳು ನಾಳೆ ಅದನ್ನು ಖಂಡಿಸಿ ಬರೆದವು ...ರಾಳ ಭಾಷುವಾರವನ್ನು ಖಂಡಿಸಿದ ಪತ್ರಿಕೆಗಳೇ ಮೂರನೆ ದಿನ ಮುಸ್ಲಿಂರನ್ನು ಓಲೈಸಿ... ಸರ್ಕಾರದ ಕ್ರಮ ಎಂದವು.

ಉತ್ತರ ಪ್ರದೇಶದ ಪ್ರಮುಖ ದೈನಿಕ 'ದೈನಿಕ್ ಜಾಗರಣ್' ಡಿಸೆಂಬರ್ 6 ರ ಕರಾಳ ಘಟನೆಯನ್ನು ಖಂಡಿಸಿ ಇದಕ್ಕಾಗಿ ಬಿ.ಜೆ.ಪಿ.ಯನ್ನು ತರಾಟೆಗೆ ತೆಗೆದುಕೊಂಡಿತು. ಬಾಬ್ರಿ ಮಸೀದಿಯ ಅವಶೇಷಗಳ ಮೇಲೆ ರಾಮಮಂದಿರವನ್ನು ಕಟ್ಟಲಾಗುವುದಿಲ್ಲವೆಂಬುದನ್ನು ಬಿ.ಜೆ.ಪಿ. ನೆನಪಿನಲ್ಲಿಟ್ಟುಕೊಳ್ಳಬೇಕು ಎಂದ ಜಾಗರಣ್ ಮಾರನೆ ದಿನ ಎಲ್. ಕೆ. ಅಡ್ವಾಣಿ ಹಾಗೂ ಇತರ ನಾಯಕರ ಬಂಧನದ ಸುದ್ದಿ ಹೊರಬೀಳುತ್ತಿದ್ದಂತೆಯೇ ದನಿ ಬದಲಿಸಿತು. ಕರಾಳ ತಪ್ಪನ್ನು ಪ್ರಧಾನಿ ಎಸಗುತ್ತಿದ್ದಾರೆಎಂದು ಅಬ್ಬರಿಸಿತು. ಮುಸ್ಲಿಮರನ್ನು ಸಂಪ್ರೀತಗೊಳಿಸಲು ಮಾತ್ರ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ. ಮತ ಸೆಳೆಯುವ ತಂತ್ರ ಇದು, ಮುಸ್ಲಿಂ ಮೂಲಭೂತವಾದಿ ನಾಯಕರುಗಳಿಗೆ ಕೊಟ್ಟಿರುವ ಕುಮ್ಮಕ್ಕು ಇದು, ಎಂದದ್ದು ಮಾತ್ರವೇ ಅಲ್ಲದೆ ಅಡ್ವಾಣಿ, ಉಮಾಭಾರತಿ ಮಸೀದಿಯನ್ನು ಒಡೆಯಲು ಇನ್ನೊಂದು ಏಟುಹಾಕಿ ಎಂದು ಕರಸೇವಕರನ್ನು ಹುರಿದುಂಬಿಸುತ್ತಿದ್ದರು ಎಂಬುದು ಸಂಪೂರ್ಣ ಸುಳ್ಳು ಅಡ್ವಾಣಿಯವರಂತಹ ನಾಯಕರು ಹೀಗೆ ಹೇಳಲು ಸಾಧ್ಯವೆ? ಎಂಬ ಪ್ರಶ್ನೆ ಎತ್ತಿತು. ಪ್ರಧಾನಿ ನರಸಿಂಹರಾವ್ ದೇಶವನ್ನು ಛಿದ್ರಗೊಳಿಸಲು ಹೊರಟಿರುವುದರ ವಿರುದ್ಧ ಎಚ್ಚರಿಸಿತು.

ಅದೇ ಸಮಯದಲ್ಲಿ ಕೋಮುವಾದಿ ಸಂಘಟನೆಗಳಾದ ಆರ್.ಎಸ್.ಎಸ್ ಮತ್ತು ವಿಶ್ವಹಿಂದೂಪರಿಷತ್ ನಿಷೇಧಿಸಿದ್ದುದರಿಂದ ಪತ್ರಿಕೆಗಳು ಇನ್ನಷ್ಟು ಮುಸ್ಲಿಮರ ವಿರುದ್ಧ ಬರೆಯಲಾರಂಭಿಸಿತು. ರಾಮನನ್ನು ನಿರಾಕರಿಸಿದವರು ಈ ರಾಷ್ಟ್ರದಲ್ಲಿ ಬದುಕಲು ಸಾಧ್ಯವಿಲ್ಲ ಎಂದು ಸಂಪಾದಕೀಯಗಳು ಅಪ್ಪಣೆ ಕೊಡಿಸಿದವು.

ಬಹುತೇಕ ಪತ್ರಿಕೆಗಳೆಲ್ಲವೂ ರಾಮ ಹುಟ್ಟಿದ ಸ್ಥಳದಲ್ಲಿಯೇ ರಾಮದೇಗುಲ ಕಟ್ಟ ಬೇಕೆನ್ನುವ ವಾದಕ್ಕೆ ಬದ್ಧವಾಗಿವೆ. ಜಲಂಧರ್‌ನ ಪಂಜಾಬ್‌ಕೇಸರಿ, ರಾಂಚಿಯ ರಾಂಚಿ ಎಕ್ಸ್‌ಪ್ರೆಸ್, ಜೈಪುರದ ರಾಜಸ್ಥಾನ್ ಪತ್ರಿಕಾ ರಾಮಮಂದಿರದ ಬಗ್ಗೆ ನ್ಯಾಯಾಲಯ ತೀರ್ಪು ನೀಡಲು ಸಾಧ್ಯವಿಲ್ಲ ಎಂದಿದೆ. "ಇದು ಹಿಂದೂ ನಂಬಿಕೆಯೊಡನೆ ಚೆಲ್ಲಾಟವಾಡಲು ಹೇಗೆ ಸಾಧ್ಯ? ರಾಮ ಈ ದೇಶದ ಹೆಮ್ಮೆ ಆತ ಹುಟ್ಟಿದ ಜಾಗದಲ್ಲಿಯೇ ದೇಗುಲದ ನಿರ್ಮಾಣ ಈ ದೇಶದ ಜನರಿಗೆ ಸಂತಸವನ್ನು ನೀಡುತ್ತದೆ" ಎಂದವು.

ಇಷ್ಟೇ ಅಲ್ಲದೆ ಮಸೀದಿಯನ್ನು ಇದ್ದಹಾಗೆಯೇ ಸ್ಥಳಾಂತರಿಸಿಬಿಡುವ ಅಭೂತಪೂರ್ವ ಸಲಹೆಗಳನ್ನು ಮುಂದಿಟ್ಟವು. ಮುಸ್ಲಿಮರು ಬೇಧ ಭಾವಮಾಡದೆ ರಾಮಮಂದಿರ ಕಟ್ಟುವಲ್ಲಿ ಹಿಂದೂಗಳೊಂದಿಗೆ ಕೈ ಜೋಡಿಸುವಂತೆಯೂ ಕರೆ ಕೊಟ್ಟವು. ರಥಯಾತ್ರೆಯ ಸಮಯದಲ್ಲಿ ಆತಂಕಕಾರಿ ವರ್ತನೆಗೆ ಇಡೀ ರಾಷ್ಟ್ರದಿಂದ ಛೀಮಾರಿ ಹಾಕಿಸಿಕೊಂಡ ಉತ್ತರಪ್ರದೇಶದ 'ಆಜ್' ಈ ಸಾಲಿನಲ್ಲೂ ಹಿಂದೆ ಬೀಳಲಿಲ್ಲ. ಆಜ್ ಈ ಹಿಂದೆ ಬಂದೂಕುಗಳನ್ನು ಬಿಸಾಕಿ ಮುಲಾಯಂ ಸರ್ಕಾರದ ವಿರುದ್ಧ ಬಂಡೇಳುವಂತೆ ಪೋಲೀಸರಿಗೆ ಕರೆ ನೀಡಿದ್ದವು.

ಪಾಕಿಸ್ತಾನದಲ್ಲಿ ಮಂದಿರಗಳ ನಾಶದ ಸುದ್ದಿ ಆಜ್‌ಗೆ ಮಹತ್ವದ ಆಹಾರವಾಯಿತು. ಆ ರಾಷ್ಟ್ರದಲ್ಲಿ ಹಿಂದೂಗಳ ಹಿಂಸೆ ಮುಂದುವರಿದರೆ ಭಾರತದಲ್ಲಿರುವ ಮಸೀದಿಗಳ ರಕ್ಷಣೆ ಇನ್ನು ನಾವು ಮಾಡಬೇಕಾಗಿಲ್ಲ. ಮುಸ್ಲಿಮರು ಭಾರದಲ್ಲಿ ಉಳಿಯಬೇಕಾದರೆ ಈ ಕೃತ್ಯ ಕೈಬಿಡಲಿ ಎಂದಿತು.

ಈ ಎಲ್ಲದರ ಮಧ್ಯೆ ಶಾಂತಿ ಸಂದೇಶ ಹರಡುವ ಜಾತ್ಯಾತೀತ ನಿಲುವುಗಳನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಿರುವ ಕೆಲವೇ ಕೆಲವು ಪತ್ರಿಕೆಗಳೇ ಇಂದಿನ ಬೆಳಕಿನ ಕಿರಣಗಳೂ ಆಗಿವೆ. ಸಾಗರದ ಅಲೆಯ ವಿರುದ್ಧ ಈಜುತ್ತಿರುವ ಈ ಪತ್ರಿಕೆಗಳು ಕಾವಿ ಪತ್ರಿಕೋದ್ಯಮದ ಕರಾಳ ಚುಕ್ಕೆಯನ್ನು ಇನ್ನಿಲ್ಲವಾಗಿಸಲು ಶ್ರಮಿಸುತ್ತಿದೆ.

ವಿದ್ಯುತ್ ಸ್ಥಾವರಗಳ ಸ್ಥಾಪನೆಗೆ ಖಾಸಗಿ ವಲಯದ ಆಸಕ್ತಿ: ಮಂತ್ರಿಗಳ ಬುರುಡೆ

ಖಾಸಗಿ ಹೂಡಿಕೆದಾರರು ವಿದ್ಯುತ್ ಉತ್ಪಾದನಾ ಸ್ಥಾವರಗಳ ಸ್ಥಾಪನೆಗೆ ಮುಂದೆ ಬಂದಿದ್ದಾರೆ ಎಂದು ವಿದ್ಯುತ್ ರಾಜ್ಯ ಮಂತ್ರಿ ಕಲ್ಪನಾಥ ರೈ ಹೇಳಿದ್ದಾರೆ. ಇದುವರೆಗೆ 39 ಪ್ರಸ್ತಾಪಗಳು ಬಂದಿವೆಯಂತೆ 19000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಲು 46000 ಕೋಟಿ ರೂಪಾಯಿಗಳನ್ನು ಇವರು ಹೂಡಲಿದ್ದಾರಂತೆ ಆದರೆ ಅವರು ಬಯಸುವ ಪ್ರತಿಫಲವೇನು? ಸ್ಥಾವರಗಳ ಮೇಲೆ ಪೂರ್ಣ ಸ್ವಾಮ್ಯ ಹೊಂದಲಿರುವ. ಈ ಖಾಸಗಿ ಹೂಡಿಕೆದಾರರು ವಿದ್ಯುತ್ತಿಗೆ ತಮಗೆ ಸರಿಕಂಡ ಬೆಲೆ ನಿಗದಿಪಡಿಸುತ್ತಾರೆ. ಉದ್ಯಮಗಳಿಗೆ ಉದ್ಯುತ್ ಬಹಳ ಮುಖ್ಯ ಸುಲಭ ಬೆಲೆಗೆ ವಿದ್ಯುತ್ ದೊರೆಯದಿದ್ದರೆ ಉದ್ಯಮಗಳು ಬೆಳೆಯಲಾರವು. ಅಂದರೆ ವಿದ್ಯುತ್ತಿನ ಖಾಸಗೀಕರಣ ಔದ್ಯಮೀಕರಣಕ್ಕೆ ಹೊಡೆತ. ಸತತವಾಗಿ ದೇಶ ಹಿಂದುಳಿಯುವಂತೆ ಮಾಡುವ ಸರ್ಕಾರದ ಸಂಚು?

ಹೊಸ ಸಂಪನ್ಮೂಲ ನೀತಿ

ಯೋಜನಾ ಆಯೋಗದ ಉಪಾಧ್ಯಕ್ಷರಾದ ಪ್ರಣವ ಮುಖರ್ಜಿ ಈ ಸಂಪನ್ಮೂಲ ನೀತಿಯ ಬಗೆಗೆ ಮಾತನಾಡಿದ್ದಾರೆ. ಜಾಗತೀಕರಣದ ಹೆಸರಿನಲ್ಲಿ ಎಲ್ಲವನ್ನು ಉದಾರೀಕರಿಸುತ್ತಿರುವಾಗ ಈ ಸಂಪನ್ಮೂಲ ನೀತಿಯ ಅರ್ಥವೇನೋ ತಿಳಿಯದು. ಮಾನವ ಸಂಪನ್ಮೂಲದ 'ಅಭಿವೃದ್ಧಿಗೂ ಎಂಟನೇ ಯೋಜನೆಯಲ್ಲಿ ಬಹಳ ಮಹತ್ವವಿದೆಯಂತೆ. ಎಕ್ಸಿಟ್ ನೀತಿಯನ್ನು ಹಿಂಬಾಗಿಲಿನಿಂದ ತರುವ ಸರ್ಕಾರ ಈ ಮಾತನ್ನು ಹೇಳಿದರೆ ಒಂದು ವಿಷಯ ಸ್ಪಷ್ಟ ಮಾನವ ಸಂಪನ್ಮೂಲ ಅಭಿವೃದ್ಧಿ ಎಂದರೆ ಕಾರ್ಮಿಕರನ್ನು ಮನೆಗೆ ಕಳುಹಿಸುವುದು ಮತ್ತು ನಿರುದ್ಯೋಗವನ್ನು ಹೆಚ್ಚಿಸುವುದು.

ವಿಶ್ವಬ್ಯಾಂಕ್ ಸಾಲದ ಶೂಲ

ವಿಶ್ವಬ್ಯಾಂಕ್ ಬಾರತಕ್ಕೆ 702 ಮಿಲಿಯ ಡಾಲರುಗಳ ಸಾಲ ಮಂಜೂರಾತಿ ಘೋಷಿಸಿದೆ. ಆರ್ಥಿಕ ಸುಧಾರಣೆಯದು ಇದರಲ್ಲಿ ಸಿಂಹಪಾಲು. ಅಂದರೆ 500 ಮಿಲಿಯ ಡಾಲರುಗಳು. 115 ಮಿಲಿಯ ಡಾಲರುಗಳನ್ನು ಬದಲಿ ಶಕ್ತಿ ಮೂಲಗಳ ಅಭಿವೃದ್ಧಿಗೆ ಬಳಸಬೇಕು. 75 ಮಿಲಿಯ ಡಾಲರುಗಳನ್ನು ತಮಿಳುನಾಡಿನಲ್ಲಿ ಕಬ್ಬಿನ ಸಿಪ್ಪೆ ಬಳಸಿ ಕಾಗದ ತಯಾರಿಸುವ ಪ್ರಯತ್ನಕ್ಕೆ ಬಳಸಬೇಕು. ಅಂದರೆ ವಿಶ್ವಬ್ಯಾಂಕ್‌ನ ಸಾಲ ಹೇಳಿದಂತೆ ನಾವು ಖರ್ಚು ಮಾಡಬೇಕಾದ ಹಣ ನಮ್ಮ ಅಭಿವೃದ್ಧಿಯ ಬಗ್ಗೆ ವಿಚಾರಿಸುವ ಹಕ್ಕು ನಮಗಿಲ್ಲ. ಎಷ್ಟೆಂದರೂ ವಿಶ್ವಬ್ಯಾಂಕು ಸಾಲ ನೀಡುವ ಆಪದ್ಬಾಂಧವನಲ್ಲವೆ?



ನರಸಿಂಹರಾವ್ ಸರ್ಕಾರದ 19 ನೇ ತಿಂಗಳಲ್ಲಿ

ಡಂಕಲ್ ಖಡ್ಗಕ್ಕೆ ದೇಶದ ಕೊರಳೊಡ್ಡುತ್ತಿರುವ ಸರ್ಕಾರ

ಅಂತರಾಷ್ಟ್ರೀಯ ವ್ಯಾಪಾರ ನಿಯಮಾವಳಿಗಳ ಬಗೆಗೆ ಗ್ಯಾಟ್‌ನ ಅಧ್ಯಕ್ಷ ಆರ್ಥರ್ ಡಂಕೆಲ್ ಪ್ರಸ್ತಾವಗಳನ್ನು ಮುಂದಿಟ್ಟಿದ್ದಾನೆ. ಈ ಪ್ರಸ್ತಾವಗಳ ಬಗೆಗೆ ವರ್ಷಕ್ಕೂ ಮೇಲ್ಪಟ್ಟು ಚರ್ಚೆ ನಡೆಯುತ್ತಲೇ ಇದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸಾಮ್ರಾಜ್ಯಶಾಹಿ ದೇಶಗಳಿಗೆ ಅಭಿವೃದ್ಧಿ ಶೀಲ ಮತ್ತು ಹಿಂದುಳಿದ ರಾಷ್ಟ್ರಗಳ ಶೋಷಣೆಗೆ ಒಂದು ಸಾಧನ ಈ ಪ್ರಸ್ತಾವಗಳು ಅಯೋಧ್ಯೆಯ ಘಟನೆಗಳ ಬಿಸಿ ದೇಶದಾದ್ಯಂತ ಇರುವಾಗ ನಮ್ಮ ಸರ್ಕಾರ ಈ ಪ್ರಸ್ತಾವಗಳಲ್ಲಿ ಹಲವಕ್ಕೆ ಒಪ್ಪಿಗೆ ನೀಡಿರುವ ಸುದ್ದಿಗಳು ಬರುತ್ತಿವೆ. ವ್ಯಾಪಾರದ ಹೆಸರಿನಲ್ಲಿ ನಡೆಯುವ ಈ ಒಪ್ಪಂದ ದೇಶದ ಸಾರ್ವಭೌಮತೆಯನ್ನೇ ಬಲಿಕೊಡುತ್ತದೆ. ಸಾಮ್ರಾಜ್ಯಶಾಹಿಗಳ ವಸಾಹತುಗಳಾಗುವ ನಾವು ಔದ್ಯಮೀಕರಣದಂತಹ ಸ್ವಾವಲಂಬನೆಯ ಕ್ರಮಗಳ ಕನಸನ್ನೇ ಮರೆಯಬೇಕಾಗುತ್ತದೆ.

ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗಳನ್ನು ಏರ್ಪಡಿಸಿ ಈ ಪ್ರಸ್ತಾಪಗಳ ವಿರುದ್ಧ ಜನಾಭಿಪ್ರಾಯ ಮತ್ತು ಜನರ ಹೋರಾಟ ರೂಪಿಸಬೇಕಾಗಿದ್ದ ಸರ್ಕಾರ ಹೇಯ ಅವಕಾಶವಾದಿಯಾಗಿ ವರ್ತಿಸುತ್ತಿದೆ ಎಂತಹ ಕೀಳು ಮಟ್ಟಕ್ಕೂ ಇಳಿಯಬಲ್ಲ ಈ ಸರ್ಕಾರ ದೇಶದ ಹಿತವನ್ನೇನು ಕಾಪಾಡೀತು?

ವಿಜ್ಞಾನ ಮತ್ತು ಸಂಶೋಧನೆಗಳಿಗೆ ಹಣಕಾಸಿನ ನೆರವಿನಲ್ಲಿ ತೀವ್ರ ಕಡಿತ

ದೇಶದ ಆರ್ಥಿಕವನ್ನು ಉದಾರೀಕರಿಸಿ ಸಾಮ್ರಾಜ್ಯಶಾಹೀ ದರೋಡೆಕೋರರಿಗೆ ದೇಶದ ಎಲ್ಲಾ ಬಾಗಿಲುಗಳನ್ನು ತೆರೆಯುತ್ತಿರುವ ಸರ್ಕಾರ ದೇಶೀ ವಿಜ್ಞಾನ ಮತ್ತು ಸಂಶೋಧನೆಗಳಿಗೆ ಬೆಂಬಲದಲ್ಲಿ ತೀವ್ರ ಕಡಿತವುಂಟುಮಾಡುತ್ತಿದೆ. ಹಲವು ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗಳು ಈ ಕಡಿತದಿಂದುಂಟಾಗುವ ದುಷ್ಪರಿಣಾಮಗಳ ಬಗ್ಗೆ ಹೇಳುತ್ತಿವೆ.

ಭಾರತೀಯ ವಿಜ್ಞಾನ ಮಂದಿರದ ನಿರ್ದೇಶಕರಾದ ಡಾ.ಸಿ.ಎನ್.ಆರ್.ರಾವ್ ಕೆಲವು ದಿನಗಳ ಹಿಂದೆ ಈ ಬಗ್ಗೆ ಹೇಳಿದ್ದರು.

ಈಗ ವಿದ್ಯುತ್, ಗಣಕ ಯಂತ್ರೋಪಕರಣಗಳ ಸಂಸ್ಥೆಯ ನಿರ್ದೇಶಕರು ಈ ಮಾತನ್ನು ಹೇಳಿದ್ದಾರೆ. ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ ಹೊಸ ವಿಭಾಗಗಳನ್ನು ತೆರೆಯಬೇಡಿ ಇರುವ ಹಣವನ್ನೇ ಸರಿಯಾಗಿ ಬಳಸಿಕೊಳ್ಳಿ ಎಂದು ಒಣ ಸಲಹೆ ನೀಡುತ್ತಿದೆಯಂತೆ.

ಈ ಸಂಸ್ಥೆಯ ನಿರ್ದೇಶಕರ ಪ್ರಕಾರ ಸರ್ಕಾರ ರಫ್ತನ್ನು ಹೆಚ್ಚಿಸುವಂತೆ ಈ ಸಂಸ್ಥೆಗೆ ಹೇಳುತ್ತಿದೆಯಂತೆ. ಆದರೆ ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳಿಗೆ ಹಣ ಖರ್ಚುಮಾಡದೆ ನಾವು ರಫ್ತನ್ನು ಹೆಚ್ಚಿಸುವುದು ಸಾಧ್ಯವೇ ಇಲ್ಲ ಎಂಬುದು ಈ ನಿರ್ದೇಶಕರ ಅನುಭವ.

ದೇಶದ ಸ್ವಾವಲಂಬನೆಯನ್ನು, ಅದರ ಅಭಿವೃದ್ಧಿಯನ್ನು ಸರ್ಕಾರವೇ ತಡೆಗಟ್ಟುತ್ತಿದೆ ಎಂಬುದು ಇದರಿಂದಲೂ ಸ್ಪಷ್ಟವಾಗುತ್ತದಲ್ಲವೇ?

ಪ್ರತಿಜ್ಞೆ

ಹಿಂದೂ ಮುಸ್ಲಿಂ ಸಿಖ್ಖರ
ಸುದ್ದಿ ಮುದ್ರಿಸುವಲ್ಲಿ
ಮುದ್ರಿಸಿಕೊಳ್ಳುತ್ತೇನೆ
ಗುಲಾಬಿ ಹೂಗಳಾಗಲಿದ್ದು
ಮುಳ್ಳುಗಳು ಹಾಗುವಂತೆ
ನೋಡಿಕೊಳ್ಳುತ್ತೇನೆ
ಶಾಂತಿಯ ಏಕಾದಿದವ
ಎಲ್ಲಿದೆ ಗುಪ್ತ ತಿರುಗು ಎಂದು
ನೋಡಿಕೊಳ್ಳುತ್ತೇನೆ
ಧರ್ಮಗಳ ಹೆಸರಲ್ಲಿ
ಧ್ವಂಸ ಮಾಡುವ ರಾಕ್ಷಸರನ್ನು
ವಿಚಾರಿಸಿಕೊಳ್ಳುತ್ತೇನೆ
ಜಾತಿಗಳ ಕುರುಹು ಕಳೆಕೊಂಡು
ಅರಿವಿನಲ್ಲಿ ಒಂದಾಗಿ ಎಂದು
ತೋರಿಸಿಕೊಳ್ಳುತ್ತೇನೆ
ದ್ವೇಷದ ದಳ್ಳುರಿಯಲ್ಲೂ
ಪ್ರೀತಿಯೊಡನೆ ಮಾತ್ರ
ರಾಜಿ ಮಾಡಿಕೊಳ್ಳುತ್ತೇನೆ

-ರಮ್ಜಾನ್ ದರ್ಗಾ

ಮುಂಬೈ : "ಇಂತಹದೊಂದು ಕೋಮು ದಂಗೆ ನೋಡಿಯೇ ಇಲ್ಲ"

ಡಿಸೆಂಬರ್ 6 ರಂದು ಕರಾಳ ಭಾನುವಾರದ ನಂತರ ಅಭೂತಪೂರ್ವ ಹಿಂಸಾಚಾರ ಕಂಡ ದೊಡ್ಡ ನಗರ ಮುಂಬೈ. ಕೋಮು ದಳ್ಳುರಿಯಲ್ಲಿ ಬೆಂದವರ ಕೆಲ ಚಿತ್ರಗಳು ಇಲ್ಲಿವೆ. ಕೋಮು ರಕ್ಕಸನ ರಕ್ತಪಿಪಾಸೆ ಇನ್ನೂ ತಣ್ಣಗಾದಂತಿಲ್ಲ. ಬಿ.ಜೆ.ಪಿ.-ಶಿವಸೇನೆಗಳ 'ಮಹಾ ಆರತಿ'ಗಳಿಂದ ಮತ್ತು ಅದು ಭುಗಿಲೆಗಿದಿದೆ. 20 ಜನರ ಆಹುತಿ ಪಡೆದಿದೆ.

ಡಿಸೆಂಬರ್ 6ರವರೆಗೂ ಅದು ಒಂದು ಟೈಲರಿಂಗ್ ಅಂಗಡಿ. ಈಗ ಅದೊಂದು ಮಣ್ಣು- ಇಟ್ಟಿಗೆಗಳ ರಾಶಿ. 62 ವರ್ಷದ ಖಾದರ್ ಭಾಯಿಯ ಅಂಗಡಿಯಿದು. ಕಳೆದ 40 ವರ್ಷಗಳಲ್ಲಿ ಈ ಕೇರಿಯಲ್ಲಿ ಕೋಮು ದಂಗೆಗಳಾಗಿರಲಿಲ್ಲ ಎನ್ನುತ್ತಾನೆ ಈತ. ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ನೆಲಸಮವಾದ ನಂತರ ಎರಡೇ ದಿನಗಳಲ್ಲಿ ಅದೊಂದು ರಣರಂಗವಾಯಿತು. ಇದುವರೆಗೆ ಕೋಮು ಸಾಮರಸ್ಯ ಹೊಂದಿದ್ದ ಮುಂಬೈಯ ಅತಿ ದೊಡ್ಡ ಗುಡಿಸಲು ಪ್ರದೇಶದ ಪರಿಸ್ಥಿತಿಯಿದು.

ಗಾಯದ ಮೇಲೆ ಬರೆ "ನಾವೇನು ತಪ್ಪು ಮಾಡಿದ್ದೇವೆ?"

ಖಾದರ್ ಭಾಯಿಯ ಕೇರಿಯ ಪಕ್ಕದಲ್ಲೇ ಇದೆ ಮಹಾತ್ಮಾಗಾಂಧಿನಗರ. "ನನ್ನನು ವರ್ಷಗಳಿಂದ ಅಕ್ಕ, ಅಕ್ಕ ಎನ್ನುತ್ತಿದ್ದವರೇ ನಮ್ಮ ಮನೆಯ ಎದುರು ಬಾಗಿಲು ಒಡೆದು ನಮ್ಮ ಸ್ಕೂಟರ್ ಧ್ವಂಸ ಮಾಡಿದರು" ಎನ್ನುತ್ತಾಳೆ ಕೃಷ್ಣಾ ಗಣಪತಿ.

ಡಿಸೆಂಬರ್ 6ರಂದು ಪರಿಸ್ಥಿತಿ ಗಂಭೀರವಾಗಿದ್ದರೂ ಶಾಂತವಾಗಿತ್ತು. ಆದರೆ ಸ್ಥಳೀಯ ಶಿವಸೇನೆಯ ಮಂದಿಗೆ ಬಾಬ್ರಿ ಮಸೀದಿ ಕೆಡವಿದ 'ವಿಜಯೋತ್ಸವ' ಆಚರಿಸಲು ಧಾರಾವಿ ಪೋಲೀಸರು ಅನುಮತಿ ನೀಡಿದರು. ಒಂದು ದೊಡ್ಡ 'ವಿಜಯೋತ್ಸವ' ನಡೆಯಿತು. ಕೇವಲ ಮೆರವಣಿಗೆಯಲ್ಲ -ಅತ್ಯಂತ ಉದ್ರೇಕಕಾರೀ ಘೋಷಣೆಗಳನ್ನು ಅಲ್ಪಸಂಖ್ಯಾತರನ್ನು ಗುರಿ ಮಾಡಿದ್ದ, ತಮ್ಮ ಗಾಯಕ್ಕೆ ಬರೆ ಎಳೆದ ಮೆರವಣಿಗೆ ಇದು ಎನ್ನುತ್ತಾನೆ ಸ್ಥಳೀಯ ಮಸೀದಿಯ ಮಾಂಝುದೀರ್ ಅಹ್ಮದ್.

ಅಕ್ಕ ಅಕ್ಕ ಎನ್ನುತ್ತಿದ್ದವರು......

ಎರಡೂ ಕಡೆಯ ಕೋಮುವಾದಿಗಳ ಕುಮ್ಮಕ್ಕಿನಿಂದ ಯುವಕರು ಪರಸ್ಪರ ಹಲ್ಲೆಗಳಿಗೆ ಬಲಿಯಾದವರು ಎರಡೂ ಕಡೆಯ ಸಾಮಾನ್ಯ ಗುಡಿಸಲುವಾಸಿಗಳು. "ಯಾರೇ ನನ್ನ ಹೋಟೆಲನ್ನು ನಾಶ ಮಾಡಿರಲಿ, ನನಗೆ ನನ್ನ ಜೀವನಾಧಾರ ವಾಪಾಸು ಕೊಡಿ" ಎಂದು ಗೋಗರೆಯುತ್ತಿದ್ದಾಳೆ ಎರಡು ಮಕ್ಕಳನ್ನು ಸಾಕಬೇಕಾದ ವಿಧವೆ ಮುತ್ತಮ್ಮಾಳ್ ಮೊದಲಿಯಾರ್.

"ಯಾವ ಗಲಾಟೆಯಲ್ಲೂ ಇರಲಿಲ್ಲ"

ಶುಭಾಳ ಗಂಡ ಭರತ್ ಯಾದವ್ ಮುಂಬೈಯ ಸಾರಿಗೆ ಸಂಸ್ಥೆ 'ಬೆಸ್ಟ್'ನಲ್ಲಿ ವೈರ್‌ಮನ್ ಆಗಿದ್ದ. ಆದಿನ ಮನೆಗೆ ಮರಳುವಾಗ ಪೋಲೀಸ್ ಗುಂಡು ಆತನ ತಲೆ, ಎದೆ ಹೊಕ್ಕಿತು. ಬಹಳ ಹೊತ್ತಾದರೂ ಬರದ ಗಂಡನನ್ನು ಗಲಭೆಗಳ ನಡುವೆಯೂ ಹುಡುಕಿ ಹೊರಟ ಶುಭಾಳಿಗೆ ಒಂದು ಕೈಗಾಡಿಯ ಮೇಲೆ ಬಿದ್ದ ಭರತ್‌ನ ಹೆಣ ಕಂಡಿತು. ಆದರೆ ಪೋಲೀಸರು ಶವವನ್ನು ಅವಳಿಗೆ ಒಪ್ಪಿಸಲು ನಿರಾಕರಿಸಿದರು. ಎರಡು ದಿನಗಳ ನಂತರ ಜೆ.ಜೆ.ಹಾಸ್ಪಟಲ್‌ನಿಂದ ಹೂಪರ್ ಆಸ್ಪತ್ರೆಗೆ ಓಡಾಡಿಸದ ನಂತರವೇ ಗಂಡನ ಶವ ದೊರೆಯಿತು. ಆತ ಇಂತಹ ಯಾವ ಗಲಾಟೆಯಲ್ಲೂ ಸೇರುತ್ತಿರಲಿಲ್ಲ ಎಂದು ಮುಂದೇನು ಎಂದು ಅರಿಯದ ಶುಭಾ ಬಿಕ್ಕಳಿಸಿ ಅಳುತ್ತಾಳೆ.

ಈ ರಕ್ತದೋಕುಳಿಯ, ಕೋಮುದಳ್ಳುರಿಯ ನಡುವೆಯೂ ಮಾನವೀಯ ಗುಣಗಳಿಗೆ ಬರವಿರಲಿಲ ಎಂಬುದೊಂದು ತುಸು ಸಮಾಧಾನದ ಸಂಗತಿ. ಅಖ್ತರುನ್ನೀಸಾ ಮತ್ತು ಆಕೆಯ ಗಂಡ ಅಝೀಮುಲ್ಲಾ ಶೇಖ್‌ರನ್ನು ಅವರ ಹಿಂದೂ ನೆರೆಕೆರೆಯವರು ಕಾಪಾಡಿದರು. ಮಲ ಮೂತ್ರ ವಿಸರ್ಜನೆಗೆ ಹೋಗುವಾಗಲೂ ತಮಗೆ ಕಾವಲಿರುತ್ತಿದ್ದರು ಎಂದು ಈ ಮುಸಲ್ಮಾನ ದಂಪತಿಗಳು ನೆನೆಸಿಕೊಳ್ಳುತ್ತಾರೆ. ಗಂಗೂಬಾಯಿ ಮತ್ತು ಆಕೆಯ ಗಂಡ ನಿವೃತ್ತಿ ಖುದೆ ಕೂಡಾ ನಮ್ಮ ನೆರೆಯವರ ಟೈಲರ್ ಮಹಮ್ಮದ್ ನಗ್ರಿ ಹಾಗೂ ಅವರ ಕುಟುಂಬದವರಿಂದ ರಕ್ಷಣೆ ತಮಗಿದೆ ಎನ್ನುತ್ತಾರೆ.

ಕೃಪೆ : ಇಂಡಿಯನ್ ಎಕ್ಸ್‌ಪ್ರೆಸ್

"ಪೋಲೀಸರ ಗುಂಡು ಗಲಭೋಕೋರರನ್ನು ನಿಂಯತ್ರಿಸಲು ಅಲ್ಲ"

ಮುಂಬೈಯ ಮೌಲಾನಾ ಶೌಕತ್ ಅಲಿ ರಸ್ತೆ. ಡಿಸೆಂಬರ್ 7ರ ಮಧ್ಯಾಹ್ನ. ಊಟಕ್ಕೆ ಕೂರುವ ಮೊದಲು ದೂರದರ್ಶನದ 2.00 ಗಂಟೆಯ ಸುದ್ದಿ ಕೇಳುತ್ತಿದ್ದ 22 ವರ್ಷದ ನಸೀಮಾ ಅಯೂಬಾ ಖಾನ್, ಎಂದೂ ರಾಜಕೀಯದ ಬಗ್ಗೆ ಟೀಕೆ-ಟಿಪ್ಪಣಿ ಮಾಡದ ನಸೀಮಾ ಬಾಯಿಂದ ಬಂತು - "ಮಸೀದಿಯನ್ನು ಮತ್ತೆ ಕಟ್ಟುತ್ತೇವೆ ಎನ್ನುವವರು ಮೊದಲಿಗೆ ಅದನ್ನು ಕೆಡವಲು ಏಕೆ ಬಿಟ್ಟರು" ಸಾವಿರಾರು ಮೈಲಿ ದೂರದ ಆ ಧ್ವಂಸ ಕಾರ್ಯ ಮೂವತ್ತು ನಿಮಿಷಗಳಿಗೆ ಈ ನಸೀಮಾಳ ಜೀವವನ್ನು ಬಲಿ ತೆಗೆದುಕೊಂಡಿತ್ತು. ಸುದ್ದಿ ಕೇಳಿ ಊಟಕ್ಕೆ ಕೂರುವ ಮೊದಲು ತನ್ನ ಅತ್ತೆಗೆ ಟವೆಲ್ ತರಲು ತಾವು ವಾಸಿಸುವ ಕಟ್ಟಡದ ಎರಡನೇ ಅಂತಸ್ತಿಗೆ ಬಾಲ್ಕನಿಗೆ ಹೋಗಿ ಒಣಗಲು ಹಾಕಿದ ಬಟ್ಟೆಗಳ ಕ್ಲಿಪ್ ತೆಗೆಯುತ್ತಿದ್ದಂತೆ ಸುಯ್ಯೆಂದು ಗುಂಡೊಂದು ಅವರ ತಲೆಯನ್ನು ಸೀಳಿಕೊಂಡು ಹೋಯಿತು. ವಿಲವಿಲ ಒದ್ದಾಡಿ ಅಸು ನೀಗಿದಳು 22 ವರ್ಷದ ನಸೀಮಾ. ಅವರು ಪೋಲೀಸ್ ಗೋಳೀಬಾರು ನೋಡಲೂ ಕೂಡಾ ಹೋದವಳಲ್ಲ. ಕೇವಲ ಒಣಗಿದ ಟವೆಲ್ ತರಲು ಹೋದವಳು. ಸ್ವಲ್ಪ ಬಗ್ಗಿದ್ದರೂ ಆಕೆ ಉಳಿಯುತ್ತಿದ್ದಳು ಎಂದು ಹಲುಬುತ್ತಾಳೆ ಆಕೆಯ ಅತ್ತೆ.

* * * * * * *

ಮುಂಬೈನಗರದ ಇನ್ನೊಂದು ರಸ್ತೆ- ಖಾಂಡಿಯಾ ಸ್ಟ್ರೀಟ್. ಶಮೀನಾ ಬಾನು ಕಣ್ಣೀರೇ ಇಂಗಿಹೋದಂತೆ ಶೂನ್ಯದತ್ತ ದಿಟ್ಟಿಸುತ್ತಿದ್ದಾಳೆ ಆಕೆಯ 18 ವರ್ಷದ ಕಾಲೇಜಿಗೆ ಹೋಗುವ ಕಿರಿಯ ಮಗ ಝೂಹೆದ್ ಹುಸೇನ್ ಪೋಲೀಸ್ ಗೋಳೀಬಾರಿಗೆ ಬಲಿಯಾದ. "ಪೋಲೀಸರು ಗೋಳೀಬಾರು ಮಾಡುತ್ತಿದ್ದುದ್ದು ಗಲಭೆಯೆಬ್ಬಿಸುತ್ತಿದ ಜನಜಂಗುಳಿಯನ್ನು ಹತೋಟಿಯಲ್ಲಿಡಲು ಅಲ್ಲ, ದೂರದಲ್ಲಿ ನಿಂತು ನೋಡುತ್ತಿರುವವರನ್ನು ಕೊಲ್ಲಲು" ಎನ್ನುತ್ತಾನೆ ಅವನ ಅಣ್ಣ ಪರ್ವೇಝ್ ಖಾನ್. "ಸಲ್ಮಾನ್ ರಶ್ದಿಯ ಪುಸ್ತಕಕ್ಕೆ ಸಂಬಂಧಪಟ್ಟಂತೆ ನಡೆದ ಗಲಾಟೆಯ ಸಮಯದಲ್ಲಿ ನಾವು ಮುಸಲ್ಮಾನರು ಭಾರೀ ನಾಜೂಕು ಸ್ಥಿತಿಯಲ್ಲಿದ್ದೇವೆ ಎಂದು ನನಗೆ ತಿಳಿಯಿತು. ಆದ್ದರಿಂದ ಏನೇ ಬರಲಿ. ಹಿಂಸಾಚಾರಕ್ಕೆ ಹೋಗಬೇಡ ಲೀನ್ ಝೂಹೆದ್‌ಗೆ ಪ್ರತಿ ದಿನ ಹೇಳುತ್ತಿದ್ದೆ. ನಾನೊಬ್ಬ ಸಾಮಾನ್ಯ ಬ್ಯಾಂಕ್ ಗುಮಾಸ್ತ ಆದರೆ ನನಗೀಗ ಅನ್ನಿಸ್ತತೆ - ನಾನು ಲೂಟಿ ಮಾಡಿ, ದೆಂಕಿ ಹಚ್ಚಿ ನನ್ನ ತಮ್ಮನ ಸಾವಿನ ಸೇಡು ತೀರಿಸಬಲ್ಲೆ" ಎಂದು. ತಾಯಿ ಶಮೀನಾ ಬಾನು ಮೆಲ್ಲನೆ ತನ್ನಷ್ಟಕ್ಕೆ ಹೇಳುತ್ತಿದ್ದಾಳೆ ಎಲ್ಲಾ ಅಲ್ಲಾನ ಇಚ್ಛೆ

* * * * * * * *

ಮುಂಬೈಯ ಮತ್ತೊಂದು ಬಸ್ತಿ. ಕುಮ್ಹಾರ್(ಕುಂಬಾರ)ವಾಡಾದ 4ನೇ ಕೇರಿ. ಹಿಂದೂ ಮುಸಲ್ಮಾನರು ಪಕ್ಕ-ಪಕ್ಕದಲ್ಲೇ ವಾಸಿಸುವ ಸ್ಥಳ. ಡಿಸೆಂಬರ್ 9 ರವರೆಗೂ ಏನೂ ಇರಲಿಲ್ಲ. ಆದರೆ ಆ ದಿನ ಪಕ್ಕದ ದುರ್ಗಾ ದೇವಿ ಮುನಿಸಿಪಲ್ ಶಾಲೆಯ ಛಾವಣಿಯಿಂದ ಖಾಸಿಮ್ ಬಿಲ್ಡಿಂಗ್‌ನ ಮೇಲೆ ಸತತವಾಗಿ ಕಲ್ಲು, ಬಾಟಲುಗಳು, ಟ್ಯೂಬ್ ಲೈಟ್



ಚೂರುಗಳ ಸುರಿಮಳೆ. ಇದನ್ನು ತಾಳ[...]ರದೆ ಹಲವು ಕುಟುಂಬಗಳು ಅಲ್ಲಿಂದ [...] ಹೋಗಿ ಮಟನ್ ಸ್ಟ್ರೀಟ್‌ನಲ್ಲಿರುವ ಜಮಾ[...]ತ್‌ಖಾನಾದಲ್ಲಿ ಶರಣು ಪಡೆದರು. ಪೋಲೀಸರು ಆ ಗೂಂಡಾ ಜನಗಳಿಗೆ ಶಾಲೆ[...] ಛಾವಣಿಯೇರಲು ಅವಕಾಶ ಮಾಡಿಕೊಟ್ಟರು ಎನ್ನುತ್ತಾಳೆ ಪುಟ್ಟ ಕೂಸನ್ನು ಹಿಡಿ[...]ದ್ದ ಝುಬೇದಾ. ಕಾಮ್ರದ ತಂತಿಯ [...]ಲ್‌ಗಳಿಗೆ ರಬ್ಬರ್ ಟಯರ್ ಸುತ್ತಿ ಅದ[...] ದೆಂಕಿ ಹಚ್ಚಿ ಈ ಗೂಂಡಾಗಳು ಎಸೆಯು[...]ದ್ದಾಗ ಅವರನ್ನು ತಡೆಯಿರಿ ಎಂದು ಪೋಲೀಸರನ್ನು ವಿನಂತಿಸಿಕೊಂಡರೆ ತಂಬಾಕು ಜ[...]ಯುತ್ತಾ ಪೋಲೀಸನವರು ಕೊಟ್ಟ ಉತ್ತ[...] "ನಮಗೆ ಗೋಳೀಬಾರ್ ಮಾಡಲು ಆರ್ಡ[...] ಇಲ್ಲ."

"ಆ ಜನಜಂಗುಳಿಯ ಮು[...] ರಬಹುದು. ಆದರೆ ನಮ್ಮ ಮೊಹಲ್ಲ[...]ವರು ಯಾರೂ ಇರಲಿಲ್ಲ. ಆದರೆ ಪೋಲೀಸರು ಕೊನೆಗೂ ಬಂದೂಕು ಎತ್ತಿಕೊ[...] ಅವರು ನುಗ್ಗಿದ್ದು ನಮ್ಮ ಮನೆಗಳಿಗೇ [...] ಹೆಂಗಸರ ಕುತ್ತಿಗೆಗೆ ಬಂದೂಕಿನ ನಳಿಗಳ[...] ಇಟ್ಟು 'ನೀವು ಗೂಂಡಾಗಳಿಗೆ ಆಶ್ರಯ ನೀ[...]ದ್ದೀರಿ' ಎಂದು ಹೆದರಿಸಿದರು" ಎನ್ನುತ್ತಾ[...] ತಲೆಯಲ್ಲಿ ದೊಡ್ಡ ಗಾಯವಾದುದರಿಂ[...] ಅಂಗಾತ ಮಲಗಿದ್ದ ಒಬ್ಬ ವ್ಯಕ್ತಿ.

* * * * * * * *

ಈ ಕಾಸಿಂ ಬಿಲ್ಡಿಂಗ್ ಈಗ ಒಂ[...]ದೆವ್ವದ ಮನೆಯೇ ಎಲ್ಲಾ ಮನೆಗಳಿಗೂ ಬೀ[...] ಮೇಲಿನ ಮಹಡಿಯಲ್ಲಿ ಒಂದು ಮನೆ ಮಾ[...] ತೆರೆದಿದೆ. 70 ವರ್ಷದ ನೂರ್ ಜಹಾಂ [...] ಜಾಗ ಬಿಡುವಂತಿಲ್ಲ. ಏಕೆಂದರೆ ಆ[...]ಗಂ[...] ಹೃದಯ ರೋಗದಿಂದ ಹಾಸಿಗೆ ಹಿಡಿದಿದ್ದಾ[...] ಆತನನ್ನು ಎತ್ತಿಕೊಂಡು ಹೋಗುವಂತಿ[...]

"ಇಂತಹದೊಂದು ದಂಗೆಯನ್ನು ನಾ[...] ನೋಡೇ ಇಲ್ಲ" ಎನ್ನುತ್ತಾಳೆ 70 ವ[...] ನೂರ್‌ಜಹಾಂ, (ಕೃಪೆ ಟೈಮ್ಸ್ ಆ[...] ಇಂಡಿಯಾ)

ವಿಜಯೋತ್ಸವ ಆಚರಿಸುವ [...] ಪಡೆಗಳೇ ಮುಂಬೈನ "ಶಿವಸೈನಿಕರೇ ನಿ[...] ಧನ್ಯರು! ನೀವು ಧನ್ಯರು !"

ಸರಕಾರದ ನಿಷ್ಕ್ರಿಯತೆಯ ಲಾಭಪಡೆದರು
ಬಿ.ಜೆ.ಪಿ.-ಶಿವಸೇನೆ ಬೆಂಬಲ ಪಡೆದ ಸಮಾಜಘಾತುಕರು

ಬಾಬ್ರಿ ಮಸೀದಿ ಕೆಡವಿದ ಹಿನ್ನೆಲೆಯಲ್ಲಿ ಮುಂಬೈನಲ್ಲಿ ನಡೆದ ಭಯಾನಕ ಹಿಂಸಾಚಾರದ ಬಗ್ಗೆ ಒಂದು ಆಮೂಲಾಗ್ರ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಡಿಸೆಂಬರ್ 20 ರಂದು ಮುಂಬೈನ ದಂಗೆಪೀಡಿತ ಪ್ರದೇಶಗಳಲ್ಲಿ ಸಂಚರಿಸಿದ ಸಿಪಿಐ(ಎಂ) ನಿಯೋಗ ಕರೆ ನೀಡಿದೆ. ಪೋಲೀಸ್ ಮತ್ತು ಆಡಳಿತದಲ್ಲಿಯೂ ಕೋಮು ವಿಷಾಣು ಹರಡಿರುವ ಬಗ್ಗೆ ಸಿಪಿಐ(ಎಂ) ನಿಯೋಗ ತೀವ್ರ ಆತಂಕ ವ್ಯಕ್ತಪಡಿಸಿದೆ. ಇಂತಹ ವಿಷಾಣುಗಳನ್ನು ಬುಡ ಸಹಿತ ಕಿತ್ತೆಸೆಯಲು ಕ್ರಮ ಕೈಗೊಳ್ಳಲು ವಿವರವಾದ ತನಿಖೆ ನಡೆಸಬೇಕೆಂದು ನಿಯೋಗ ಒತ್ತಾಯಿಸಿದೆ.

ಸಂಸತ್ ಸದಸ್ಯರಾದ ಸೈಫುದ್ದೀನ್ ಚೌಧುರಿ, ಅನಿಲ್ ಬಸುರವರ ಜೊತೆ ಕೇಂದ್ರಸಮಿತಿ ಸದಸ್ಯ ಪಿ. ಬಿ. ಸಾಂಧ್ಯಾಗಿರಿ ಹಾಗೂ ಮುಂಬೈ ಘಟಕದ ಕಾರ್ಯದರ್ಶಿ ಮಹೇಂದ್ರಸಿಂಗ್ ನಲ್‌ಬದ್ವಾರ್, ಮಹೀಮಲ್‌ನ ಮಿನುಗಾರ ಹಳ್ಳಿ, ಧಾರಾವಿ, ಮೋಮಿನ್‌ಪುರ ಹಾಗೂ ದೇವನಾರ್ ಪ್ರದೇಶಗಳಲ್ಲಿ ಸಂಚರಿಸಿದ ಈ ನಿಯೋಗದ ಸದಸ್ಯರು ಹಿಂಸಾಚಾರದಿಂದ ತೊಂದರೆಗೊಳಗಾದ ಹಲವಾರು ಮಂದಿಯನ್ನು ಭೇಟಿ ಮಾಡಿ ಮಾತನಾಡಿದರು. ಈ ಪ್ರದೇಶಗಳಿಗೆ ಪರಿಸ್ಥಿತಿ ಇನ್ನೂ ಶೋಚನೀಯವಾಗಿ[...] ಪೋಲೀಸರು ಎಲ್ಲಿದೊಯ್ದು ಬಹಳಷ್ಟು ಯುವಕರು ಎಲ್ಲಿದ್ದಾರೆ ಎಂದು ಇನ್ನೂ ತಿಳಿದಿಲ್ಲ ಎಂದು ನಿಯೋಗ ಹೇಳಿದೆ.

ಮುಂಬೈ ತತ್ತರಿಸುವಂತೆ ಮಾಡಿದ ದಂಗೆ, ಹಿಂಸಾಚಾರಕ್ಕೆ ಬಹುಪಾಲು ರಾಜ್ಯಸರಕಾರದ ಅದಕ್ಷತೆಯೇ ಕಾರಣ ಎಂದು ಸಿಪಿಐ(ಎಂ) ನಿಯೋಗ ಅಭಿಪ್ರಾಯಪಟ್ಟಿದೆ. ಸರಕಾರ ನಿಷ್ಕ್ರಿಯಗೊಂಡಿತ್ತು. ಸಮಾಜಘಾತಕ ಶಕ್ತಿಗಳು ಇದರ ಪೂರ್ಣ ಪ್ರಯೋಜನ ಪಡೆದರು. ಈ ಶಕ್ತಿಗಳಿಗೆ ಬಿ.ಜೆ.ಪಿ. ಶಿವಸೇನೆ ಬೆಂಬಲವಿತ್ತು.

ದಂಗೆಗಳ ಗಂಭೀರ ಅಂಶವೆಂದರೆ ಪೋಲೀಸರಲ್ಲೂ ಕೆಲವರು ಇದರಲ್ಲಿ ತೊಡಗಿದ್ದು ತೊಂದರೆ ಗೀಡಾದ ಜನರು ಮತ್ತೆ ಮತ್ತೆ ನೀಡುತ್ತಿದ್ದಾ ದೂರು ಇದೀ ಪೋಲೀಸರೇ ನೇರವಾಗಿ ಇದರಲ್ಲಿ ತೊಡಗಿದ್ದರೂ ತಮ್ಮ ಮನೆಗಳಿಗೆ ದೆಂಕಿಯಿಟ್ಟರು ಎಂದು . ಪೋಲೀಸರು ಈ ಪ್ರದೇಶಗಳಿಂದ ಎಳೆದೊಯ್ದವರಲ್ಲಿ ಬಹಳಷ್ಟು ಮಂದಿ ಇನ್ನು ಮನೆಗಳಿಗೆ ಹಿಂತಿರುಗಿಲ್ಲ.

ಈ ಬಗ್ಗೆ ಆಮೂಲಾಗ್ರ ತನಿಖೆಯಾಗಬೇಕು, ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸಿ-
ಬೇಕು ಎಂದು ಸಿಪಿಐ(ಎಂ) ನಿಯೋಗ ಹೇಳಿದೆ ಕೋಮು ಹಿಂಸಾಚಾರದಲ್ಲಿ ಹೀಗೆ ಪೋಲೀಸರೇ ತೊಡಗುವುದನ್ನು ತಡೆಯಲು ಪೋಲೀಸು ಹಾಗೂ ಆಡಳಿತಗಾರರಿಗೆ ಅಗತ್ಯವಾದ ಜಾತ್ಯಾತೀತ ತರಬೇತಿ ನೀಡಬೇಕು ಎಂದು ಅದು ಹೇಳಿದೆ.

ಕಾಂಗ್ರೆಸ್ (ಐ) ತನ್ನದೇ ಜನರ ಪೂರ್ವಾಪರವನ್ನು ತನಿಖೆಮಾಡುವ ಅಗತ್ಯ ಬಂದಿದೆ ಎಂದೂ ನಿಯೋಗ ಕರೆ ನೀಡಿದೆ. ಕೆಲವು ಕಾಂಗ್ರೆ ಮುಖಂಡರೆಂದುಕೊಳ್ಳುವವರೇ ದಂಗೆಕೋರರಿಗೆ ಕುಮ್ಮಕ್ಕು ನೀಡುತ್ತಿದ್ದುದು ಕಂಡು ಬಂದಿದೆ. ಧಾರಾವಿಯಲ್ಲಿ ಸ್ಥಳೀಯ ಕಾಂಗ್ರೆಸ್(ಐ) ಕೌನ್ಸಿಲರ್ ನೇತೃತ್ವ ಈ ದಂಗೆಗಳಲ್ಲಿ ಭಾಗವಹಿಸಿದ ಉದಾಹರಣೆಗಳಿವೆ.

ಪರಿಸ್ಥಿತಿಯೇನೋ "ಸಾಮಾನ್ಯ" ಗೊಂಡಿದೆ. ಆದರೆ ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಗಳು ಕನಿಕರಪಡಬೇಕಾದ ಸ್ಥಿತಿಯಲ್ಲಿದ್ದಾರೆ. ಯಾವುದೇ ಪರಿಹಾರ, ಮರುವಸತಿ, ಸೌಲಭ್ಯ ಅವರಿಗೆ ತಲುಪಿಯೇ ಇಲ್ಲ. ಈ ಹಿಂಸಾಚಾರದಲ್ಲಿ ಮನೆ-ಮಾರುಗಳನ್ನು ಜೀವನಾಧಾರವನ್ನು ಕಳಕೊಂಡವರಿಗೆ ಮುಳವಸತಿ ಕಲ್ಪಿಸುವ ಯಾವ ಯೋಜನೆಯೂ ಕಾಂಗ್ರೆಸ್(ಐ) ಸರಕಾರದ ಬಳಿಯಿದ್ದಂತಿಲ್ಲ. ಹಿಂಸಾಚಾರ ಮರುಕಳಿಸದಂತೆ ಮಾಡಲು ತುರ್ತಾಗಿ ಪರಿಹಾರ ಕ್ರಮಗಳನ್ನ ಕೈಗೆತ್ತಿಕೊಳ್ಳಬೇಕೆಂದು ಸಿಪಿಐ(ಎಂ) ನಿಯೋಗ ಒತ್ತಾಯಿಸಿದೆ.



ಶಿಕ್ಷಣ ಸಾರ್ವಭೌಮತೆ, ಮತ್ತು ಕೋಮು ಸಾಮರಸ್ಯಗಳ ಉಳಿವಿಗಾಗಿ, ಎಸ್.ಎಫ್.ಐ. ರಾಜ್ಯ ಸಮಾವೇಶದ ಕರೆ

ಡಿಸೆಂಬರ್ 6 ರಂದು ಅಯೋಧ್ಯಾ ಘಟನೆಯಿಂದ ಉಂಟಾದ ಆತಂತಕಾರೀ ಸನ್ನಿವೇಶದಲ್ಲಿ ಡಿಸೆಂಬರ್ 21,22 ರಂದು ಎಸ್.ಎಫ್.ಐ. ರಾಜ್ಯ ಸಮಾವೇಶ "ಶಿಕ್ಷಣ ಉಳಿಸಿ" "ಸಾರ್ವಭೌಮತೆ ಉಳಿಸಿ," "ಕೋಮು ಸಾಮರಸ್ಯ ಉಳಿಸಿ," ಎಂಬ ಘೋಷಣೆಗಳೊಂದಿಗೆ ದಾವಣಗೆರೆಯಲ್ಲಿ ನಡೆಯಿತು.

ದಿನಾಂಕ 21 ರ ಬೆಳಿಗ್ಗೆ ಕೊನೆಗೂ ಶಾಂತಿ, ಪ್ರೀತಿ, ಸಾಮರಸ್ಯದ ಸಂದೇಶ ಮೌನ ಮೆರವಣಿಗೆಗಳಿಗೆ ಅನುಮತಿ ದೊರೆಯಿತು. ದೀರ್ಘ ರಜೆಯ ನಂತರ ಶಾಲಾ ಕಾಲೇಜುಗಳು ಅಂದೇ ಆರಂಭವಾಗಿದ್ದರೂ ಸಹ ಮೆರವಣಿಗೆಯಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡರು. ನಂತರ ನಗರ ಸಭಾ ರಂಗ ಮಂಟಪದಲ್ಲಿ ನಡೆದ ಬಹಿರಂಗ ಅಧಿವೇಶನವನ್ನು ಖ್ಯಾತ ಸಾಹಿತಿ ಫಕೀರ್ ಮಹಮದ್ ಕಟ್ಪಾಡಿಯವರು ಉದ್ಘಾಟಿಸಿದರು.

ಭಾರತ ಇತಿಹಾಸದಲ್ಲಿ ಮಹಾತ್ಮಗಾಂಧಿಯ ಕೊಲೆಯ ನಂತರ ನಡೆದಂತ ಅತ್ಯಂತ ಘೋರ ಕೃತ್ಯ ಡಿಸೆಂಬರ್ 6 ರ ಘಟನೆ ಎಂದು ಅಯೋಧ್ಯೆಯ ಬಾಬರಿ ಮಸೀದಿಯು ನಾಶವನ್ನು ಖಂಡಿಸಿದರು. ಅಂದು ಸತ್ಯ ಅಹಿಂಸೆಗಳ ಕೊಲೆಯಾದರೆ ಇಂದು ಸಂವಿಧಾನ ಮತ್ತು ಜಾತ್ಯಾತೀತತೆ ಕೊಲೆಯಾಗಿದೆ ಎಂದು ವಿಷಾದಿಸಿದರು.

ಮೊದಲನೆ ಸ್ವಾತಂತ್ರ್ಯ ಸಂಗ್ರಾಮ ಸೈನಿಕರ ಬಂಡಾಯದಿಂದ ಹಿಡಿದು ದೀರ್ಘ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಂಗ್ರಾಮದಲ್ಲಿ ಹಿಂದೂ ಮುಸ್ಲಿಂ ಎನ್ನದೇ ಎಲ್ಲ ಧರ್ಮದ ಜನ ಒಂದಾಗಿ ಸಾಮ್ರಾಜ್ಯಸಾಹಿಗಳ ವಿರುದ್ಧ ಹೋರಾಡಿದ್ದನ್ನು ನೆನಪಿಸಿದರು. ದೇಶದ ಭಾವೈಕ್ಯತೆ ಸಮಗ್ರತೆಯನ್ನು ಉಳಿಸಿಕೊಳ್ಳುವಲ್ಲಿ ವಿದ್ಯಾರ್ಥಿ ಸಮುದಾಯಕ್ಕೆಅದರಲ್ಲೂ ಎಸ್.ಎಫ್.ಐ. ವಿದ್ಯಾರ್ಥಿಗಳಿಗೆ ಗುರುತರವಾದ ಜವಾಬ್ದಾರಿ ಇದೆ ಎಂದು ತಿಳಿಸಿದರು.

ಎಸ್.ಎಫ್.ಐ ಕೇಂದ್ರ ಸಹ ಕಾರ್ಯದರ್ಶಿ ಕಾಂ. ವೆಂಕಟೇಶ್ವರ ರಾವ್ ಅವರು ಮಾತನಾಡಿ ರಾಜಕೀಯ ಲಾಭಕ್ಕಾಗಿ ರಾಮನನ್ನು ಬಳಸಿಕೊಳ್ಳುವ ಕೋಮುವಾದಿ ಶಕ್ತಿಗಳ ಆಟವನ್ನು ಖಂಡಿಸಿದರು.

ಶಿಕ್ಷಣವನ್ನು ಉಳ್ಳವರಿಗೆ ಮಾರಾಟವಾಡುವ ಬಂಗಾರಪ್ಪನವನ ಆದರ್ಶವನ್ನು ಆಂಧ್ರದ ಜನಾರ್ಧನ ರೆಡ್ಡಿಯವರು ಅನುಸರಿಸಿದರು ಎಂದ ಅವರು ಇಂತಹ ಶಕ್ತಿಗಳ ವಿರುದ್ಧ ವಿದ್ಯಾರ್ಥಿಗಳ ಹೋರಾಟಕ್ಕೆ ಸಿಕ್ಕ ಜಯವನ್ನು ನೆನಪಿಸಿ ವಿದ್ಯಾರ್ಥಿಗಳ ವಿರೋಧಿ ನೀತಿಗಳ ವಿರುದ್ಧ ಸಂಘಟಿತ ಹೋರಾಡಬೇಕಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಕಾಂ. ಸೂರ್ಯನಾರಾಯಣರಾವ್ ಅವರು ಮಾತನಾಡಿ ರಾಮಾಯಣ ಅಥವಾ ಮಹಾಭಾರತದ ಯುದ್ಧಗಳು ಹಿಂದೂ ಮುಸ್ಲಿಂ ಯುದ್ಧವಲ್ಲ ಅದರ ಹಿಂದೆ ಇರುವುದು ಆರ್ಥಿಕ ಹಿತಾಸಕ್ತಿ, ಆರ್ಥಿಕ ಹಿತಾಸಕ್ತಿಯ ಮುಂದೆ ಯಾವ ಜಾತಿ ಭೇದವೂ ಇಲ್ಲ ಎಂದರು.

ಶಿಕ್ಷಣವನ್ನು ನಿರಾಕರಿಸುವ ವ್ಯವಸ್ಥೆಯ ವಿರುದ್ಧ ಕೋಮು ಶಕ್ತಿಗಳ ವಿರುದ್ಧ ದಿಟ್ಟ ಹೋರಾಟ ಮಾಡಲು ಕರೆ ನೀಡಿದರು. ಇವರುಗಳಲ್ಲದೆ ಜನತಾದಳಧ ಕೆ.ಜಿ. ಮಹದೇಶ್ವರಪ್ಪ ಕೆ. ಮಲ್ಲಪ್ಪ ಸಿ.ಐ.ಟಿ.ಯು ಮುಖಂಡ ಕಾಂ. ನಿತ್ಯಾನಂದಸ್ವಾಮಿ ಅವರು ಮಾತನಾಡಿದರು.

ಕಾಂ. ಜಿ.ವಿ. ಶ್ರೀ ರಾಮರೆಡ್ಡಿಯವರು ಭೋಧಿಸಿದ ಐಕ್ಯತೆ ಮತ್ತು ಸಮಗ್ರತೆಯನ್ನು ಉಳಿಸುವ ಪ್ರತಿಜ್ಞೆಯನ್ನು ನೆರೆದಿದ್ದ ನೂರಾರು ಜನ ಒಕ್ಕೊರಲಿನಿಂದ ಪುನರುಚ್ಚರಿಸಿದರು.

ನಂತರ ಅಕ್ಕಮಹಾದೇವಿ ಮಂಟಪದಲ್ಲಿ ನಡೆದ ಪ್ರತಿನಿಧಿ ಅಧಿವೇಶನಕ್ಕೆ ಮುನ್ನ ಎಸ್.ಎಫ್. ಐ. ರಾಜ್ಯ ಅಧ್ಯಕ್ಷರಾದ ಕಾಂ. ಜಿ. ಸಿ. ಬಯ್ಯಾರೆಡ್ಡಿ ಧ್ವಜಾರೋಹಣ ಮಾಡಿದರು.

21 ರ ಸಂಜೆ ಮತ್ತು 22 ರಂದು ನಡೆದ ಅಧಿವೇಶನದಲ್ಲಿ ಸಂಘಟನೆಯ ಸಂಖ್ಯಾತ್ಮಕ, ಗುಣಾತ್ಮಕ ಬೆಳವಣಿಗೆಯ ಬಗ್ಗೆ ಹಾಗೂ ಕೊರತೆಗಳ ಬಗ್ಗೆ ಚರ್ಚಿಸಲಾಯಿತು. ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿಬಂದ 98 ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಅಯೋಧ್ಯೆಯ ಬಾಬರಿ ಮಸೀದಿಯನ್ನು ಒಡೆದ ಕೃತ್ಯವನ್ನು ಖಂಡಿಸುವ, ಹಾಗೂ ಶಿಕ್ಷಣದಲ್ಲಿ ಅಮೂಲಾಗ್ರ ಬದಲಾವಣೆ ಮಾಡುವುದಾಗಿ ಹೇಳುತ್ತಿರುವ ಸರಕಾರ ಈ ಬಗ್ಗೆ ವಿದ್ಯಾರ್ಥಿ ಸಂಘಟನೆಗಳನ್ನು ವಿಶ್ವಾಸಕ್ಕೆತಗೊಳ್ಳಲು ಆಗ್ರಹಿಸುವ ಹಾಗೂ ರಾಜ್ಯ ವಿದ್ಯಾರ್ಥಿ ಸಮುದಾಯ ಸಾಮ್ರಾಜ್ಯಶಾಹಿ ಧಾಳಿಯ ವಿರುದ್ಧ ದೇಶದ ಸ್ವಾತಂತ್ರ್ಯ ಸಾರ್ವಭೌತೆಯನ್ನು ಕಾಪಾಡಲು ಪಣ ತೊಡುವ ಕರೆ ನೀಡುವ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.



ಸಮಾವೇಶನದ ಸಮಾರೋಪವನ್ನು ಮಾಡುತ್ತಾ ಕಾಂ. ಜಿ. ಶ್ರೀ ರಾಂ. ರೆಡ್ಡಿಯವರು ಕಳೆದ ಸಮ್ಮೇಳನದಿಂಧೀಚೆಗೆ ಎಸ್.-ಎಫ್. ಐ. ಸಂಖ್ಯೆಯಲ್ಲಿ ಸಾಕಷ್ಟು ಬೆಳೆದಿದ್ದರೂ ಗುಣಾನಾತ್ಮಕವಾಗಿ ಇನ್ನಷ್ಟು ಬೆಳೆಯಬೇಕಿದೆ ಸೈದ್ಧಾಂತಿಕವಾಗಿ ವಿದ್ಯಾರ್ಥಿಗಳನ್ನು ಇನ್ನಷ್ಟು ತರಬೇತುಗೊಳಿಸಬೇಕಾಗಿದೆ ಎಂದರು.

ಕಠಿಣ ಸನ್ನಿವೇಶದಲ್ಲಿ ಸಮ್ಮೇಳವನ್ನು ಯಶಸ್ವಿಯಾಗಿ ಸಂಘಟಿಸಿದ ದಾವಣಗೆರೆಯ ಸ್ವಾಗತ ಸಮಿತಿಗೆ ಸಂಗಾತಿಗಳಿಗೆ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಯಿತು.

22 ರ ಸಂಜೆ "ಜಾತ್ಯತೀತತೆ ಮತ್ತು ರಾಷ್ಟ್ರೀಯ ಸಮಗ್ರತೆ" ಎಂಬ ವಿಷಯದ ಮೇಲೆ ವಿಚಾರ ಸಂಕಿರಣವೊಂದನ್ನು ಸಂಘಟಿಸಲಾಗಿತ್ತು. ಬಂಡಾಯ ಸಾಹಿತಿ ಪ್ರೋ. ಎಸ್. ಕೆ. ಮಹೇಶ್. ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಸಿ. ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದ ಕಾಂ. ವೆಂಕಟೇಶ್ವರ ಅವರು ಕರ್ನಾಟಕದಲ್ಲಿ ಎಸ್.ಎಫ್. ಐ. ವಿದ್ಯಾರ್ಥಿಗಳ ಸಮಸ್ಯೆಗಳ ಆಧಾರದಲ್ಲಿ ಹೋರಾಟ ಮಾಡುವ ಏಕೈಕ ವಿದ್ಯಾರ್ಥಿ ಸಂಘಟನೆಯಾಗಿ ಗುರುತಿಸಲ್ಪಡುತ್ತಿದ್ದರೂ ಸಹ ಇದಿಷ್ಟೇ ಸಾಲದು ಈ ಪ್ರಭಾವವನ್ನು ಸಂಘಟನಾತ್ಮಕವಾಗಿ ಕ್ರೋಢೀಕರಿಸುವ ಹಾಗೂ ವಿದ್ಯಾರ್ಥಿ ಸಮುದ್ಧಯವನ್ನು ರಾಜಕೀಯವಾಗಿ ತರಬೇತಿ ನೀಡುವ ನಿಟ್ಟಿನಲ್ಲಿ ಬಹಳ ಕೆಲಸ ಆಗಬೇಕಿದೆ ಎಂದರು.

9 ಜನರನ್ನು ಅಖಿಲ ಭಾರತ ಸಮ್ಮೇಳನಕ್ಕೆ ಕರ್ನಾಟಕದ ಪ್ರತಿನಿಧಿಗಳಾಗಿ ಆಯ್ಕೆ ಮಾಡಲಾಯಿತು.

ಎಚ್. ಪಟೇಲ್ ಪ್ರಜಾವಾಣಿ ಚಿತ್ರದುರ್ಗ ಜಿಲ್ಲಾ ವರದಿಗಾರರಾದ ಶ್ರೀ ಗುಡ್ಡಿಹಳ್ಳಿ ನಾಗರಾಜ್. ಕಾಂ. ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿದರು. ಕಾಂ. ನಿತ್ಯಾನಂದ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಎಡರಂಗ-ವಿರೋದಿ ಶಕ್ತಿಗಳನ್ನು ತಣ್ಣಗಾಗಿಸಿದ ನವಂಬರ್ 29 ರ ಐತಿಹಾಸಿಕ ರ್‍ಯಾಲಿ

ನವಂಬರ್ 29 ಕಲ್ಕತ್ತೆಯಲ್ಲೊಂದು ಐತಿಹಾಸಿಕ ದಿನ. ಪಶ್ಚಿಮ ಬಂಗಾಳದಲ್ಲಿ 1977 ರಲ್ಲಿ ಎಡರಂಗದ ಆಳ್ವಿಕೆ ಆರಂಭವಾದ ನಂತರ ಕಲ್ಕತ್ತೆಯ ಬ್ರಿಗೇಡ್ ಮೈದಾನದಲ್ಲಿ ನಡೆಯುತ್ತಿದ್ದ 23 ನೇ ಬೃಹತ್ ರ್‍ಯಾಲಿಯಾದರೂ ಎಡರಂಗದ ಕುರುಡು ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರ ನೀಡಿದ ಐತಿಹಾಸಿಕ ರ್‍ಯಾಲಿಯಾಗಿತ್ತದು. ಕಲ್ಕತ್ತಾ ನಗರದ ಬಣ್ಣ ಅಂದು ಸಂಪೂರ್ಣ ಕೆಂಪು. ಸಾರ್ವಜನಿಕ ಸಭೆನಡೆಯುವ ಒಂದು ಗಂಟೆ ಮು ಮೊದಲೇ ನಗರದ ಸಮೀಪ ಹರಿಯುವ ಗಂಗೆಯೂ ಕೆಂಬಾವುಟಗಳಿಂದ ತುಂಬಿತ್ತು. ಸುಂದರಜನ ಪ್ರದೇಶದಿಂದ ಜನ ದೋಣಿಗಳಲ್ಲಿ, ಲಾಂಚ್‌ಗಳಲ್ಲಿ ಭಾರೀ ಸಂಖ್ಯೆಯಲ್ಲಿ ಬಂದಿದ್ದರು. ಸುಮಾರು 20 ಲಕ್ಷ ಕಾರ್ಮಿಕರು, ರೈತರೂ, ಕೃಷಿಕೂಲಿಕಾರರು, ಕಲಾವಿದರಿಂದ ತುಂಬಿ ಹೋಗಿದ್ದ ಬೃಹತ್ ಮೈದಾನವೂ ಚಿಕ್ಕದೆನಿಸುತ್ತು. ಸುಮಾರು 5 ಲಕ್ಷ ಮಂದಿ ಮೈದಾನದಲ್ಲಿ ಸ್ಥಳವಿಲ್ಲದೆ ಮೈಲುಗಳಾಚೆಯೇ ನಿಲ್ಲಬೇಕಾಯಿತು. 350 ಲೌಡ್‌ಸ್ಪೀಕರ್‌ಗಳೂ ನೆರೆದ ಜನಸ್ತೋಮಕ್ಕೆ ಎಡರಂಗದ ಮುಖಂಡ ಸಂದೇಶವನ್ನು ಒಯ್ಯುವುದು ಕಷ್ಟವಾಗಿತ್ತು.

ಭಾರೀ ಸಂಖ್ಯೆಯ ದೃಷ್ಟಿಯಿಂದರಷ್ಟೇ ಅಲ್ಲ, ಅದಮ್ಯ ರಾಜಕೀಯ ಇಚ್ಛಾಶಕ್ತಿಯೂ ಬ್ರಿಗೇಡ್ ಮೈದಾನದಲ್ಲಿ ಎದ್ದು ಕಾಣುತ್ತಿತ್ತು. ನಾಲ್ಕು ದಿನಗಳ ಹಿಂದೆ ಇದೇ ನಗರದಲ್ಲಿ ನಡೆದ ದೂರದರ್ಶನ, ದೊಡ್ಡ ಬಂಡವಾಳಶಾಹಿ ಪತ್ರಿಕೆಗಳು ಭಾರೀ ಪ್ರಚಾರ ನೀಡಿದ ಕಾಂಗ್ರೆ 'ಪ್ರತಿಭಟನಾ ರ್‍ಯಾಲಿ' ಇದರ ಮುಂದೆ ಏನೂ ಅಲ್ಲ ಈ ಪತ್ರಿಕೆಗಳೇ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳಬೇಕಾಯಿತು. ವಾಸ್ತವವಾಗಿ ಇವೆರಡರ ನಡುವೆ ಏನೇನೂ ಹೋಲಿಕೆಯಿಲ್ಲ ಎಂದು ಇವರೆಲ್ಲರೂ ಅಂದು ಕಂಡುಕೊಂಡಿರಬೇಕು. ಏಕೆಂದರೆ ಅದು ಕಾಂಗ್ರೆ ಯುವಜನರ ಅತ್ಯಂತ ಅಶಿಸ್ತು, ಗಲಭೆಗಳಿಂದ ತುಂಬಿದ್ದರೆ ನವಂಬರ್ 29 ರ ರ್‍ಯಾಲಿ ರಾಜ್ಯದ ದುಡಿಯುವ ಜನಗಳ ರಾಜಕೀಯ ಪ್ರೌಢಿಮೆಯನ್ನು ಸಾರಿತು.

ನವಂಬರ್ 29 ರ ಈ ಚಾರಿತ್ರಿಕ ರ್‍ಯಾಲಿ ಕೇಂದ್ರದ ಆರ್ಥಿಕ ನೀತಿಗಳ ವಿರುದ್ಧ ರಾಜ್ಯದ ದುಡಿಯುವ ಜನಗಳ, ದೇಶದ ಪ್ರಜಾಪ್ರಭುತ್ವ ಆಂದೋಲನದ ಅತ್ಯಂತ ಶಕ್ತಿಶಾಲೀ ವಿಭಾಗದ ತೀವ್ರ ವಿರೋಧವನ್ನು ವ್ಯಕ್ತಪಡಿಸಿತ್ತಷ್ಟೇ ಅಲ್ಲ ದೊಡ್ಡ ಬಂಡವಾಳಶಾಹೀ ಪತ್ರಿಕೆಗಳ ಕಮ್ಯುನಿಸ್ಟ್-ವಿರೋಧಿ ಅಭಟಗಳಿಗೂ, ನವಂಬರ್ 25 ರಂದು ಕಲ್ಕತ್ತೆಯಲ್ಲಿ ಮಾಡಿದ ಕಾಂಗ್ರೆಗಳ ಗೂಂಡಾಗಿರಿಗೂ ಜನಗಳ ಪ್ರತ್ಯುತ್ತರದ ಸಂಕೇತವೂ ಆಗಿತ್ತು.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಮುಖ್ಯಮಂತ್ರಿ ಜ್ಯೋತಿಬಸು ಜನತೆ ಕಾಂಗ್ರೆಗೆ ತಕ್ಕ ಉತ್ತರ ನೀಡುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಕಾಂಗ್ರೆ ಹೀಗೆ ಆಂದೋಲನಗಳನ್ನು ಸಂಘಟಿಸುವ ಕೆಲಸದಲ್ಲಿ ಗಲಭೆಗಳನ್ನು ಹರಡಿಸುತ್ತಿದೆಯೆಂದು ವಿವರಿಸಿದರು. ಬಿ.ಜೆ.ಪಿ.ಯೊಂದಿಗೆ ಶಾಮೀಭುಲಾಗಿ ರಾಜ್ಯದ ಪ್ರಜಾಪ್ರಭುತ್ವ ವಾತಾವರಣವನ್ನು ಕೆಡಿಸಲು ಹೇಗೆ ಸಮಾಜಘಾತುಕ ಶಕ್ತಿಗಳನ್ನು ಬಳಸಲಾಗುತ್ತಿದೆ ಎಂದೂ ವಿವರಿಸಿದರು. ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ದೆವರಿಕೆಗಳ ಮೂಲಕ ಬುಡಮೇಲು ಮಾಡಬಯಸುವವರನ್ನು ಜನರೇ ನೋಡಿಕೊಳ್ಳುತ್ತಾರೆ ಎಂದರು. ಡಿಸೆಂಬರ್ 6 ಕರಾಳ ಘಟನೆಯ ನಂತರ ಕಲ್ಕತ್ತಾವಾಸಿಗಳು ತಮ್ಮ ಮುಖ್ಯಮಂತ್ರಿಗಳ ಈ ವಿಶ್ವಾಸವನ್ನು ಹೇಗೆ ಸಾರ್ಥಕಪಡಿಸಿದರು ಎಂಬುದನ್ನು 'ಐಕ್ಯರಂಗ'ದ ಓದುಗರು ಹಿಂದಿನ ಸಂಚಿಕೆಯಲ್ಲಿ ಈಗಾಗಲೇ ಓದಿದ್ದಾರೆ.

ಮಾರ್ಚ್ ತಿಂಗಳಲ್ಲಿ ರಾಜ್ಯ ಸರಕಾರದ ಕಾರ್ಯಾಕಲಾಪ ನಡೆಯುವ 'ರೈಟರ್ಸ್ ಬಿಲ್ಡಿಂಗ್'ನ್ನು ಘೇರಾಯಿಸುವ ಯುವ ಕಾಂಗ್ರೆಸ್(ಐ) ದೆವರಿಕೆ ಸಾಗದಂತೆ ಜನ ಮಾಡುತ್ತಾರೆ ಎನ್ನುತ್ತಾ "ಅವರೇನಾದರೂ ಇಂತಹ ಕಾರ್ಯಕ್ರಮ ನಡೆಸಿದರೆ ನೀವು ಮತ್ತೊಮ್ಮೆ ಇನ್ನೊಂದು ದಿನ ಇಲ್ಲಿ ನೆರೆಯಬೇಕಾಗುತ್ತದೆ"ಎಂದರು. ಕುಖ್ಯಾತ ಸಿಐಎ ಹಿಂದೆ ಹಲವು ಬಾರಿ ಕಾಂಗ್ರೆಸ್‌ಗೆ ಇಂತಹ ಕಮ್ಯುನಿಸ್ಟ್ ವಿರೋಧಿ ಪ್ರಚಾರಕ್ಕೆ ನಿಧಿ ನೀಡಿದೆ. ಈಗಲೂ ಸಾಮ್ರಾಜ್ಯಶಾಹಿಗಳು ಎಡರಂಗ ಸರ್ಕಾರವನ್ನು ಉರುಳಿಸಲು ತುದಿಕಾಲ ಮೇಲೆ ನಿಂತಿದ್ದಾರೆ. ದೊಡ್ಡ ಬಂಡವಾಳಶಾಹಿಗಳೂ ಕಾತುರರಾಗಿದ್ದಾರೆ. ಕಾಂಗ್ರೆ ಹಿಂಸಾಚಾರ ಇವರೆಲ್ಲ ತಂತ್ರಗಳ ಒಂದರ ಭಾಗ ಎಂದು ಜನಗಳನ್ನು ಎಚ್ಚರಿಸಿದರು.

ಎಡರಂಗ ಅಧ್ಯಕ್ಷ ಶೈಲೇನ್ ದಾಸ್-ಗುಪ್ತಾ ಹಾಗೂ ಎಡರಂಗದ ಇತರ ಪಕ್ಷಗಳ ಮುಖಂಡರು ಸಭೆಯನ್ನುದ್ದೇಶಿಸಿ ಮಾತನಾಡಿದರು. ●

ಮಮತಾ ಬ್ಯಾನರ್ಜಿಯ 'ಪ್ರದರ್ಶನಕ್ಕೆ ದುಡ್ಡೆಲ್ಲಿಂದ ಬಂತು? ಯುವ ಕಾಂಗ್ರೆ ರ್‍ಯಾಲಿಯ ಹಿಂದಿನ ದಿನವೇ ಬಂಗಾಳೀ ಪತ್ರಿಕೆ 'ಗಣಶಕ್ತಿ"ಯಲ್ಲಿ ಈ ಸುದ್ದಿ ಮೊದಲ ಪುಟದಲ್ಲಿ ಪ್ರಕಟವಾಗಿತ್ತು.

ರಾಜ್ಯದ ವಿವಿಧ ಭಾಗಗಳಿಂದ ಜನಗಳನ್ನು ತರಲು ಟ್ರಕ್ಕುಗಳು, ವ್ಯಾನುಗಳು, ಬಸ್ಸುಗಳಿಗಾಗಿ ವಿವಿಧ ಮೂಲಗಳಿಂದ ನಿಧಿ ಎತ್ತಲಾಗಿತ್ತು. ಅದರಲ್ಲಿ ಕಲ್ಕತ್ತೆಯಲ್ಲಿರುವ ವಿದೇಶಿ ಏಜೆನ್ಸಿಯೂ ಒಂದು. ಬ್ರೂಸ್ ನಾಟ್ಸ್ ಎಂಬಾತನ ಮೂಲಕ ಮಮತಾ ಬ್ಯಾನರ್ಜೀಗೆ ಈ ಪ್ರದರ್ಶನ ನಡೆಸಲು ಹಣ ಪೂರೈಸಲಾಯಿತು. ಒಬ್ಬ ಕಾಂಗ್ರೆ ಎಂ.ಎಲ್.ಎ. ಯ ವ್ಯಾಪಾರೀ ತಮ್ಮನ ಮೂಲಕ ಈತ ಮಮತಾ ಬ್ಯಾನರ್ಜಿಯೊಂದಿಗೆ ಸತತ ಸಂಪರ್ಕಹೊಂದಿದ್ದಾನೆ. ಅಮೆರಿಕಾ ಸರಕಾರಕ್ಕೆ ಸರಿಬರದ ಹಲವು ಲ್ಯಾಟಿನ್ ಅಮೆರಿಕನ್ ಸರಕಾರಗಳ ವಿರುದ್ಧ ... ಈ ಬ್ರೂಸ್ ನಾಟ್ಸ್."



ಅಮೇರಿಕಾದಲ್ಲಿ ಕ್ಯೂಬಾ ಸೌಹಾರ್ದತಾ ಜಾಥಾ-'ಕ್ಯಾರವಾನ್'

ಕ್ಯೂಬಾದ ವಿರುದ್ಧ ವಿಷಕಾರುವ ಅಮೆರಿಕದ ಸರಕಾರದ ಮೂಗಿನಡಿಯಲ್ಲೇ ಕ್ಯೂಬಾದ ಜತೆ ಸೌಹಾರ್ದತೆ ತೋರುವ ಜಾಥಾ ಯಶಸ್ವಿಯಾಗಿ ನಡೆದಿದೆ. ಈ ಜಾಥಾ ಅಮೆರಿಕದ ಹಲವಾರು ನಗರಗಳನ್ನು ಹಾದು ನವಂಬರ್ ಕೊನೆಯ ಹೊತ್ತಿಗೆ ಮೆಕ್ಸಿಕೋ ಗಡಿ ತಲುಪಿತ್ತು. ಈ ಜಾಥಾ (ಅಥವಾ ಕ್ಯಾರವಾನ್)ವನ್ನು ಕ್ಯೂಬಾ-ಬೆಂಬಲ ಗುಂಪುಗಳು, ಸೌಹಾರ್ದ ಸಮಿತಿಗಳು, ಚರ್ಚ್‌ಗುಂಪುಗಳು, ಯುದ್ಧ ವಿರೋಧಿ ಚಳುವಳಿಗಲು ಸಂಘಟಿಸಿದ್ದವು. ನವಂಬರ್ 6ಕ್ಕೆ ಆರಂಭವಾದ ಈ ಕ್ಯಾರವಾನ್ ಹಲವಾರು ತೊರೆಗಳಾಗಿ ಹರಿದು ನವಂಬರ್ 20 ರಂದು ಮೆಕ್ಸಿಕೊ ಗಡಿ ತಲುಪಿದವು.

ಕ್ಯಾರವಾನ್‌ನಲ್ಲಿ 44 ವಾಹನಗಳು 104 ಚಾಲಕರು ಇದ್ದರು. ಒಂಬತ್ತು ಬೇರೆ ಬೇರೆ ಹಾದಿಗಳಲ್ಲಿ 90 ನಗರಗಳನ್ನು ಅವು ತಲುಪಿದ್ದವು. ದಾರಿಯುದ್ದಕ್ಕೂ ಆಹಾರ, ಔಷಧಿ, ಬೈಸಿಕಲ್ಲುಗಳು ಮತ್ತು ಇತರ ಮಾನವೀಯ ಸಹಾಯ ಸಾಮಗ್ರಿಗಳನ್ನು ಕ್ಯೂಬಾಕ್ಕೆ ಕಳಿಸಲು ಸಂಗ್ರಹಿಸಿದವು.

ನ್ಯೂಯಾರ್ಕ್‌ನಿಂದ ಹೊರಟ ಕ್ಯಾರವಾನ್‌ನ ಮೊದಲ ನಿಲ್ದಾಣ, ಕ್ಯೂಬಾ- ವಿರೋಧಿ ಕಾನೂನು ಸೂಚಿಸಿದ ಸೆನೆಟರ್ ಟೊರಿಸೆಲ್ಲಿಯ ಮನೆಮುಂದೆ ಆಗಿತ್ತು. ನ್ಯೂಜೆರ್ಸಿ ಎಂಬ ನಗರದಲ್ಲಿ ಟೊರಿಸೆಲ್ಲಿ ಕಾನೂನು ಕ್ಯೂಬಾದ ವಿರುದ್ಧ ದಿಗ್ಬಂಧನ ಬಿಗಿಗೊಳಿಸಿದೆ. ಆತನ ಮನೆಯ ಮುಂದೆ ನಡೆದ ರ್‍ಯಾಲಿಯಲ್ಲಿ ಭಾಷಣಕಾರರು ನ್ಯೂಜೆರ್ಸಿಯಲ್ಲಿ ಜನರಿಗೆ ಬಂದಿರುವ ಅವಸ್ಥೆ ಕ್ಯೂಬಾದ ಜನರಿಗೆ ಬರಲು ಬಿಡವುದಿಲ್ಲ ಎಂದು ಶಪಥ ಮಾಡಿದರು. ನ್ಯೂಜೆರ್ಸಿ- ಮನೆ ಇಲ್ಲದವರು, ಬಡವರು ಮತ್ತು ಹಸಿದವರ ಬಗ್ಗೆ ಈ ಸೆನೆಟರ್ ಏನೂ ಮಾಡಿಲ್ಲ. ಈವರೆಗೆ ಸರ್ಕಾರಿ ಸಹಾಯ ಪಡೆಯುತ್ತಿದ್ದ 14 ಸಾವಿರ ಜನರು ಡಿಸೆಂಬರ್ 1 ರಿಂದ ಇದನ್ನು ಪಡೆಯಲಾಗುವುದಿಲ್ಲ-ಇದು ಟೊರಿಸೆಲ್ಲಿಯ ಸಾಧನೆ ಎಂದು ವ್ಯಂಗ್ಯವಾಡಿದರು. ಆದರೆ ಕ್ಯೂಬಾ ಅತ್ಯಂಥ ಕಷ್ಟ ಸನ್ನಿವೇಶದಲ್ಲೂ ಎಲ್ಲರಿಗೂ ಮನೆ, ಉಚಿತ ಶಿಕ್ಷಣ, ವೈದ್ಯಕೀಯ ನೆರವುಗಳ ಗ್ಯಾರಂಟಿಕೊಡುತ್ತದೆ. ಇಂತಹ ಕ್ಯೂಬಾದ ಜನತೆಗೆ ಸ್ವಾತಂತ್ರ್ಯಕ್ಕಾಗಿ, ಸೌರ್ವಭೌಮತೆ ಎತ್ತಿಹಿಡಿಯಲು ಈ ಕ್ಯಾರವಾನ್ ಹೊರಟಿದೆ.

ಕ್ಯೂಬಾ ಸೌಹಾರ್ದತೆ ಪ್ರಕಟಿಸುವುದು ಅಮೆರಿಕದಲ್ಲಿ ಕಾನೂನು ಬಾಹಿರ. ಅಂತಹವರನ್ನು ಬಂಧಿಸಬಹುದು. ಶಿಕ್ಷಿಸಬಹುದು. ಆದರೆ ಇದನ್ನೆಲ್ಲಾ ಎದುರಿಸಿ ಈ ಕ್ಯಾರವಾನ್ ಯಶಸ್ವಿಯಾಗಿದೆ.

ಮೆಕ್ಸಿಕನ್ ಪಾರ್ಲಿಮೆಂಟು ಟೊರಿಸೆಲ್ಲಿ ಕ್ಯೂಬಾ ವಿರೋಧಿ ದಿಗ್ಬಂಧನವನ್ನು ಖಂಡಿಸಿ ನಿರ್ಣಯ ಪಾಸು ಮಾಡಿದೆ. ಮೆಕ್ಸಿಕೋ ಸರಕಾರ 'ಕ್ಯಾರವಾನ್'ನ್ನು ಸ್ವಾಗತಿಸಿತ್ತು. ಗಡಿದಾಟುವ ಎಲ್ಲಾ ವೆಚ್ಚಗಳನ್ನು ಮನ್ನಾ ಮಾಡಿತ್ತು. ಈ ಕ್ಯಾರವಾನ್ ಅಮೆರಿಕನ್ ಆಳುವ ವರ್ಗಗಳು ಕ್ಯೂಬಾ ವಿರೋಧಿ ನೀತಿಯಲ್ಲಿ ಜಗತ್ತಿನಲ್ಲಿ ಎಷ್ಟು ಮೂಲೆ ಗುಂಪಾಗಿದ್ದಾರೆ ಎಂದು ತೋರಿಸುತ್ತದೆ.

ಸರ್ಬಿಯಾ ಅಧ್ಯಕ್ಷ- ಮಿಲೊಸೆವಿಕ್ ಪುನರಾಯ್ಕೆ

ಸರ್ಬಿಯಾದ ಅಧ್ಯಕ್ಷ ಸೋಶಲಿಸ್ಟ್ ಪಕ್ಷದ ಸ್ಲೊಬೊವನ್ ಮಿಲೊಸೆವಿಕ್ ಪುನರಾಯ್ಕೆಯಾಗಿದ್ದಾರೆ. ಅವರು ಮಿಲನ್ ಪ್ಲಾನಿಕ್‌ರನ್ನು ಭಾರಿ ಬಹುಮತದಿಂದ ಸೋಲಿಸಿದ್ದಾರೆ. ಮಿಲೊಸೆವಿಕ್ ಶೇಕಡಾ 56 ಮತ ಗಳಿಸಿದರೆ, ಪ್ಲಾನಿಕ್ ಶೇಕಡಾ 35 ಮತಗಳಿಸಿದ್ದಾರೆ. ಇವರು ಈಗ ಉಳಿದಿರುವ ಯುಗೋಸ್ಲಾವ್ ಒಕ್ಕೂಟದ ಉಳಿದ ಭಾಗದ ಪ್ರಧಾನಿಯಾಗಿದ್ದರು. ಮಿಲೊಸೆವಿಕ್ ಸೋಶಲಿಸ್ಟ್ ಪಕ್ಷದ (ಮಾಜಿ ಕಮ್ಯುನಿಸ್ಟ್ ಪಕ್ಷ) ಅಭ್ಯರ್ಥಿಯಾಗಿದ್ದರು. ಪ್ಲಾನಿಕ್ ವಿರೋಧ ಪಕ್ಷದ ಅಭ್ಯರ್ಥಿಯಾಗಿದ್ದು ಪಾಶ್ಚಿಮಾತ್ಯ ದೇಶಗಳ ಬೆಂಬಲಿಗರಾಗಿದ್ದರು. ಚುನಾವಣೆಗೆ ಮೊದಲು ಅಮೆರಿಕನ್ ವಿದೇಶ ಕಾರ್ಯದರ್ಶಿ ಪ್ಲೊನಿಕ್ ಸೋತರೆ ಸರ್ಬಿಯಾಕ್ಕೆ ಒಳ್ಳೆಯದಾಗಲಿಕ್ಕಿಲ್ಲ ಎಂಬ ಅರ್ಥ ಬರುವ ಮಾತು ವಿವಾದಾಸ್ಪದವಾಗಿತ್ತು. ಇದು ಸರ್ಬಿಯಾದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಎಂಬ ತೀವ್ರ ಕೋಪ ವ್ಯಕ್ತವಾಗಿತ್ತು. ಸರ್ಬಿಯನ್ ರಾಷ್ಟ್ರೀಯತಾವಾದದ ಈ ಅಲೆ ಪ್ಲಾನಿಕ್ ಅವರಿಗೆ ವಿರೋಧವಾಗಿರಬೇಕು ಎಂದು ಹೇಳಲಾಗಿದೆ. ಆದರೆ ನಿರೀಕ್ಷಿಸಬಹುದಾದಂತೆ ಅಮೆರಿಕನ್ ಮತ್ತುಯುರೋಪಿಯನ್ 'ಸ್ವತಂತ್ರ' ವೀಕ್ಷಕರು ಪಾಶ್ಚಿಮಾತ್ಯದ ಪರವಾಗಿರುವ ಅಭ್ಯರ್ಥಿ 'ಪ್ಲಾನಿಕ್' ಸೋತ ಮೇಲೆ ಚುನಾವಣೆ 'ಮುಕ್ತ ಹಾಗೂ ನ್ಯಾಯಯುತವಾಗಿಲ್ಲ' ಎಂಬ ಆಪಾದನೆ ಆರಂಭಿಸಿದ್ದಾರೆ.

ಇದರ ಜತೆಗೆ ನಡೆದ ಪಾರ್ಲಿಮೆಂಟ್ ಚುನಾವಣೆಯಲ್ಲೂ ಸೋಶಲಿಸ್ಟ್ ಪಕ್ಷ ಮತ್ತು ಅವರ ಮಿತ್ರ ಪಕ್ಷ ಸರ್ಬಿಯನ್ ರ್‍ಯಾಡಿಕಲ್ ಪಕ್ಷ ಅನುಕ್ರಮವಾಗಿ 100 ಮತ್ತು 74 ಸೀಟುಗಳನ್ನು ಗಳಿಸಿವೆ. ಪ್ರಬಲ ವಿರೋಧ ಪಕ್ಷ ಪಾಶ್ಚಿಮಾತ್ಯ-ಪರ ಪ್ರಜಾಸತ್ತಾತ್ಮಕ ಚಳುವಳಿ ಕೇವಲ 49 ಸೀಟುಗಳನ್ನು ಗಳಿಸಿದೆ. ಉಳಿದ ಸೀಟುಗಳು ಸಣ್ಣ ಪಕ್ಷಗಳಿಗೆ ಹೋಗಿವೆ. ಸೋಶಲಿಸ್ಟ್ ಪಕ್ಷ ಮತ್ತು ಅದರ ಮಿತ್ರಪಕ್ಷಗಳು ಪಾರ್ಲಿಮೆಂಟಿನಲ್ಲಿ ಬಹುಮತಗಳಿಸಿವೆ.

ಯುಗೋಸ್ಲಾವಿಯಾದ ಒಕ್ಕೂಟದ ಅತಿದೊಡ್ಡ ಗಣತಂತ್ರ ಸರ್ಬಿಯಾ, ತೀವ್ರ ಬಿಕ್ಕಟ್ಟಿನಲ್ಲಿದೆ. ಯುಗೋಸ್ಲಾವಿಯಾ ಒಕ್ಕೂಟ-ಪಾಶ್ಚಿಮಾತ್ಯ ಪಿತೂರಿ, ಬೇರೆ ಬೇರೆ ರಾಷ್ಟ್ರೀಯತೆಗಳನ್ನು ಎತ್ತಿಕಟ್ಟುವ ಕುತಂತ್ರಗಳಿಂದ ಛಿದ್ರವಾಗಿ ಹೋಗಿದ್ದು ತೀವ್ರ ಸಮಸ್ಯೆ ಉಂಟು ಮಾಡಿದೆ. ಆರ್ಥಿಕ ತೀವ್ರವಾಗಿ ಹದಗೆಟ್ಟಿದೆ. ರಾಷ್ಟ್ರೀಯತೆಗಳ, ಜನಾಂಗಗಳ ನಡುವೆ ಅಂತರ್ಯುದ್ಧ ಆರಂಭವಾಗಿದೆ. ಯುಗೋಸ್ಲಾವಿಯಾದ ಇತರ ಗಣತಂತ್ರಗಳ ಮೇಲೆ ಸರ್ಬಿಯಾ ಆಕ್ರಮಣ ಹರಿಬಿಟ್ಟಿದೆ ಎಂಬ ಆಪಾದನೆ ಸರ್ಬಿಯಾದ ಮೇಲಿದೆ. ಒಟ್ಟಾರೆ ಈ ರಾಷ್ಟ್ರೀಯವಾದಿ ಅಲೆಯಲ್ಲಿ ಸಮ್ರಾಜ್ಯಶಾಹಿ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು. ಸರ್ಬಿಯಾದ ಇಡೀ ಯುಗೋಸ್ಲಾವಿಯಾದ ದುರಂತಕ್ಕೆ ಕೊನೆಯಿಲ್ಲವೇ ಎಂಬ ಪ್ರಶ್ನೆ ಕಾಡತೊಡಗಿದೆ. ಮಿಲೊಸೆವಿಕ್ ಸರ್ಬಿಯನ್ ರಾಷ್ಟ್ರೀಯತಾವಾದಿ ಪ್ರತಿನಿಧಿಯಾಗಿ ಹೊರಹೊಮ್ಮಿದ್ದು, ಪಾಶ್ಚಿಮಾತ್ಯರ ಮಧ್ಯಪ್ರವೇಶವನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. ಇದರಿಂದ ಪಾಶ್ಚಿಮಾತ್ಯದೇಶಗಳ-ಸರ್ಬಿಯಾದ ನಡುವೆ ವಿರಸ ಇನ್ನೂ ಹೆಚ್ಚು ಬೆಳೆಯಬಹುದು.

ಗಡಿಪಾರಾದ ಪ್ಯಾಲೆಸ್ತೀನರ ಮುಗಿಯದ ವ್ಯಥೆ

ಇಸ್ರೇಲ್-ಲೆಬನಾನ್ ಅಂತರ್ರಾಷ್ಟ್ರೀಯ ಗಡಿಗಳ ನಡುವಣ ಜಾಗದಲ್ಲಿ ಟೆಂಟ್‌ಗಳಲ್ಲಿ ಕೊರೆಯುವ ಚಳಿ, ಆಹಾರ, ನೀರು ಔಷಧಿ ಜೀವನಾವಶ್ಯಕ ಸಾಮಗ್ರಿಗಳ ಅಭಾವದಲ್ಲಿ ನಲುಗಿಹೋಗುತ್ತಿರುವ ಗಡೀಪಾರಾದ 415 ಪ್ಯಾಲೆಸ್ತೀನರಿಗೆ ಕ್ರಿಸ್‌ಮಸ್ ಸಹ ಯಾವ ಆಶಾಕಿರಣ ತಂದಿಲ್ಲ. ಲೆಬನಾನ್ ಅವರನ್ನು ತೆಗೆದುಕೊಳ್ಳಲು ನಿರಾಕರಿಸಿದೆ. ಕೆಲವು ದಿನ ಅಂತರ್ರಾಷ್ಟ್ರೀಯ ಪರಿಹಾರ ಸಂಸ್ಥೆಗಳು ಕೊಡುತ್ತಿದ್ದ ಆಹಾರ, ಔಷಧಿಗಳು ಸರಬರಾಜು ಮಾಡಲು ಲೆಬನಾನ್, ಇಸ್ರೇಲ್ ಎರಡೂ ನಿರಾಕರಿಸಿವೆ.' ಈ ನಡುವೆ ನಿರೀಕ್ಷಿಸಿದಂತೆ ಇಸ್ರೇಲ್ ಸುಪ್ರೀಂಕೋರ್ಟ್ ಗಡಿಪಾರು ಕಾನೂನು ಬದ್ಧ ಎಂಬ ತೀರ್ಪುಕೊಟ್ಟಿದೆ.

ಇದು ಪಶ್ಚಿಮ ಏಶ್ಯಾದಲ್ಲಿ ಹೊಸ ಬಿಕ್ಕಟ್ಟು ಸೃಷ್ಟಿಸಿದೆ.

ಪಿಎಲ್‌ಒ ಗಡೀಪಾರಾದ ಪ್ಯಾಲೆಸ್ತೀನರನ್ನು ವಾಪಸು ತೆಗೆದುಕೊಳ್ಳುವವರೆಗೆ ಶಾಂತಿ ಮಾತುಕತೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದೆ. ಅರಬ್ ವಿದೇಶಮಂತ್ರಿಗಳ (ಸಿರಿಯಾ, ಲೆಬನಾನ್, ಜೋರ್ಡಾನ್, ಈಜಿಪ್ಟ್) ಸಭೆ ವಿಶ್ವಸಂಸ್ಥೆ ತನ್ನ ನಿರ್ಣಯವನ್ನು ಕಾರ್ಯಗತಗೊಳಿಸಬೇಕೆಂದು ಒತ್ತಾಯಮಾಡಿದೆ. ಇಸ್ರೇಲಿ ಗಡಿಪಾರಿನ ನಿರ್ಣಯವನ್ನು ಖಂಡಿಸಿ ಅದನ್ನು ವಾಪಾಸು ಪಡೆಯಬೇಕೆಂಬ ವಿಶ್ವಸಂಸ್ಥೆ ನಿರ್ಣಯ ಕಾಗದದ ಮೇಲೆ ಉಳಿದಿದೆ.

ಇಸ್ರೇಲ್ ಸರಕಾರ ಈ ಗಡೀಪಾರಿನ ಮೂಲಕ ಪಿ.ಎಲ್.ಒ ಮತ್ತು ಮುಸ್ಲಿಂ ಮೂಲಭೂತವಾದಿ ಗುಂಪು ಹಾಮಾಸ್ ನಡುವಣ ವಿರಸದ ಪ್ರಯೋಜನ ಪಡೆಯಬೇಕೆಂದು ಉದ್ದೇಶಿಸಿತ್ತು. ಆದರೆ ಈ ನಿರ್ಧಾರಕ್ಕೆ ಪ್ಯಾಲೆಸ್ತೀನ್ ಗುಂಪುಗಳ ಒಗ್ಗಟ್ಟಿನ ಎದುರಿಸುವಿಕೆ ಇಸ್ರೇಲ್ ಸರ್ಕಾರವನ್ನು ಪೇಚಿಗೆ ಸಿಕ್ಕಿಸಿದೆ. ಇಸ್ರೇಲ್ ಆಳುವ ರಂಗದಲ್ಲೇ ಬಿಕ್ಕಟ್ಟು ಆರಂಭ... ಗಿದೆ. ಗಡಿಪಾರನ್ನು ವಿರೋಧಿಸಿ, ಪಿ.ಎಲ್... ಜತೆ ಮಾತುಕತೆ ಬೆಂಬಲಿಸಿ ಎಡಪಂಥೀ... ಪಕ್ಷವೊಂದು ಒಕ್ಕೂಟದಿಂದ ಬೆಂಬಲವಾಪ... ತೆಗೆದುಕೊಳ್ಳುವ ಬೆದರಿಕೆ ಹಾಕಿದೆ.



ಸುಳ್ಳನಿಗೆ ಕಳ್ಳನಿಂದ ಮಾಫಿ!

ಇರಾನ್-ಕಾಂಟ್ರಾ ಹಗರಣ ಎಲ್ಲರಿಗೂ ಮರೆತಿರದೇಕು. ಇದರಲ್ಲಿ ಆಗಿನ ಅಧ್ಯ... ರೇಗನ್, ಈಗಿನ ಅಧ್ಯಕ್ಷ ಬುಶ್, ಇತರ ಹಿರಿಯ ಸಚಿವರು ಭಾಗಿಯಾಗಿದ್ದರು ಎಂಬ ಆರೋ... ಪವಿತ್ತು. ಈ ಬಗ್ಗೆ ಇನ್ನೂ ಫೆಡರಲ್ ವಿಚಾರಣೆ ನಡೆಯುತ್ತಿದೆ.

ಈ ಹಗರಣದಲ್ಲಿ ಆಗಿನ ರಕ್ಷಣಾ ಸಚಿವ ವೀನ್ ಬರ್ಗರ್ ವಿಚಾರಣಾ ಆಯೋಗ... ಸುಳ್ಳು ಹೇಳಿದ್ದು ಪುರಾವೆ ಆಗಿದೆ. ಈ ಆಪಾದನೆಯಿಂದ ಅವರಿಗೆ ವಿಮುಕ್ತಿಗೊಳಿಸುವ ಅಧ್ಯ... ಕ್ಷೀಯ ಆಜ್ಞೆಯನ್ನು ಅಧ್ಯಕ್ಷ ಬುಶ್ ತಮ್ಮ ಅಧಿಕಾರಾವಧಿಯ ಕೊನೆಯ ವಾರಗಳಲ್ಲಿ ಹೊರ... ಡಿಸಿದ್ದಾರೆ. ಈ ಹಗರಣದಲ್ಲಿ ಅಧ್ಯಕ್ಷ ಬುಶ್ ಸಹ ಆಪಾದಿತರು. ಅವರ ಬಗೆಗೂ ವಿಚಾರ... ನಡೆಯುತ್ತಿದೆ. ಹೇಗಿದೆ ? ಸುಳ್ಳನಿಗೆ ಕಳ್ಳನಿಂದ ಮಾಫಿ!

ಅಧ್ಯಕ್ಷ ಬುಶ್‌ರ ಈ ನಿರ್ಧಾರ ಅಮೇರಿಕದಲ್ಲೇ ಎಲ್ಲರೂ ಹುಬ್ಬೇರಿಸುವಂತೆ ಮಾಡಿ... ಈ ಹಗರಣದಲ್ಲಿ ತಮ್ಮ ಪಾತ್ರ ಮುಚ್ಚಿಕೊಳ್ಳಲು ಈ ನಿರ್ಧಾರ ಕೈಗೊಂಡಿದ್ದಾರೆ ಎಂಬ ತೀ... ಆಪಾದನೆಗಳೂ ಕೇಳಿ ಬಂದಿವೆ. ಹಲವಾರು ಪ್ರಮುಖ ಪತ್ರಿಕೆಗಳೂ ಇದು ಅಕ್ಷಮ್ಯ ನಿರ್ಧಾ... 'ತಮ್ಮನ್ನು ತಾವೇ ಮಾಫಿ ಮಾಡುವ ಈ ನಿರ್ಧಾರ ಹಾಸ್ಯಾಸ್ಪದ ಆದರೂ ಗಂಭೀರ' 'ಆಪಾ... ದಿತ ಬುಶ್ ಮತದಾರರ ತೀರ್ಪನ್ನು ತಪ್ಪಿಸಿಕೊಂಡರೂ, ಚರಿತ್ರೆಯ ತೀರ್ಪನ್ನು ತಪ್ಪಿಸಿಕೊ... ಳ್ಳಲು ಸಾಧ್ಯವಿಲ್ಲ' ಎಂಬ ತೀವ್ರ ಟೀಕೆಗಳನ್ನು ಮಾಡಿವೆ. ಚುನಾಯಿತ ಅಧ್ಯಕ್ಷ ಕ್ಲಿಂಟನ್ ಸಾ... ಈ ನಿರ್ಧಾರ ತಮಗಿಷ್ಟವಾಗಲಿಲ್ಲ, ಅಧಿಕಾರದಲ್ಲಿರುವವರು ಕಾನೂನಿಗಿಂತ ಹೊರತು ಎ... ಅಭಿಪ್ರಾಯ ಕೊಡುವ ನಿರ್ಧಾರ ಎಂದು ಹೇಳಬೇಕಾಗಿ ಬಂದಿದೆ.

ಇಂತಹ ತೀವ್ರ ಟೀಕೆಗಳಿಂದಾಗಿ ಬುಶ್ ವಿಚಾರಣಾ ಆಯೋಗಕ್ಕೆ ಸಲ್ಲಿಸುರವ ಎ... ಫೈಲುಗಳನ್ನು ಬಹಿರಂಗಗೊಳಿಸುವುದಾಗಿ ಘೋಷಿಸಿದ್ದಾರೆ. ಆದರೆ ಇದಕ್ಕೆ ಉತ್ತರವಾ... ವಿಚಾರಣೆ ನಡೆಸುತ್ತಿರುವ ಸ್ಪೆಷಲ್ ಪ್ರಾಸಿಕ್ಯೂಟರ್ ಹಲವು ಫೈಲುಗಳನ್ನು ಕಾನೂ...ವಿರುದ್ಧ... ವಾಗಿ ರಹಸ್ಯವಾಗಿಟ್ಟಿರುವ ಸಾಧ್ಯತೆ ಇದೆ ಎಂದಿದ್ದಾರೆ. ಇದಕ್ಕೆ ಬುಶ್ ಈ ವರೆಗೆ ಉತ್ತರಿಸಿಲ್ಲ...

ಅಮೆರಿಕನ್ ಪಾರ್ಲಿಮೆಂಟಿನ ಪ್ರತಿಬಂಧ ಧಿಕ್ಕರಿಸಿ ಇರಾನ್‌ಗೆ ಕಾನೂನುವಿರೋ... ಧವಾಗಿ ಶಸ್ತ್ರಾಸ್ತ್ರ ಸರಬರಾಜು ಮಾಡಿದ ಹಣದಲ್ಲಿ ನಿಕರಾಗುವದ ಕಾಂಟ್ರಾಗಳಿಗೆ ಸಹಾ... ಮಾಡಿದ ಹಗರಣವೇ ಇರಾನ್-ಕಾಂಟ್ರಾ ಹಗರಣ. ಇದರಲ್ಲಿ ಆಗಿನ ಅಧ್ಯಕ್ಷ ರೇಗನ್ ಉಪಾ... ಧ್ಯಕ್ಷ ಬುಶ್, ರಕ್ಷಣಾ ಸಚಿವ ವಿಾನ್‌ಬರ್ಗರ್ ಪ್ರಮುಖ ಆಪಾದಿತರು ಎಂದು ನೆನ್ನ... ಸಿಕೊಳ್ಳಬಹುದು.

ಭಾರತದಜನರ ಸೌಹಾರ್ದ ಭಾವನೆಗಳನ್ನು ಹೊತ್ತು ತಂದ "ಕೆರೇಬಿಯನ್ ಪ್ರಿನ್ಸೆಸ್"ಗೆ ಕ್ಯೂಬಾದಲ್ಲಿ ಭವ್ಯ ಸ್ವಾಗತ

ಭಾರತದ ಜನತೆ ಕ್ಯೂಬಾದ ವೀರ ಜನತೆಗೆ ಸೌಹಾರ್ದ ಉಡುಗೊರೆಯಾಗಿ ಸಂಗ್ರಹಿಸಿದ 10150 ಟನ್ ಆಹಾರಧಾನ್ಯಗಳನ್ನು ಹೊತ್ತ ಕ್ಯೂಬಾದ ಹಡಗು "ಕೆರಬಿಯನ್ ಪ್ರಿನ್ಸೆಸ್" ಕ್ಯೂಬಾವನ್ನು ಡಿಸೆಂಬರ್ 29ರಂದು ತಲುಪಿದೆ. ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ ಕ್ಯೂಬಾದ ಜನತೆ ಈ ಹಡಗಿಗೆ ಭವ್ಯ ಸ್ವಾಗತ ನೀಡಿದರು.


ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿಯ ಪರವಾಗಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಸಮಿತಿಯ ಸಂಯೋಜಕ, ಎಂ.ಎ.ಬೇಬಿ ಹಾಗೂ ಕಾಂಗ್ರೆಸ್(ಐ) ಮುಖಂಡ ಕೆ.ಎನ್.ಸಿಂಗ್‌ರವರಿದ್ದ ಮೂವರು ಸದಸ್ಯರ ಸಮಿತಿ ಈ ಸಮಾರಂಭದಲ್ಲಿ ಭಾಗವಹಿಸಿತು.

ಈ ಸಂದರ್ಭದಲ್ಲಿ ಮಾತನಾಡುತ್ತಾ ಸುರ್ಜಿತ್ ಇದು ಮಹಾನ್ ಕ್ಯೂಬಾ ಕ್ರಾಂತಿಗೆ ನಮ್ಮ ಬೆಂಬಲದ ಪ್ರತೀಕ ಎಂದರು. ಅಮೇರಿಕನ್ ನಿರ್ಬಂಧದ ವಿರುದ್ಧ ಕ್ಯೂಬಾ ಹೋರಾಟಕ್ಕೆ ನೆರವಾಗುವ ಪ್ರಚಾರಾಂದೋಲನ ಮುಂದುವರಿಯುತ್ತದೆ ಎಂದು ಅವರು ಹೇಳಿದರು.

ಸುರ್ಜಿತ್‌ರವರಿಗೆ ಉತ್ತರವಾಗಿ ಮಾತನಾಡಿದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಭಾರತದ ಈ ಕೊಡುಗೆ ಮೂರನೇ ಜಗತ್ತಿನ ನಮ್ಮೆರಡು ದೇಶಗಳ ನಡುವಿನ ಪರಸ್ಪರ ಬೆಂಬಲ, ಗೆಳೆತನ ಹಾಗೂ ಸೌಹಾರ್ದದ ಮಹಾನ್ ಕೊಡುಗೆ ಎಂದರು. ಭಾರತದ ನಿಯೋಗದ ಸದಸ್ಯರಿಗೆ ಕ್ಯೂಬಾ ಜನತೆಯ ಹಾರ್ದಿಕ ಕೃತಜ್ಞತೆ ಎಂದರು ಕ್ಯಾಸ್ಟ್ರೋ.

ಈ ಸ್ವಾಗತ ಸಮಾರಂಭದ ಮೊದಲು ಕ್ಯೂಬಾದ ಪ್ರಭುತ್ವ ಮಂಡಳಿ ಸುರ್ಜಿತ್ ಹಾಗೂ ಬೇಬಿಯವರಿಗೆ "ಗೆಳೆತನದ ಪದಕ"ವನ್ನು ಹಾಗೂ ಕೆ.ಎನ್.ಸಿಂಗ್‌ರಿಗೆ ಗೌರವ ಡಿಪ್ಲೋಮಾ ನೀಡಿ ಗೌರವಿಸಿತು. ಜನವರಿ 1ರಂದು ಕ್ಯೂಬಾ ಕ್ರಾಂತಿ ದಿನದ ಆಚರಣೆಯಲ್ಲಿ ಈ ಭಾರತೀಯ ನಿಯೋಗ ಪಾಲುಗೊಂಡಿತು.

ಹಿಂದಿನ ವಾರ ಸ್ಪೇನಿನ ಜನತೆ ಕಳಿಸಿದ ಸೌಹಾರ್ದಾ ಕೊಡುಗೆಯ ನಾಲ್ಕನೆ... ಕಂತನ್ನು ಸ್ವೀಕರಿಸುತ್ತಿದಾಗ ಫಿಡಲ್-ಕಾಸ್ಟ್ರೋ. ಈ ಕಂತಿನಲ್ಲಿ ಸ್ಪೇನಿನ ಜನತೆ... ಬಸ್ಸುಗಳನ್ನು ಕಳಿಸಿದ್ದರು.



ಹಿಂದಿನ ವಾರ ಸ್ಪೇನಿನ ಜನತೆ ಕಳಿಸಿದ ಸೌಹಾರ್ದ ಕೊಡುಗೆಯ ನಾಲ್ಕನೇ ಕಂತನ್ನು ಸ್ವೀಕರಿಸುತ್ತಿರುವ ಫಿಡೆಲ್ ಕ್ಯಾಸ್ಟ್ರೋ. ಈ ಕಂತಿನಲ್ಲಿ ಸ್ಪೇನಿನ ಜನತೆ ಬಸ್ಸುಗಳನ್ನು ಕಳಿಸಿದ್ದರು.

ಸೋವಿಯೆತ್ ಕಮ್ಯುನಿಸ್ಟ್ ನಿಷೇಧ 'ಕಾನೂನು ಬದ್ಧ' ರಶ್ಯನ್ ಕೋರ್ಟ್ ತೀರ್ಪು

ರಶ್ಯನ್ ಅಧ್ಯಕ್ಷ ಯೆಲ್ಟ್‌ಸಿನ್‌ರ ಮತ್ತು ಸಾಮ್ರಾಜ್ಯಶಾಹಿಗಳ ಭಾರಿ ಒತ್ತಡಕ್ಕೆ ಮಣಿದು ರಶ್ಯನ್ ಕೋರ್ಟ್ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧ ಕಾನೂನುಬದ್ಧ ಎಂದು 'ತೀರ್ಪು' ಇತ್ತಿದೆ. ಕಮ್ಯುನಿಸ್ಟರನ್ನು ದೇಟಿಯಾಡುವ ಯೆಲ್ಟ್‌ಸಿನ್‌ರ ಅಧಿಕಾರಶಾಹಿ ವರ್ತನೆಗೆ ಬಂದ ಭಾರಿ ಆಂತರಿಕ, ಅಂತರ್ರಾಷ್ಟ್ರೀಯ ಪ್ರತಿಭಟನೆಯಿಂದಾಗಿ ಕೋರ್ಟ್ ಒಂದು 'ರಾಜಿ' ತೀರ್ಮಾನಕ್ಕೆ ಬಂದಿದೆ. 'ಹಾವು ಸಾಯಬಾರದು ಕೋಲು ಮುರಿಯಬಾರದು' ಎಂಬಂತೆ ತೀರ್ಪಿನ ಪ್ರಕಾರ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ, ಪ್ರಾದೇಶಿಕ, ಜಿಲ್ಲಾ, ನಗರ ಸಮಿತಿಗಳನ್ನು ನಿಷೇಧಿಸಿದ್ದು 'ಕಾನೂನುಬದ್ಧ'ವಂತೆ! ಆದರೆ ಪ್ರಾಥಮಿಕ ಘಟಕಗಳನ್ನು ನಿಷೇಧಿಸಿದ್ದು ಕಾನೂನು ವಿರುದ್ಧವಂತೆ! ವಿಚಿತ್ರವಾದ ರಶ್ಯನ್ ನ್ಯಾಯ ನೀತಿ!

70 ವರ್ಷಗಳಿಗಿಂತಲೂ ಹೆಚ್ಚು ಕಾಲ ಕಷ್ಟಪಟ್ಟು ಕಮ್ಯುನಿಸ್ಟರು ಕೊಟ್ಟ 'ಪಾರ್ಟಿ ಫಂಡಿ'ಯಿಂದಲೇ ನಿರ್ಮಿಸಿದ್ದ ಹಲವಾರು ಪಾರ್ಟಿ ಆಸ್ತಿಗಳನ್ನು ಯೆಲ್ಟ್‌ಸಿನ್‌ರ ದರೋಡೆ ಗ್ಯಾಂಗ್ ರಾತ್ರೋರಾತ್ರಿ ದರೋಡೆ ಮಾಡಿದ್ದನ್ನು ಕೋರ್ಟ್ ಹೆಚ್ಚು ಕಡಿಮೆ ಕಾನೂನುಬದ್ಧ ಎಂದು ಸಾರಿದೆ. ಆದರೂ ಇನ್ನೂ ಕಾನೂನುಬದ್ಧವಾಗಿ ಉಳಿದಿರುವ ಪ್ರಾಥಮಿಕ ಸಂಘಟನೆಗಳು ಪಾರ್ಟಿ ಆಸ್ತಿ ಬಗ್ಗೆ ಕೋರ್ಟ್‌ಗಳಿಗೆ ಹೋಗಿ ಅದರ ಭಾಗವನ್ನು ಪಡೆಯಬಹುದು ಎಂದು ಕೋರ್ಟ್ ತೀರ್ಮಾನಿಸಿದೆ.

ಈ ಕೋರ್ಟ್ ತೀರ್ಮಾನ ಸೋವಿಯೆತ್ ಚರಿತ್ರೆಯಲ್ಲೇ ಏಕೆ ವಿಶ್ವ ಚರಿತ್ರೆಯಲ್ಲೇ ಆರು ತಿಂಗಳ ಕಾಲ ನಡೆದ ಅತ್ಯಂತ ಹಾಳ ವಿಚಾರಣೆಯೊಂದರ ಮೇಲೆ ತೆರೆ ಎಳೆದಂತಾಗಿದೆ. ವಿಚಾರಣೆ ನಡೆದ ಆರು ತಿಂಗಳ ಕಾಲ ಪಾರ್ಟಿಯ ದಸ್ತಾವೇಜುಗಳನ್ನು ಕದ್ದು ಅವನ್ನು ತಿರುಚಿ ನಡೆಸುತ್ತಿದ್ದ ಅತ್ಯಂತ ಅನ್ಯಾಯಯುತ ವಿಚಾರಣೆ ನಡೆಸಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶರಲ್ಲಿ ಇಬ್ಬರು ಮುಖ್ಯ ತೀರ್ಪಿನ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದ್ದು, ಅದನ್ನು ಪ್ರಕಟಿಸಿಲ್ಲ.

ಈ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಪಕ್ಷದ ಪ್ರಾಥಮಿಕ ಘಟಕಗಳು ನಗರ, ಜಿಲ್ಲಾ, ಪ್ರಾದೇಶಿಕ ಸಮ್ಮೇಳನಗಳನ್ನು ನಡೆಸಿ ಆ ಮಟ್ಟದ ಪಕ್ಷ ಸಮಿತಿಗಳನ್ನು ರಚಿಸಲಿವೆ. ಫೆಬ್ರವರಿಯಲ್ಲಿ ಪಕ್ಷದ ಮಹಾಧಿವೇಶನ ನಡೆಯಲಿದೆ.

ಇರಾಕಿ ವಿಮಾನ ಅಮೆರಿಕದಿಂದ ಕೆಳಕ್ಕೆ

ಇರಾಕಿ ಯುದ್ಧ ವಿಮಾನವೊಂದನ್ನು ಇರಾಕಿನ ದಕ್ಷಿಣ ಪ್ರದೇಶದಲ್ಲಿ ಹಾರಾಟವಾಡುತ್ತಿದ್ದಾಗ ಅಮೆರಿಕನ್ ಪಡೆಗಳು ಹೊಡೆದುರುಳಿಸಿವೆ. ಇರಾಕ್‌ನ ಕುರ್ದಿಶ್ ಜನಾಂಗೀಯ ಅಲ್ಪಸಂಖ್ಯಾತರು, ಮತ್ತು ಶಿಯಾ ಮುಸ್ಲಿಂ ಗೆರಿಲ್ಲಾಗಳ ವಿರುದ್ಧ ಸರ್ಕಾರ ಮಿಲಿಟರಿ ಕಾರ್ಯಾಚರಣೆ ನಡೆಸುವಂತೆ ವಿಶ್ವಸಂಸ್ಥೆ ಹಿಂದೆ, ಇರಾಕಿ ಯುದ್ಧ ವಿಮಾನಗಳ ಹಾರಾಟಕ್ಕೆ ಇರಾಕಿನ ಹಲವು ಪ್ರದೇಶಗಳಲ್ಲಿ ನಿಷೇಧ ಕೋರಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಈ ನಿಷೇಧವನ್ನು ಇರಾಕ್ ಈಗ ಉಲ್ಲಂಘಿಸಿದೆ ಎಂಬ ಆಪಾದನೆ ಮೇಲೆ ಅಮೆರಿಕನ್ ಪಡೆಗಳು ಇರಾಕಿ ಮಿಗ್ ವಿಮಾನವೊಂದನ್ನು ಹೊಡೆದುರುಳಿಸಿವೆ.

ಅಮೆರಿಕದ ಈ ಕ್ರಮ ಆಕ್ರಮಣವಲ್ಲದೆ ಇನ್ನೇನೂ ಅಲ್ಲ. ಅದಕ್ಕೆ ತಕ್ಕ ಸಮಯದಲ್ಲಿ ತಕ್ಕ ಪ್ರತೀಕಾರ ಮಾಡಲಾಗುವುದು ಇರಾಕ್ ಹೇಳಿದೆ. ತಮ್ಮ ದೇಶದಲ್ಲಿ ತಮ್ಮ ಯುದ್ಧ ವಿಮಾನ ಹಾರಾಟಕ್ಕೆ ನಿಷೇಧ ಹೇರುವ ಈ ಕ್ರಮ ದೇಶದ ಸಾರ್ವಭೌಮತೆ ಪ್ರಶ್ನಿಸಿದಂತೆ. ಅಮೇರಿಕಾದ ಈ ಕ್ರಮ ಅದರ ಇಬ್ಬಗೆ ನೀತಿಯನ್ನು ಸ್ಪಷ್ಟಪಡಿಸಿದೆ. 416 ಪ್ಯಾಲೆಸ್ಟೀನ್‌ರನ್ನು ಗಡಿಪಾರು ಮಾಡಿದ್ದನ್ನು ವಿಶ್ವಸಂಸ್ಥೆ ಖಂಡಿಸಿದರೂ, ಅದನ್ನು ನಿರ್ಲಕ್ಷಿಸಿರುವ ಇಸ್ರೇಲ್ ವಿರುದ್ಧ ಆರ್ಥಿಕ ಪ್ರತಿಬಂಧವಾಗಲಿ, ಮಿಲಿಟರಿ ಕಾರ್ಯಾಚರಣೆ ಬಗೆಗಾಗಲಿ ಚಕಾರವಿಲ್ಲ. ಆದರೆ ಇರಾಕ್ ತನ್ನ ದೇಶದೊಳಗೆ ಯುದ್ಧ ವಿಮಾನ ಹಾರಿದರೆ ಗುಂಡಿಟ್ಟು ಹೊಡೆದುರುಳಿಸಲಾಗುತ್ತಿದೆ.

ಈ ನಡುವೆ 86 ಯುದ್ಧ ವಿಮಾನಗಳನ್ನು ಹೊತ್ತ ದೊಡ್ಡ ಯುದ್ಧ ಹಡಗು ಕೊಲ್ಲಿಯತ್ತ ಸಾಗಿದೆ ಎಂದು ವರದಿಯಾಗಿದೆ. ಇರಾಕ್‌ಗೆ ಇನ್ನೊಮ್ಮೆ 'ಬುದ್ಧಿ ಕಲಿಸಲು' ಅಮೆರಿಕ ಸಜ್ಜಾಗುತ್ತಿರುವಂತಿದೆ.

ಚೆಕ್-ಸ್ಲಾವಾಕ್ ಗಣತಂತ್ರಗಳು ಪ್ರತ್ಯೇಕ

1993 ಚೆಕೋಸ್ಲಾವಾಕಿಯಾಗರಿಕರಿಗೆ ಹೊಸ ದುರಂತವೊಂದನ್ನು ತಂದಿದೆ. 1989 ರಲ್ಲಿ ಸಮಾಜವಾದದ ಪತನದ ನಂತರ ಆರ್ಥಿಕ ಸಂಕಟ ಹೇಳತೀರದು. ಅದು ಸಾಲದೆಂಬಂತೆ 74 ವರ್ಷದಿಂದ ಅಸ್ತಿತ್ವದಲ್ಲಿರುವ ಈ ದೇಶವನ್ನು ಇಬ್ಭಾಗಮಾಡಬೇಕೆಂದು ತೀರ್ಮಾನಿಸಲಾಗಿದೆ. ಚೆಕ್ ಗಣತಂತ್ರ ಮತ್ತು ಸ್ಲೋವಾಕ್ ಗಣತಂತ್ರ ಎಂಬ ಎರಡು ಪ್ರತ್ಯೇಕ ದೇಶಗಳು 1993 ಜನವರಿ 1 ರಿಂದ ಅಸ್ತಿತ್ವಕ್ಕೆ ಬಂದಿವೆ. ಬೇರೆ ಪೂರ್ವ ಯುರೋಪಿಯನ್ ದೇಶಗಳಂತೆ, ಬೂರ್ಜ್ವಾ ಪುನಃ ಸ್ಥಾಪನೆಯ ಪ್ರಯತ್ನದಲ್ಲಿ ಬೂರ್ಜ್ವಾ ಶಕ್ತಿಗಳು ಜನಾಂಗೀಯ ಪ್ರತ್ಯೇಕತೆಯನ್ನು ಬಳಿಸಲು ಪ್ರಯತ್ನಿಸಿದ್ದರ ಫಲ ಇದು.

ತಮ್ಮ ದೇಶವನ್ನು ಇಬ್ಭಾಗ ಮಾಡುವುದಕ್ಕೆ ಬಹುಸಂಖ್ಯಾತ ಜನರ ವಿರೋಧವಿದೆ ಎಂದು ಹಲವು ಸಮೀಕ್ಷೆಗಳಿಂದ ತಿಳಿದು ಬಂದಿದೆ. ಇಂತಹ ಪ್ರಮುಖ ಚಾರಿತ್ರಿಕ ನಿರ್ಧಾರಕ್ಕೆ ಜನಮತ ಸಂಗ್ರಹ ಮಾಡದೆ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ. ಮೊದಲ ಮಹಾಯುದ್ಧ ನಂತರ ಅಸ್ತಿತ್ವಕ್ಕೆ ಬಂದ ಚೆಕೋಸ್ಲಾವಾಕಿಯಾ ಇಲ್ಲವಾಗುವುದು ಹೊಸ ಸಮಸ್ಯೆಗಳನ್ನು ಸೃಷ್ಟಿಮಾಡಲಿದೆ. ಹೊಸ ಚೆಕ್, ಮತ್ತು ಸ್ಲೋವಾಕ್ ದೇಶಗಳಲ್ಲಿ ವಾಸಿಸಿರುವ ಅನುಕ್ರಮವಾಗಿ ಸ್ಲೋವಾಕ್ ಮತ್ತು ಚೆಕ್ ಅಲ್ಪಸಂಖ್ಯಾತರ ಸಮಸ್ಯೆಯುತ್ತೆಂದು ಎದ್ದು ನಿಲ್ಲಲಿದೆ. ರಾತ್ರೋರಾತ್ರಿ ಲಕ್ಷಾಂತರ ನಾಗರಿಕರು ತಮ್ಮ ದೇಶದಲ್ಲೆ ಅಲ್ಪಸಂಖ್ಯಾತರಾಗುತ್ತಾರೆ. ಒಂದು ರೀತಿಯಲ್ಲಿ ಎರಡನೇ ದರ್ಜೆ ಪ್ರಜೆಗಳಾಗುತ್ತಾರೆ. ಇದು ಸಾಲದೆಂಬಂತೆ ಏಳೂವರೆ ದಶಕಗಳಲ್ಲಿ ಒಂದೇ ದೇಶವಾಗಿದ್ದರಿಂದ ಭಾರಿ ಸಂಖ್ಯೆಯಲ್ಲಿ ಚೆಕ್-ಸ್ಲೋವಾಕ್ ಅಂತರ್ಜನಾಂಗೀಯ ಮದುವೆಗಳು ನಡೆದಿವೆ. 12 ರಲ್ಲಿ ಒಂದು ಇಂತಹ ಅಂತರ್ಜನಾಂಗೀಯ ಮದುವೆ. ಇದರಿಂದಾಗಿ ಹೆಚ್ಚು ಕಡಿಮೆ ಎಲ್ಲರಿಗೂ ಇನ್ನೊಂದು ಜನಾಂಗದ ಸಂಬಂಧಿಕರನ್ನು ಹೊಂದಿದ್ದಾರೆ. ಆರ್ಥಿಕವಾಗಿಯೂ ಈಗಾಗಲೇ ಬೂರ್ಜ್ವಾ ಪುನಃ ಸ್ಥಾಪನೆಯ ಪ್ರಯತ್ನದಿಂದ ಬಿಕ್ಕಟ್ಟಿಗೆ ಒಳಗಾಗಿದ್ದು, ಪರಿಸ್ಥಿತಿ ವಿಕೋಪಕ್ಕೆ ಹೋಗಲಿದೆ.

ನೇಪಾಳ ಕಾಂಗ್ರೆಸ್ ಸರ್ಕಾರದ ರಾಜೀನಾಮೆಗೆ ಆಗ್ರಹ

ನೇಪಾಳ ಕಾಂಗ್ರೆಸ್ ಸರಕಾರ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ನೇಪಾಳ ಸರಕಾರ ಭಾರತ ಸರ್ಕಾರ ಜತೆ ಮಾಡಿಕೊಂಡಿದ್ದ ತಾನಕಪುರ ಒಪ್ಪಂದ ಮಾಡಲು ಸರ್ಕಾರಕ್ಕೆ ಅಧಿಕಾರವಿಲ್ಲವೆಂಬ ಸುಪ್ರೀಂಕೋರ್ಟ್ ತೀರ್ಮಾನದಿಂದ ಈ ಸನ್ನಿವೇಶ ಉದ್ಭವಿಸಿದೆ. ಪ್ರಮುಖ ವಿರೋಧ ಪಕ್ಷ ಈ ತೀರ್ಪಿನಿಂದಾಗಿ ಸರ್ಕಾರ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸುತ್ತಿದೆ.

ತಾನಕಪುರ ಆಣೆಕಟ್ಟಿನ ನೀರು ಹಂಚಿಕೆ ಬಗ್ಗೆ ವಿವಾದ ಬ್ರಿಟಿಷ್ ಕಾಲದಿಂದಲೂ ಭಾರತ-ನೇಪಾಳಗಳೊಳಗೆ ಇರುವ ವಿವಾದ. ಈ ಆಣೆಕಟ್ಟು ಪೂರ್ತಿಯಾಗಿ ಭಾರತದಲ್ಲಿದ್ದರೂ ನದಿ ಭಾರತ-ನೇಪಾಳಗಳೆರಡಲ್ಲೂ ಹರಿಯುತ್ತಿದೆ. ಇಂತಹ ಒಪ್ಪಂದಕ್ಕೆ ಪಾರ್ಲಿಮೆಂಟ್ ಮೂರನೇ ಎರಡು ಭಾಗ ಬಹುಮತದಿಂದ ಅನುಮತಿ ನೀಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ವಿರೋಧಿ ಕಮ್ಯುನಿಸ್ಟ್ ಪಕ್ಷ ಇದನ್ನೇ ಹೇಳುತ್ತಾ ಬಂದಿತ್ತು. ಈ ಸಂವಿಧಾನದ ವಿಧಿಯನ್ನು ತಿರಸ್ಕರಿಸಿದ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯಲು ಹಕ್ಕಿಲ್ಲ ಎಂದು ಅದರ ವಾದ.

ಪೋಲೆಂಡ್‌ನಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರ ಮುಷ್ಕರ

ಪೋಲೆಂಡ್‌ನ 70 ದೊಡ್ಡ ಗಣಿಗಳಲ್ಲಿ 64 ಕಲ್ಲಿದ್ದಲು ಗಣಿಗಳ ಕಾರ್ಮಿಕರು ಮುಷ್ಕರ ಹೂಡಿದ್ದಾರೆ. 1989 ರಲ್ಲಿ ಸಮಾಜವಾದದ ಪತನದ ನಂತರ ಇದು ಅತಿ ದೊಡ್ಡ ಮುಷ್ಕರ ಎನ್ನಲಾಗಿದೆ. ರೈಲ್ವೇ ಕಾರ್ಮಿಕರೂ ಈ ಮುಷ್ಕರ ಸೇರಿಕೊಳ್ಳುತ್ತಾರೆ ಎನ್ನಲಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ ಕಲ್ಲಿದ್ದಲು ಗಣಿಗಳಲ್ಲಿ 1 ಲಕ್ಷ 80 ಸಾವಿರ ಉದ್ಯೋಗ ಕಡಿತವಾಗಬಹುದು ಮತ್ತು ಕೂಲಿ ಏರಿಕೆ ಬಗ್ಗೆ ಮುಷ್ಕರ ಹೂಡಲಾಗಿದೆ. ಪೋಲೆಂಡ್ ಸರ್ಕಾರ 70 ಗಣಿಗಳಲ್ಲಿ ಮಾತ್ರ ಲಾಭದಾಯಕ ಉಳಿದವು ಲಾಭದಾಯಕವಲ್ಲವಾದ್ದರಿಂದ ಮುಚ್ಚಬೇಕಾದೀತು ಎಂಬ ನಿರ್ಧಾರ ಮುಷ್ಕರಕ್ಕೆ ಕಾರಣವಾಗಿದೆ. ಈಗ ಕಲ್ಲಿದ್ದಲು ಗಣಿಗಳಲ್ಲಿ 3 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಸಮಾಜವಾದಿ ಅವಧಿಯಲ್ಲಿ ಈ ಕಾರ್ಮಿಕರು ಅತ್ಯಂತ ಹೆಚ್ಚು ವೇತನ ಪಡೆಯುತ್ತಿದ್ದ ಕಾರ್ಮಿಕರಾಗಿದ್ದರು.

ಜನವರಿ 1 - ಕ್ಯೂಬಾಕ್ರಾಂತಿಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಿಪಿಐ(ಎಂ) ಶುಭಾಶಯ

ವಿಮೋಚನಾ ಹೋರಾಟಗಾರರಿಗೆ ಆಶಾದೀಪವಾಗಿದೆ ಕ್ಯೂಬಾ

ಜನವರಿ 1 ರಂದು ಕ್ಯೂಬಾದ ಜನತೆ ಚಾರಿತ್ರಿಕ ಕ್ಯೂಬಾ ಕ್ರಾಂತಿ 37 ನೇ ವಾರ್ಷಿಕೋತ್ಸವವನ್ನು ಆಚರಿಸಿದೆ. ಈ ಸಂದರ್ಭದಲ್ಲಿ ಸಿಪಿಐ(ಎಂ) ಕ್ಯೂಬಾದ ಜನತೆಗೆ, ಅವರ ಮುಖಂಡರಿಗೆ ಕ್ಯೂಬಾ ಕಮ್ಯುನಿಸ್ಟ್ ಪಕ್ಷಕ್ಕೆ ತನ್ನ ಹಾರ್ದಿಕ ಕ್ರಾಂತಿಕಾರಿ ಶುಭಾಶಯಗಳನ್ನು ಕಳಿಸಿದೆ.

ಸಾಮ್ರಾಜ್ಯಶಾಹಿಯ ಹಿತ್ತಲಲ್ಲೇ ನಿಂತಿರುವ ಕ್ಯೂಬಾವನ್ನು ಬುಡಮೇಲು ಮಾಡಲು ಅಮೆರಿಕನ್ ಸಾಮ್ರಾಜ್ಯಶಾಹಿ ಕಳೆದ ಮೂರು ದಶಕಗಳಲ್ಲಿ ಮಾಡಿದ ಪ್ರಯತ್ನಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಸೋವಿಯೆತ್ ಒಕ್ಕೂಟದಲ್ಲಿ ಹಾಗೂ ಪೂರ್ವಯುರೋಪಿನಲ್ಲಿ ಸಮಾಜವಾದೀ ವ್ಯವಸ್ಥೆ ಕುಸಿದ ನಂತರ ಈ ಪ್ರಯತ್ನ ಅಮಾನವೀಯ ಸ್ವರೂಪ ಪಡೆದಿದೆ. ಹಿಂದಿನ ಸಮಾಜವಾದೀ ದೇಶಗಳಿಂದ ಬರುತ್ತಿದ್ದ ಅಗತ್ಯ ವಸ್ತುಗಳ ಪೂರೈಕೆ ನಿಂತುಹೋದುದರಿಂದ ತೀವ್ರ ತೊರದರೆಯಲ್ಲಿದ್ದ ಸಮಾಜವಾದೀ ಕ್ಯೂಬಾ ಕುತ್ತಿಗೆ ಹಿಸುಕಲು ಅಮೆರಿಕಾ ಆರ್ಥಿಕ ನಿರ್ಬಂಧ ಹಾಕಿತು. ಹಾಗೂ ಇತರರು ಈ ನಿರ್ಬಂಧವನ್ನು ಹಾಕುವಂತೆ ಹೆದರಿಸಲು ಪ್ರಯತ್ನಿಸಿತು. ಆದರೂ ಕ್ಯೂಬಾದ ವೀರ ಜನ ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಈ ಎಲ್ಲಾ ಪ್ರಯತ್ನಗಳನ್ನು, ಸಮಾಜವಾದವನ್ನು ಉಸಿರುಗಟ್ಟಿಸಿ ಸಾಯಿಸುವ ಪ್ರಯತ್ನಗಳನ್ನು ವಿಫಲಗೊಳಿಸಿ ಸಮಾಜವಾದೀ ಕ್ರಾಂತಿ ಫಲಗಳನ್ನು ರಕ್ಷಿಸಿಕೊಳ್ಳುವ ದೃಢ, ವೀರ ಪ್ರತಿಜ್ಞೆಗೈದ ಜನರ ವಿಮೋಚನೆಯ ಹುರುಪನ್ನು ಅಡಗಿಸಲು ಸಾಧ್ಯವಿಲ್ಲ ಎಂದು ಜಗತ್ತಿಗೆ, ವಿಮೋಚನೆಗಾಗಿ ಹೋರಾಡುತ್ತಿರುವ ಜನಗಳಿಗೆ ತೋರಿಸಿಕೊಟ್ಟರು ಎಂದು ಸಿಪಿಐ(ಎಂ) ನೆನಪಿಸಿಕೊಂಡಿದೆ.



ಫಿಡೆಲ್ ಕ್ಯಾಸ್ಟ್ರೋ ಸ್ಪೇನಿಗೆ ಇತ್ತೀಚೆಗೆ ಭೇಟಿ ನೀಡಿದಾಗ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಿದಾಗ ಚಪ್ಪಾಳೆ ತಟ್ಟಿ ಸೌಹಾರ್ದಗಳನ್ನು ವ್ಯಕ್ತಪಡಿಸುತ್ತಿರುವ ಸ್ಪೇನಿನ ಒಬ್ಬ ವೃದ್ಧ.

34 ವರ್ಷಗಳ ಹಿಂದೆ ಜನವರಿ 1, 1959 ರಂದು ವಿಶ್ವದ ಪ್ರತಿಗಾಮಿಗಳ ನಾಯಕ ಅಮೆರಿಕಾದ ಪಟದಿಂದ ಕೇವಲ 90 ಕಿ.ಮಿ.ದೂರದಲ್ಲಿ ಕ್ಯೂಬಾದ ಜನತೆ ಶೋಷಣೆಯ, ಗುಲಾಮಿಕೆಯ ನೊಗದಿಂದ ವಿಮೋಚನೆ ಪಡೆದು ಇತಿಹಾಸ ನಿರ್ಮಿಸಿದರು. ಅಂದಿನಿಂದ ಅಂಗುಲ ಅಂಗುಲ ಹೋರಾಡುತ್ತಾ ಅಮೆರಿಕಾ ಖಂಡವೇ ಕಂಡರಿಯದ ಶೋಷಣೆಯೆಂಬುದಿಲ್ಲದ ಒಂದು ವ್ಯವಸ್ಥೆಯನ್ನು ರಕ್ಷಿಸಿ ಕ್ರೋಢೀಕರಿಸಿದರು. ಸಮಾಜವಾದಕ್ಕೆ ಬದ್ಧವಾಗುವ ಕ್ಯೂಬಾದ ಜನ ವಿಶ್ವದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಮಾಜವಾದೀ ಶಕ್ತಿಗಳಿಗಾಗಿರುವ ಸೋಲಿನ ಹಿನ್ನೆಲೆಯಲ್ಲಿ ಸಮಾಜವಾದೀ ವ್ಯವಸ್ಥೆಯನ್ನು ರಕ್ಷಿಸುವ ಪ್ರಯತ್ನಗಳನ್ನು ದ್ವಿಮುಖಗೊಳಿಸಿದ್ದಾರೆ. ಅಮಾನವೀಯ ಸಾಮ್ರಾಜ್ಯಶಾಹಿ ಆರ್ಥಿಕ ನಿರ್ಬಂಧದಿಂದ ಅವರು ಪಡುತ್ತಿರುವ ಪಾಡು, ಮಾಡಬೇಕಾದ ತ್ಯಾಗ ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿಯ ನಿಜ ಕರಾಳ ರೂಪವನ್ನು ಎತ್ತಿತೋರಿದೆ ಮಾನವ ಘನತೆಯನ್ನು ಎತ್ತಿಹಿಡಿಯುವ, ಪ್ರತಿಯೊಂದು ದೇಶಕ್ಕೂ ತನ್ನ ಭವಿಷ್ಯವನ್ನು ತಾನೇ ನಿರ್ಧರಿಸುವ, ಹೋರಾಟ ಶಕ್ತಿಗಳ ಮಧ್ಯಪ್ರವೇಶವಿಲ್ಲದೆ ನಿರ್ಧರಿಸುವ ಹಕ್ಕು ಇದೆ ಎಂದು ಎತ್ತಿತೋರಿಸುವ ದೃಢ ಪ್ರತಿಜ್ಞೆಯ ಮಾಡಿರುವ ಕ್ಯೂಬಾ ಇಂದು ನಿಜಕ್ಕೂ ವಿಶ್ವಾದ್ಯಾಂತ ಹೋರಟನಿರತ ಜನಗಳಿಗೆ ದಾರೀದೀಪದಂತಿದೆ. ಮಾನವಕುಲದ ಉದ್ಧಾರ, ವಿಮೋಚನೆಯ ಗುರಿಯಿಟ್ಟುಕೊಂಡು ಹೋರಾಡುತ್ತಿರುವವರಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಯೇ ಮೊದಲ ಶತ್ರು ಎಂಬ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಮೆರಿಕಾ ಕ್ಯೂಬಾದ ಮೇಲೆ ಹೇರಿದ ಆರ್ಥಿಕ ನಿರ್ಬಂಧಗಳನ್ನು ವಿರೋಧಿಸುವ ನಿರ್ಣಯ ಕೈಗೊಳ್ಳುವ ಮೂಲಕ ಮತ್ತೊಮ್ಮೆ ಸಾಬಿತಾಗಿದೆ ಎಂದು ಸಿಪಿಐ(ಎಂ) ಕ್ಯೂಬಾದ ಕ್ರಾಂತಿಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಳಿಸಿರುವ ಶುಭಾಶಯ ಸಂದೇಶದಲ್ಲಿ ಹೇಳಿದೆ.

ಈ ಸಂದರ್ಭದಲ್ಲಿ ಕ್ಯೂಬಾದೊಂದಿಗೆ ಮಾತಿನಲ್ಲೂ ಕೃತಿಯಲ್ಲೂ ಸಿಪಿಐ(ಎಂ) ಸೌಹಾರ್ದ ಇಡೀ ಮಾನವ ಕುಲಕ್ಕೆ ಆಶಾದೀಪವಾಗಿರುವ ಕ್ಯೂಬಾದ ವೀರ ಜನತೆಯ ಬಗ್ಗೆ ನಮಗಿರುವ ಆದರ, ಅಭಿಮಾನದ ಸಂಕೇತ ಎಂದಿರುವ ಈ ಶುಭಾಷಯ ಸಂದೇಶ ಸಮಾಜವಾದಿ ಕ್ಯೂಬಾದೊಂದಿಗೆ ಸೌಹಾರ್ದವನ್ನು ಇನ್ನಷ್ಟು ಬಲಪಡಿಸುವ ಪಕ್ಷದ ದೃಢ ನಿರ್ಧಾರವನ್ನು ಪುನರುಚ್ಚರಿಸಿದೆ. ಇಂತಹ ಸೌಹಾರ್ದ ಶೋಷಣೆಯ ವಿರುದ್ಧ ಮತ್ತು ನೈಜ ಸ್ವಾತಂತ್ರ್ಯಕ್ಕಾಗಿ, ಮಾನವಘನತೆ, ಹಾಗೂ ಸಮೃದ್ಧಿಗಾಗಿ ವಿಶ್ವದ ಎಲ್ಲೆಡೆ ನಡೆಯುತ್ತಿರುವ ಜನಗಳ ಹೋರಾಟದ ಅವಿಭಾಜ್ಯ ಅಂಗ ಎಂದು ಸಿಪಿಐ(ಎಂ) ಶುಭಾಶಯ ಸಂದೇಶ ಅಭಿಪ್ರಾಯ ಪಟ್ಟಿದೆ.

KRNM/BGS-405 MAG(2) PRB DECR 319-78/79

ಮತೀಯ ಶಕ್ತಿಗಳ ವಿರುದ್ಧ ವ್ಯಾಪಕ ಕಾರ್ಯಕ್ರಮ

ಕೋಮುವಾದದ ವಿರುದ್ಧ ರಾಜ್ಯದಲ್ಲಿ 25 ಲಕ್ಷ ಸಹಿ

ಡಿ. 31 ಮತ್ತು ಜನವರಿ 1ರಂದು ಎಸ್.ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಮುಖ್ಯಮಂತ್ರಿ ಸ್ಥಾನದಿಂದ ಬಂಗಾರಪ್ಪನವರನ್ನು ತೆಗೆದು ಅವರ ಸ್ಥಾನಕ್ಕೆ ವೀರಪ್ಪ ಮೊಯಿಲಿಯವರನ್ನು ನೇಮಿಸಿದ ಪರಿಣಾಮವಾಗಿ ರಾಜ್ಯದಲ್ಲಾದ ಬದಲಾವಣೆ ಕುರಿತು ಹಾಗೆಯೇ ಅಕಾಲಿಕ ಮಳೆಯಿಂದಾದ ಅಪಾರ ಹಾನಿ, ಅಯೋಧ್ಯೆ ಘಟನೆಯಿಂದಾಗಿ ರಾಜ್ಯದಲ್ಲೂ ದೊಂಬಿ, ಬೆಂಕಿ ಅನಾಹುತ, ಆಸ್ತಿ ಪಾಸ್ತಿ-ಜೀವಕ್ಕೆ ಆದ ಹಾನಿಗಳ ಕುರಿತು ಚರ್ಚಿಸಿ ಅಭಿಪ್ರಾಯ ವ್ಯಕ್ತಮಾಡಿದೆ.

ಬಂಗಾರಪ್ಪನವರ ನಿರ್ಗಮವನ್ನು ಸ್ವಾಗತಿಸುತ್ತಾ ವೀರಪ್ಪ ಮೊಯಿಲಿಯವರು ರಾಜ್ಯದ ಆಡಳಿತೆಯಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರವನ್ನು ತೆಗೆದು ಹಾಕುವ, ಕೃಷಿ ಕಾರ್ಮಿಕರಿಗೆ, ಬಡ ರೈತರಿಗೆ ಪಟ್ಟಾ ವಿತರಣೆ ಮಾಡುವ, ಕನಿಷ್ಟ ವೇತನ ನಿರ್ಧರಿಸುವ, ಮುಚ್ಚಿರುವ ಕಾರ್ಖಾನೆಗಳನ್ನು ಪುನರಾರಂಭಿಸುವ, ಖಾಸಗೀಕರಣವನ್ನು ವಿರೋಧಿಸುವ ಜನಪರ ಕಾರ್ಯಗಳತ್ತ ಹೆಚ್ಚು ಗಮನ ಕೊಡುವಂತೆ ಒತ್ತಾಯಿಸಿದೆ.

ಅಕಾಲಿಕ ಮಳೆಯಿಂದಾಗಿ ಧಾರವಾಡ, ರಾಯಚೂರು, ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ, ತುಮಕೂರು ಮೊದಲಾದ ಜಿಲ್ಲೆಗಳಲ್ಲಿ ಬೆಳೆಗೆ ಮತ್ತು ಮನೆಮಠಗಳಿಗೆ ಅಪಾರ ಹಾನಿ ಸಂಭವಿಸಿದೆ. ರೈತರಿಗೆ, ಬಡ ಜನರಿಗೆಲ್ಲಾ ಹೆಚ್ಚಿನ ಹಾನಿಯಾಗಿದೆ. ನಾಲ್ಕೂವರೆ ಲಕ್ಷಕ್ಕಿಂತಲೂ ಹೆಚ್ಚು ಮನೆಗಳು ಬಿದ್ದಿವೆ. ಆದರೆ ಸರಕಾರದಿಂದ ಸಕಾಲದಲ್ಲಿ ಸರಿಯಾದ ಪರಿಹಾರ ಸಿಗಲಿಲ್ಲ. ಮುಖ್ಯಮಂತ್ರಿಯವರು ಆಶ್ವಾಸನೆ ಕೊಟ್ಟು ಬಂದಲ್ಲಿ ಕೂಡ ಪರಿಹಾರ ಸರಿಯಾಗಿ ವಿತರಣೆಯಾಗಿಲ್ಲವೆಂಬುದನ್ನು ರಾಜ್ಯ ಸಮಿತಿ ಖಂಡಿಸುತ್ತದೆ. ಬಡ ರೈತ ಮತ್ತು ಬಡ ಜನರಿಗಾದ ಹಾನಿಯ ಕುರಿತು ವರದಿ ತರಿಸಿ ಸರಿಯಾದ ಪರಿಹಾರ ಒದಗಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತದೆ.

ಡಿ.6ರಂದು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿದ ನಂತರ ನಮ್ಮ ರಾಜ್ಯದಲ್ಲಿಯೂ ಗಲಭೆಗಳಾಗಬಹುದಾಗಿದೆ. ಅದನ್ನು ಯಾವ ರೀತಿಯಲ್ಲಿ ಎದುರಿಸಬೇಕೆಂಬುದರ ಕುರಿತು ರಾಜ್ಯ ಸರಕಾರ ತುರ್ತು ಕ್ರಮ ತೆಗೆದುಕೊಳ್ಳುವುದರಲ್ಲಿ ಅಸಮರ್ಥವಾಗಿದೆ. ಅಯೋಧ್ಯೆಯ ಘಟನೆ ರಾಜ್ಯದಲ್ಲಿಯೂ ಕೆಟ್ಟ ಪರಿಣಾಮ ಬೀರಬಹುದೆಂಬ ವಿಚಾರದ ಕುರಿತು ಮೊಯಿಲಿ ಸರಕಾರ ಚಿಂತಿಸಿದಂತೆ ಕಾಣುವುದಿಲ್ಲ. ಕೋಮುವಾದಕ್ಕೆ ಒಲಿದ ಹೆಚ್ಚಿನ ಪೋಲೀಸರು ದಂಗೆಯನ್ನು ಸಮರ್ಥವಾಗಿ ಎದುರಿಸುವುದಿಲ್ಲ ವಿಫಲವಾಗಿದ್ದಾರೆ. ಬೀದರ್, ಗುಲ್ಬರ್ಗಾ, ಮೈಸೂರು, ದ.ಕ ಜಿಲ್ಲೆಗಳಲ್ಲಿ ಲೂಟಿ, ಅಗ್ನಿಸ್ಪರ್ಶ, ಹಲವೆಡೆ ಚಾಕು ಚೂರಿ ಇರಿತಗಳೆಲ್ಲಾ ನಡೆಯುತ್ತಿದ್ದಾಗ ಪೋಲೀಸರು ಪ್ರೇಕ್ಷಕರಾಗಿಯೇ ನಿಂತು ಏನೂ ಕ್ರಮ ತೆಗೆದುಕೊಳ್ಳದಿರುವುದು ಖಂಡನೀಯ. ಪೋಲೀಸರಲ್ಲಿರುವ ಇಂಥ ಕೋಮು ಭಾವನೆಗಳನ್ನು ಹಿಂದೂ ಇರಲಿ, ಮುಸ್ಲಿಮ್ ಇರಲಿ ತೆಗೆದುಹಾಕಲಿಕ್ಕೆ ತೀವ್ರ ಕ್ರಮ ಕೈಗೊಳ್ಳಬೇಕು. ಪೋಲೀಸರು ಗುಂಡೇಟಿನಿಂದ ಮೃತರಾದವರ ಸಂಖ್ಯೆಯೇ ಅಧಿಕವಾಗಿರುವುದು ಇದನ್ನು ಸಮರ್ಥಿಸುತ್ತದೆ.

ಪೋಲೀಸರು ನಿಷ್ಪಕ್ಷಪಾತದಿಂದ, ಧೈರ್ಯದಿಂದ ವರ್ತಿಸುತ್ತಿದ್ದರೆ ಬೇರೆ ಬೇರೆ ಜಿಲ್ಲೆಗಳಲ್ಲಾದ ಹಾನಿ, ಮನೆ ಮಠ ಹಾನಿಗಳನ್ನು ತಪ್ಪಿಸಬಹುದಿತ್ತೆಂದು ಸಮಿತಿ ಅಭಿಪ್ರಾಯಪಟ್ಟಿದೆ. ಈ ದಂಗೆಗಳ ಕುರಿತು ನ್ಯಾಯಾಂಗ ವಿಚಾರಣೆ ನಡೆಸಬೇಕೆಂದೂ, ಮೃತರ ಕುಟುಂಬದವರಿಗೆ ರೂ. 2 ಲಕ್ಷ ಪರಿಹಾರ ಧನ ಕೊಡಬೇಕೆಂದೂ ಸಮಿತಿ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಅಯೋಧ್ಯೆಯ ಗಲಭೆಯ ನಂತರ ಮತೀಯ ಶಕ್ತಿಗಳನ್ನೆದುರಿಸಲು, ಗಲಭೆ ತೀವ್ರಗೊಂಡು ವಿಸ್ತರಿಸದಂತೆ ನೋಡಿಕೊಳ್ಳುವ ಆಳುವ ಕಾಂಗ್ರೆ ಪಕ್ಷ ಏನೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ರಾಜ್ಯ ಸಮಿತಿ ಆಶ್ಚರ್ಯ ವ್ಯಕ್ತಪಡಿಸಿದೆ.

ಬೆಂಗಳೂರಿನಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು, ಸಾಹಿತಿಗಳ, ವಿಜ್ಞಾನಿಗಳ, ವಕೀಲರ, ಕಲಾಕಾರರ ಮತ್ತಿನ್ನಿತರರ ಜಾತ್ಯಾತೀತ ಶಕ್ತಿಗಳನ್ನೆಲ್ಲಾ ಸೇರಿಸಿ ಡಿ. 7ರಂದು ಇಂದಿನವರೆಗೂ ಕೋಮು ಸೌಹಾರ್ದತೆ ಸಮಾವೇಶ, ಪ್ರತಿದಿನ ಕಾಲ್ನಡಿಗೆ ಜಾಥಾಗಳನ್ನು ನಡೆಸುತ್ತಿರುವುದನ್ನು ಬೇರೆ ಜಿಲ್ಲೆಗಳಲ್ಲಿಯೂ ಅಂಥದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದನ್ನು ರಾಜ್ಯ ಸಮಿತಿ ಸ್ವಾಗತಿಸಿದೆ.

ದೇಶದಲ್ಲಿ ರಾಜ್ಯದಲ್ಲಿನೆರೆ ಹಾವಳಿ, ಕೋಮು ಗಲಭೆಗಳೆಲ್ಲಾ ನಡೆಯುತ್ತಿರುವಾಗ, ಅಂಥ ಗಂಡಾಂತರವನ್ನೆದುರಿಸಲು ಸಮರ್ಪಕ ಕಾರ್ಯಕ್ರಮ ಕೈಗೊಳ್ಳುವ ಹಾಗೆಯೇ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಸೇರಿಸಿ ಕೋಮು ಶಕ್ತಿಗಳನ್ನೆದುರಿಸಲು ಐಕ್ಯ ಕಾರ್ಯಾಚರಣೆ ನಡೆಸಬೇಕಾಗಿರುವ ಈ ಸಂದರ್ಭದಲ್ಲಿ ರಾಜ್ಯದ ಜನತಾದಳ ತನ್ನೊಳಗಿನ ಗುಂಪುಗಾರಿಕೆಯಲ್ಲೇ ತೊಡಗಿರುವುದಕ್ಕೆ ರಾಜ್ಯ ಸಮಿತಿ ಆತಂಕ ವ್ಯಕ್ತಪಡಿಸಿದೆ. ರಾಮಕೃಷ್ಣ ಹೆಗಡೆಯವರ ಹೇಳಿಕೆಗಳ ಕುರಿತು ಆಶ್ಚರ್ಯ ವ್ಯಕ್ತಪಡಿಸಿದೆ. ಮಾತ್ರವಲ್ಲ ಜನತಾದಳ ಸಕ್ರಿಯವಾಗಿ ಕೋಮು ಶಕ್ತಿಗಳ ವಿರುದ್ಧ ಹೋರಾಡಲು ಮುಂದೆ ಬರಬೇಕೆಂದು ಕೇಳಿಕೊಂಡಿದೆ.

ಡಿ. 19ರಂದು ದಿಲ್ಲಿಯಲ್ಲಿ ಸೇರಿದ ರಾಜಕೀಯ ಪಕ್ಷಗಳ ಮತ್ತು 34 ಕೇಂದ್ರ ಕಾರ್ಮಿಕ ಸಂಘಟನೆಗಳ ನಿರ್ಣಯವನ್ನು ಅಂದರೆ ಜನವರಿ ತಿಂಗಳಲ್ಲಿ ಕೋಮು ಶಕ್ತಿಗಳ ವಿರುದ್ಧ ಮನೆ ಮನೆಗಳಿಗೆ ಹೋಗಿ ಪ್ರಚಾರ, ಮುಂದಿನ ಎರಡು ವಾರ ಸಮಾವೇಶಗಳನ್ನು ನಡೆಸುವ ಹಾಗೆಯೇ ಕೋಮು ಸೌಹಾರ್ದತೆಗಾಗಿ ಸಹಿ ಸಂಗ್ರಹ ಮಾಡುವ ಕಾರ್ಯಕ್ರಮವನ್ನು ರಾಜ್ಯದಲ್ಲಿ ಜ್ಯಾರಿಯಲ್ಲಿ ತರಲು ವಿವರವಾದ ಕಾರ್ಯಕ್ರಮ ರೂಪಿಸಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಕೂಡಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕರೆ ನೀಡಿದೆ. ಎಲ್ಲರ ಜತೆ ಸೇರಿ 20 ಲಕ್ಷಕ್ಕೂ ಅಧಿಕ ಸಹಿ ಸಂಗ್ರಹ ಮಾಡಲು ಮುಂದಾಗಬೇಕೆಂದೂ ಕರೆ ನೀಡಿದೆ.

ಅರುಣ್‌ಶೌರಿಯವರ ನಿಜ ಬಣ್ಣ ಬಯಲು

ಶ್ರೀಯುತ ಅರುಣ್ ಶೌರಿಯವರು ಬೆಂಗಳೂರಿನಲ್ಲಿ "ವರ್ತಮಾನ" ವೇದಿಕೆ ಏರ್ಪಡಿಸಿದ್ದ ಸಭೆಯಲ್ಲಿ ಹಿಂದುತ್ವದ ಪ್ರತಿಪಾದನೆ ಮಾಡಿದರು. ಇವರು ದೊಡ್ಡ ಚರಿತ್ರೆಕಾರರಂತೆ ಬಾಬ್ರಿ ಮಸೀದಿ ಜಾಗದಲ್ಲಿ ದೇವಸ್ಥಾನ ಇತ್ತು ಎಂದೆಲ್ಲಾ ಮಾತನಾಡಿರುವುದು ಇವರ ತಿಳುವಳಿಕೆಯ ಬಗ್ಗೆಯೇ ಸಂದೇಹ ಪಡುವಂತಾಗಿದೆ. ಇವರ ಅಭಿಪ್ರಾಯ ಈ ದೇಶದ ಪ್ರತಿಭಾವಂತ ವಸ್ತುನಿಷ್ಟ ಚರಿತ್ರೆಕಾರರು ಪ್ರಾಚ್ಯ ವಸ್ತು ಸಂಶೋಧಕರು ನೀಡಿದ ಅಭಿಪ್ರಾಯಗಳಿಗೆ ವಿರುದ್ಧವಾಗಿದೆ. ಸತ್ಯಾಂಶ ಹೀಗಿದ್ದರೂ, ಇದನ್ನು ಪತ್ರಿಕೆಗಳು ಮರೆಮಾಚಿದೆ ಎಂದು ಹೇಳಿರುವುದನ್ನು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ಖಂಡಿಸಿದೆ.

ಅರುಣ್‌ಶೌರಿಯವರು ಪತ್ರಿಕಾಕರ್ತರ ಮೇಲೆ ನಡೆದ ಅಮಾನುಷ ದಬ್ಬಾಳಿಕೆ ಬಗ್ಗೆ ಚಕಾರ ಎತ್ತದಿರುವುದು ಅವರ ನಿಜವಾದ ಬಣ್ಣವನ್ನು ಬಯಲು ಮಾಡಿದೆ. ಎಲ್ಲಾ ಪ್ರಗತಿಪರ ಹಾಗೂ ಜಾತ್ಯಾತೀತ ಶಕ್ತಿಗಳು ಇಂತಹ ಹೇಳಿಕೆಗಳನ್ನು ಖಂಡಿ[illegible] ಜಾತ್ಯಾತೀತತೆಯ ರಕ್ಷಣೆಗಾಗಿ ಪಣ ತೊಡಬೇಕೆಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ಸೂರ್ಯನಾರಾಯಣರಾವ್ ಮನವಿ ಮಾಡಿದ್ದಾರೆ.

ಬಿಜೆಪಿಯ ಮುಸ್ಲಿಂ ಮುಖಂಡರನ್ನೇ ಬಲಿ ಪಡೆದ

ಕರಸೇವಕ ಭಯೋತ್ಪಾದಕರು!

ಅಯೋಧ್ಯೆಯಲ್ಲಿ ನಡೆದಿರುವುದು ಶುದ್ಧ 'ಹಿಂದೂ' ಭಯೋತ್ಪಾದನೆ, ಗೂಂಡಾಗಿರಿ, ಕುರುಡು ಹಿಂಸಾಚಾರ ಬಿಟ್ಟು ಮತ್ತೇನೂ ಅಲ್ಲ ಎಂಬುದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಬಿಜೆಪಿಯ ಅಲ್ಪಸಂಖ್ಯಾತ ಸೆಲ್(!)ನ ಹಿಂದಿನ ಅಧ್ಯಕ್ಷ ಹಾಗೂ ಅಯೋಧ್ಯೆಯ ಒಬ್ಬ ಪ್ರಮುಖ ಬಿಜೆಪಿ ಮುಂಖಡ ಹಸನ್ ಹೈದರ್‌ರವರ ಕೊಲೆ ಇದಕ್ಕೆ ಒಂದು ಉದಾಹರಣೆ.

ಹಸನ್ ಹೈದರ್ ಕರಸೇವೆಯಲ್ಲಿ ಭಾಗವಹಿಸುವುದಾಗಿ ಘೋಷಿಸಿದ್ದರು. ಆದರೆ ಬಾಬ್ರಿ ಮಸೀದಿ ಕೆಡವಿದ ದಿನ ಕರಸೇವಕ ಭಯೋತ್ಪಾದಕರಿಗೆ ಕಂಡದ್ದು ಅವರ ಮುಸ್ಲಿಂ ಚಹರೆಯಷ್ಟೇ. ಈ ಹಿಂಸಾಚಾರಿಗಳು ಅವರ ಮೇಲೆ ಹಲ್ಲೆ ಮಾಡಿದಾಗ ಕೆಲವು ಬಿಜೆಪಿ ಕಾರ್ಯಕರ್ತರು ಮಧ್ಯಪ್ರವೇಶಿಸಿ ಅವರೊಬ್ಬ ಬಿಜೆಪಿ ಮುಖಂಡರು ಎಂದು ತಿಳಿಸಲು ಪ್ರಯತ್ನಿಸಿದರೂ ಯಾವ ಕರಸೇವಕನೂ ಕಿವಿಗೊಡಲು ಸಿದ್ಧನಿರಲಿಲ್ಲವಂತೆ. ಅವರನ್ನು ಹೊಡೆದು ಸಾಯಿಸಿ ಈ 'ರಾಮಜನ್ಮಭೂಮಿ ಆಂದೋಲನ'ದ ನಿಜ ಸ್ವರೂಪವನ್ನು, ಬಿಜೆಪಿಯ 'ಸಾಚಾ ಜಾತ್ಯಾತೀತತೆ'ಯ ನಿಜವಾದ ಅರ್ಥವನ್ನು ಕಣ್ಣಿದ್ದ ಕುರುಡರನ್ನು ಬಿಟ್ಟು ವಿವೇಚನೆಯೆಂಬುದು ಸ್ವಲ್ಪವಾದರೂ ಇರುವ ಎಲ್ಲರಿಗೂ ಸಾರಿದರು. ಡಿಸೆಂಬರ್ 6ರಂದು ಆಸ್ಪತ್ರೆಗೆ ಸೇರಿಸಲ್ಪಟ್ಟ ಹೈದರ್ ಡಿಸೆಂಬರ್ 9ರಂದು ಕಾವುಆರಿಸಿಕೊಂಡ ಖೋಟಾ 'ಹಿಂದುತ್ವ'ಕ್ಕೆ ಬಲಿಯಾದರು.

ಕರಸೇವಕ ಭಯೋತ್ಪಾದನೆಯ ಇನ್ನೊಂದು ಅಂಶ ನೋಡಿ-

ಅಯೋಧ್ಯೆಯಲ್ಲಿ ಸುಮಾರು 300-400 ಮುಸಲ್ಮಾನರನ್ನು ಅವರ ಹಿಂದೂ ಗೆಳೆಯರು ಕಾಪಾಡಿದರು: ಆದರೆ ನಿರ್ಬಂಧಕ್ಕೊಳಗಾದ ಸಂಘಟನೆಗಳ ಕರಸೇವಕರು ದೇಶದಲ್ಲೆಲ್ಲಾ ತಮ್ಮ ಗೂಂಡಾ ಗಾಥೆಯನ್ನು ನಾಚಿಕೆಯಿಲ್ಲದೆ ಹೇಳಿಕೊಳ್ಳುತ್ತಿರುವಾಗ ವೀರಗಾಥೆಯನ್ನು ಹೇಳಿಕೊಳ್ಳಲೂ ಅಯೋಧ್ಯೆಯ ಈ ನಿಜವಾದ ಹಿಂದೂಗಳಿಗೆ ಭಯ. ಏಕೆಂದರೆ 'ಹಿಂದುತ್ವ'ದ ಗುತ್ತೇದಾರಿಕೆ ಕಸಿದುಕೊಂಡಿರುವ ಕರಸೇವಕ ಭಯೋತ್ಪಾಕರ ತ್ರಿಶೂಲಗಳ ಮುಂದಿನ ಬಲಿ ಈ ನಿಜವಾದ ಹಿಂದೂ ಜನರೇ - ಶ್ರೀರಾಮನ ಜನ್ಮಭೂಮಿಯಲ್ಲಿ ವಾಸಿಸುತ್ತಿರುವ ಹಿಂದೂ ಜನರೇ!

ಅಯೋಧ್ಯೆಯ ಆ ಐದು ಕರಾಳ ದಿನಗಳಲ್ಲಿ ಬಾಬ್ರಿ ಮಸೀದಿಯನ್ನು ಇತಿಹಾಸದ ಭಾಗವಾಗಿಸಿಬಿಟ್ಟ ಧರ್ಮದ ಗಂಧಗಾಳಿಯೂ ಇಲ್ಲದ ಕರಸೇವಕರ ದುರುಳ ಕೈಗಳು ಆ ಬಾಬ್ರಿ ಮಸೀದಿಯಲ್ಲಿ ಕೊನೆಯ ನಮಾಜು ಸಲ್ಲಿಸಿದ ಇಮಾಂ ಅಬ್ದುಲ್ ಗಫರ್ ಖಾನ್‌ರವರ ಇಬ್ಬರು ಮಕ್ಕಳನ್ನೂ ಆಹುತಿ ಪಡೆದು ಹಿಂದೂ ಧರ್ಮದ ಹೆಸರಿಗೆ ಇನ್ನಷ್ಟು ಕಳಂಕ ಹಚ್ಚಿದವು.

ಅಯೋಧ್ಯೆಯ 500 ಮುಸ್ಲಿಂ ಕುಟುಂಗಳ 4300 ಮಂದಿ ಈಗಲೂ ದೂರದ ಫೈಜಾಬಾದಿನ ಪರಿಹಾರ ಶಿಬಿರಗಳಲ್ಲಿ ದಿನಗಳೆಯುತ್ತಿದ್ದಾರೆ. ಅಯೋಧ್ಯೆಯಲ್ಲಿ ಅವರ ಮನೆ-ಮಾರುಗಳನ್ನೆಲ್ಲಾ ಕರಸೇವಕ ಭಯೋತ್ಪಾಕರು ಸಾಚಾ ಹಿಂಧೂ ಧಾರ್ಮಿಕ ಭಾವನೆಗಳ ಜೊತೆಗೇ ಸುಟ್ಟು ಭಸ್ಮಮಾಡಿದ್ದಾರೆ.

ಪರೀಕ್ಷಾ ಕಾಲವಿದು....................

.... ಪುಟ 3 ರಿಂದ

ಶಾಂತವಾಗಿದೆ. ಆದರೆ ಇದು ತಾತ್ಕಾಲಿಕ. ಯಾವಾಗ, ಎಲ್ಲಿ ಬೇಕಾದರೂ ಮತ್ತೆ ಇದೆಲ್ಲಾ ಭುಗಿಲೆನ್ನಬಹುದು. ಏಕೆಂದರೆ ಬಹುಪಾಲು ಜನಸಮೂಹಗಳ ಮನಸ್ಸೇ ಕೋಮುಗ್ರಸ್ತವಾಗಿದೆ. ಕಾರ್ಮಿಕರು ಕಾರ್ಮಿಕರಾಗಿಲ್ಲ, ಹಿಂದುವೋ, ಮುಸ್ಮಾನರೋ ಆಗಿದ್ದಾರೆ. ರೈತರು ರೈತರಾಗಿಲ್ಲ ಹಿಂದುವೋ, ಮುಸಲ್ಮಾನರೋ ಆಗಿದ್ದಾರೆ. ಇದೊಂದು ಭಯಾನಕ ಸನ್ನಿವೇಶ ಎಂದು ಪಿ.ಆರ್.ಸಿ. ಈಗಿನ ಸನ್ನಿವೇಶವನ್ನು ವರ್ಣಿಸಿದರು. ಇಂತಹ ಸ್ಥಿತಿಯಲ್ಲಿ ಇದುವರೆಗಿನ ಕಾಂಗ್ರೆಸ್‌ನ ಜನ ಬೆಂಬಲ ಕ್ಷೀಣಗೊಳ್ಳುತ್ತಿದೆ. ಇದರಿಂದ ಲಾಭ ಪಡೆಯುತ್ತಿರುವವರು ಜಾತ್ಯಾತೀತ-ಪ್ರಜಾಪ್ರಭುತ್ವ ಶಕ್ತಿಗಳಲ್ಲ, ಬದಲಾಗಿ ಬಿಜೆಪಿಯತ್ತಾ ಜನಬೆಂಬಲ ಸರಿಯುತ್ತಿದೆ. ಇದು ನಮ್ಮ ರಾಜಕೀಯ ವ್ಯವಸ್ಥೆಗೇ ಬಂದಿರುವ ಅಪಾಯ. ಕೋಮು ಧ್ರುವೀಕರಣವಾದಾಗಲೆಲ್ಲಾ ಪ್ರಯೋಜನವಾಗುವುದು ಕೋಮುವಾದಿ ಶಕ್ತಿಗಳಿಗೇ. ಆದ್ದರಿಂದ ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರುವ ಅಪಾಯ ಈಗ ಒಂದು ವಾಸ್ತವಿಕ ಸಂಗತಿ. ಇದು ಸಂವಿಧಾನಕ್ಕೆ ಜಾತ್ಯಾತೀತ ವ್ಯವಸ್ಥೆಗೆ ಬಂದಿರುವ ತೀವ್ರ ಅಪಾಯ. ದುರದೃಷ್ಟವಶಾತ್ ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಹಲವರಿಗೆ ಇನ್ನೂ ಅರಿವಾಗಿಲ್ಲ ಎಂದು ಕಾಂ.ಪಿ.ಆರ್.ಸಿ. ಖೇದ ವ್ಯಕ್ತಪಡಿಸಿದರು.

ಸಮಸ್ಯೆಗಳು

ಈ ಕ್ಲಿಷ್ಟ ಪರಿಸ್ಥಿತಿಯಲ್ಲೂ ಪಕ್ಷ ಹಲವು ರಾಜಕೀಯಪ್ರಶ್ನೆಗಳನ್ನು ಎದುರಿಸಬೇಕಾಯಿತು. ಡಿಸೆಂಬರ್ 6ರಂದೇ ಪೊಲಿಟ್‌ಬ್ಯೂರೋ ಸಭೆ ಸೇರಿತು. ರಾಷ್ಟ್ರಪತಿಗಳ ಬಳಿ ಎಡಪಕ್ಷಗಳು, ರಾಷ್ಟ್ರೀಯ ರಂಗದ ಕಾರ್ಯಾಚರಣೆ ನಡೆಸಿ ಎಂದು ಮನವಿ ಮಾಡಿಕೊಳ್ಳುವಂತಹ ವಿಶಿಷ್ಟ ಘಟನೆ ನಡೆಯಿತು. ಪಕ್ಷ ಪ್ರಧಾನಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿದರೂ ಇಂತಹ ಪರಿಸ್ಥಿತಿಯಲ್ಲಿ ದೇಶದ ಹಿತದೃಷ್ಟಿಯಿಂದ ಯಾವುದಕ್ಕೆ ಆದ್ಯತೆ ನೀಡಬೇಕು ಎಂಬ ಪ್ರಶ್ನೆ ಪಕ್ಷದ ಮುಂದಿತ್ತು ಎಂದು ಅವರು ವಿವರಿಸಿದರು.

ಸಂಸತ್ತಿನಲ್ಲಿ ಬಿಜೆಪಿಯ ಅವಿಶ್ವಾಸ ಠರಾವು, ಮಧ್ಯಪ್ರವೇಶ ಸರಕಾರಗಳ ವಜಾ ಇತ್ಯಾದಿ ಪ್ರಶ್ನೆಗಳನ್ನು ಕುರಿತಂತ ಎಡಪಕ್ಷ ತಳೆದ ನಿಲುವನ್ನು ಅದರ ಹಿನ್ನೆಲೆಯನ್ನು ಕಾಂ.ಪಿ.ಆರ್.ಸಿ. ವಿವರಿಸಿದರು. ಸಂಸತ್ತು ಈ ಘಟನೆಯನ್ನು ಖಂಡಿಸುವ ನಿರ್ಣಯ ಕೈಗೊಳ್ಳಬೇಕು ಎಂದು ನಾವು ಬಯಸಿದ್ದೆವು. ಇದನ್ನು ತಪ್ಪಿಸಲು ಬಿಜೆಪಿ ಅವಿಶ್ವಾಸ ಠರಾವು ತಂದಿತು. ಈ ಅವಿಶ್ವಾಸ ಠರಾವಿನ ಮುಖ್ಯ ಅಂಶ ಏನು? ಕೋಮುವಾದಿಗಳನ್ನು ಅದು ಎದುರಿಸಿದ ರೀತಿ ಸರಿಯಲ್ಲ, ಆದ್ದರಿಂದ ತನಗೆ ಈ ಸರಕಾರದಲ್ಲಿ ನಂಬಿಕೆಯಿಲ್ಲ ಎಂಬುದು ಬಿಜೆಪಿ ಠರಾವಿನ ಸಾರಾಂಶ. ಇದನ್ನು ಎಡಪಕ್ಷಗಳು ಹೇಗೆ ತಾನೇ ಬೆಂಬಲಿಸಲು ಅಥವಾ ತಟಸ್ಥವಾಗಿರಲು ಸಾಧ್ಯ? ತಟಸ್ಥವಿರುವುದೆಂದರೆ ದೇಶದ ಎದುರಿರುವ ಇಂತಹ ಗಹನ ಸಮಸ್ಯೆಯ ಬಗ್ಗೆ ನಮಗೆ ಏನೂ ಆತಂಕವೇ ಇಲ್ಲ ಎಂಬ ಬೇಜವಾಬ್ದಾರಿತನವಾಗುವುದಿಲ್ಲವೇ ಎಂದು ಅವರು ಪ್ರಶ್ನಿಸಿದರು. ಆದ್ದರಿಂದ ಅವಿಶ್ವಾಸ ಠರಾವಿನ ವಿರುದ್ಧ ಮತ ನೀಡಿದ್ದರ ಅರ್ಥ ನಮಗೆ ಈ ಸರಕಾರದಲ್ಲಿ ವಿಶ್ವಾಸವಿದೆಯೆಂ[illegible] ಅರ್ಥವಾಗುವುದಿಲ್ಲ ಎಂದರು.

ಬಿಜೆಪಿ ಸರಕಾರಗಳ ವಜಾ ಹಲವರಲ್ಲಿ ಗೊಂದಲ ಹುಟ್ಟಿಸಿರುವ ಇನ್ನೊಂದು ವಿಷಯ. ಮಧ್ಯಪ್ರದೇಶದಂತಹ ಒಂದು ದೊಡ್ಡ ರಾಜ್ಯ ಸಂವಿಧಾನವನ್ನೇ ಬುಡಮೇಲು ಮಾಡಿ ಕೋಮುವಾದಿಗಳಿಗೆ ಸಕಲ ಅನುಕೂಲ ಕೊಡುತ್ತಿದ್ದಾರೆ. ಅದಕ್ಕೆ ಅವಕಾಶ ನೀಡಿಬೇಕಿತ್ತೇ ಎನ್ನುತ್ತಾ ಬೇಗೆ ತಮ್ಮ ಅಧಿಕಾರವನ್ನು ಕೋಮುವಾದಿಗಳಿಗೆ ನೆರವಾಗಲು ದುರುಪಯೋಪಡಿಸಲಾಗಿತ್ತು ಎಂಬುದರ ಬಗ್ಗೆ ಒಂದು ಉದಾಹರಣೆ ನೀಡಿದರು: ಭೂಪಾಲ ನಗರದಲ್ಲಿ ಒಟ್ಟು 10 ಸಾವಿರ ಕರ್ಫ್ಯೂ ಪಾಸ್‌ಗಳನ್ನು ನೀಡಲಾಗಿತ್ತು. ಅದರಲ್ಲಿ 7000ಕ್ಕಿಂತಲೂ ಹೆಚ್ಚು ಬಿಜೆಪಿ ಕೂಟದವರಿಗೆ ನೀಡಲಾಗಿತ್ತು. ಇಂತಹ ದುರುಪಯೋಗವನ್ನು ಮುಂದುವರಿಸಲು ಅವಕಾಶ ಕೊಡಬೇಕಾಗಿತ್ತೇ? ರಾಷ್ಟ್ರೀಯ ಸಮಗ್ರತಾ ಮಂಡಳಿ ಕೋಮುವಾದವನ್ನು ಎದುರಿಸಲು ಸಂವಿಧಾನವನ್ನು ರಕ್ಷಿಸಲು ಎಲ್ಲಾ ಕ್ರಮ ಕೈಗೊಳ್ಳಲು ಆದೇಶ ನೀಡಿರುವಾಗ [illegible] ಸರಕಾರಗಳ ವಜಾವನ್ನು ಸ್ವಾಗತಿಸದಿರುವುದು ಹೇಗೆ ಸಾಧ್ಯ? ಇದು ಸಂತೋಷದ ಸಂಗತಿಯೇನಲ್ಲ. ಆದರೆ ಅತೀ ಅಗತ್ಯವಾಗಿದ್ದ ಕ್ರಮ ಎಂದು ಕಾಂ.ಪಿ.ರಾಮಚಂದ್ರನ್ ಹೇಳಿದರು.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462
ಸಂಪಾದಕರು : ಪಿ.ರಾಮಚಂದ್ರರಾವ್